ಜನಶಕ್ತಿ

ಮಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 ಸಂಚಿಕೆ 6 | ಫೆಬ್ರವರಿ 7, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಮಾಧ್ಯಮಗಳ ಭಯೋತ್ಪಾದನೆ



INVEST KARNATAKA 2016

GLOBAL INVESTORS MEET

3rd to 5th FEBRUARY 2016

ಬಂಡವಾಳ ಹೂಡಿಕೆ : ಭ್ರಮೆ ಮತ್ತು ವಾಸ್ತವ



ಪಂಚಾಯತ್ : ಎಡ ಅಭ್ಯರ್ಥಿಗಳನ್ನು ಆರಿಸಿ

ಮಧುರೈ ರ್‍ಯಾಲಿ : ಹೊಸ ಪರ್ಯಾಯ ಎಂ.ಎನ್.ಕೆ.

ಶಾರದಾ ಚಿಟ್ ಫಂಡ್ : ಸಿಬಿಐಗೇ ಜನರ ನೋಟಿಸ್



ಬಂಡಾರು, ಸ್ಮೃತಿ ತೊಲಗಬೇಕು : ಕಾರಟ್

‘ದಿವ್ಯಾಂಗ’ರು: ಪದ ಬದಲಾವಣೆ ತಾರತಮ್ಯವನ್ನು ಕೊನೆಗೊಳಿಸದು -ಪ್ರಧಾನ ಮಂತ್ರಿಗಳಿಗೆ ಎನ್‌ಪಿಆರ್‌ಡಿ ಪತ್ರ

ಕಳೆದ ತಿಂಗಳ ‘ಮನ್ ಕೀ ಬಾತ್’ನಲ್ಲಿ ಪ್ರಧಾನ ಮಂತ್ರಿಗಳು ವಿಕಲಾಂಗರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತ “ನಾವು ಯಾಕೆ ವಿಕಲಾಂಗ ಎಂಬ ಪದದ ಬದಲು ದಿವ್ಯಾಂಗ ಎಂದು ಬಳಸಬಾರದು? ಈ ಮಂದಿ ತಮ್ಮ ಒಂದಿಲ್ಲೊಂದು ಅಂಗದಲ್ಲಿ ದಿವ್ಯಶಕ್ತಿಯುನ್ನು ಪಡೆದಿರುವವರು” ಎಂದರು. ಈಗ ಸರಕಾರದ ಎಲ್ಲ ಕಾರ್ಯಕ್ರಮಗಳಲ್ಲಿ ಅದೇ ಪದ ಬಳಕೆಯಾಗುತ್ತಿದೆ, ಮಾಧ್ಯಮಗಳಲ್ಲಿ ಕೂಡ ಕೆಲವರು ಅದನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಇದು ವಿಕಲಾಂಗರ ಹಕ್ಕುಗಳನ್ನು ಬದಿಗೆ ತಳ್ಳಿ ಅವರನ್ನು ಸಮಾಜದ ‘ಕೃಪೆ’ಗೆ, ‘ಉದಾರತೆ’ಗೆ ಒಳಪಡಿಸುತ್ತದೆ ಎಂದು ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದೆ.

ವಿಕಲಾಂಗತೆ ಒಂದು ದೈವಿಕ ಕೊಡುಗೆಯೇನೂ ಅಲ್ಲ. ‘ದಿವ್ಯಾಂಗ’ ಎಂಬಿತ್ಯಾದಿ ಪದಬಳಕೆಯಿಂದ ವಿಕಲಾಂಗತೆಗೆ ಹಚ್ಚಿರುವ ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ’ಕಳಂಕಗಳನ್ನು ನಿವಾರಿಸುವುದಾಗಲೀ, ಅದರಿಂದ ಬಂದಿರುವ ತಾರತಮ್ಯವನ್ನು ತೊಡೆದು ಹಾಕುವುದಾಗಲೀ ಸಾಧ್ಯವಿಲ್ಲ. ಕೆಲವು ವಿಕಲಾಂಗರು ಈ ತಾರತಮ್ಯಗಳನ್ನೂ ಎದುರಿಸಿ ಸಾಧನೆಗಳನ್ನು ಮಾಡಿದ್ದರೆ ಅದು ಅವರ ಧೀರ ಪ್ರಯತ್ನಗಳಿಂದಲೇ ಹೊರತು ದೈವಿಕ ಶಕ್ತಿಯಿಂದಲ್ಲ. ವಿಕಲಾಂಗರಿಗೆ ಬೇಕಿರುವುದು ಇಂತಹ ಪದಗಳ ಮೂಲಕ ತೋರುವ ‘ಸಹಾನುಭೂತಿ, ಅಥವ ‘ಕೃಪೆ’ಗಳಲ್ಲ, ಅವರು ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಇರುವ ಅಡೆ–ತಡೆಗಳ ನಿವಾರಣೆ ಬಯಸುತ್ತಾರೆ ಎಂದು ನೆನಪಿಸಿರುವ ಎನ್‌ಪಿಆರ್‌ಡಿ ಇಂತಹ ಪದ ಬಳಕೆಗೆ ವಿರೋಧ ಬಂದಿರುವುದು ಕೇವಲ ತಮ್ಮ ಸಂಘಟನೆಯಿಂದ ಮಾತ್ರವಲ್ಲ, ಇತರ ಹಲವು ಸಂಘಟನೆಗಳೂ, ವ್ಯಕ್ತಿಗಳೂ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

‘ದಯವಿಟ್ಟು ‘ದಿವ್ಯಾಂಗ’ರು ಎಂದು ಬಳಸದಿರಿ, ಮತ್ತು ಈ ಪದವನ್ನು ಅಧಿಕೃತಗೊಳಿಸುವ ಯೋಜನೆಯೇನಾದರೂ ಇದ್ದರೆ ಅದನ್ನು ಕೈಬಿಡಿ’ ಎಂದು ಎನ್‌ಪಿಆರ್‌ಡಿ ಪ್ರಧಾನ ಮಂತ್ರಿಗಳನ್ನು ಕೇಳಿಕೊಂಡಿದೆ. ■



‘ಪರ್ಯಾಯ ರಾಜಕಾರಣ, ಪರ್ಯಾಯ ಧೋರಣೆಗಳು’

ಮಧುರೈನಲ್ಲಿ ಹತ್ತು ಲಕ್ಷ ಜನರ ರ್‍ಯಾಲಿ

ತಮಿಳುನಾಡಿನ ಮಧುರೈ ನಗರದಲ್ಲಿ ಜನವರಿ 26ರಂದು ಒಂದು ಬೃಹತ್ ರ್‍ಯಾಲಿ ನಡೆಯಿತು. ಇದರಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನಗಳು ಭಾಗವಹಿಸಿದ್ದರು ಎಂದು ವರದಿಯಾಗಿದೆ. ‘ಜನತಾ ಕಲ್ಯಾಣ ಮೈತ್ರಿಕೂಟ’ (ಎಂಎನ್‌ಕೆ) ‘ಪರ್ಯಾಯ ರಾಜಕಾರಣ, ಪರ್ಯಾಯ ಧೋರಣೆಗಳು’ ಎಂಬ ಘೋಷಣೆಯೊಂದಿಗೆ ಈ ರ್‍ಯಾಲಿಯನ್ನು ಸಂಘಟಿಸಿತ್ತು. ಡಿಎಂಕೆ ಮತ್ತು ಎಐಎಡಿಎಂಕೆ ಬಿಟ್ಟು ಇತರ ಪ್ರಾದೇಶಿಕ ಪಕ್ಷಗಳೊಂದಿಗೆ ಎಡಪಕ್ಷಗಳಾದ ಸಿಪಿಐ(ಎಂ) ಮತ್ತು ಸಿಪಿಐ ಸೇರಿಕೊಂಡು ಈ ಮೈತ್ರಿಕೂಟ ರಚಿಸಿಕೊಂಡು ಪರ್ಯಾಯ ಧೋರಣೆಗಳ ಬಗ್ಗೆ ರಾಜ್ಯಾದ್ಯಂತ ಹೋರಾಟ, ಪ್ರಚಾರಗಳನ್ನು ನಡೆಸುತ್ತಿದೆ.

ಜನವರಿ 26 ರ ಈ ರ್‍ಯಾಲಿಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ ಭಾಗವಹಿಸಿದರು. ಈ ಮೈತ್ರಿಕೂಟದ ಸಂಯೋಜಕರಾಗಿರುವ ವೈಕೋ ಅಧ್ಯಕ್ಷತೆ ವಹಿಸಿದ್ದರು.

ತಮಿಳುನಾಡಿನ ಜನತೆ ಇದುವರೆಗೆ ಡಿಎಂಕೆ ನೇತೃತ್ವದ ಕೂಟ ಅಥವ ಎಐಡಿಎಂಕೆ ನೇತೃತ್ವದ ಕೂಟ ಇವೆರಡರಲ್ಲಿ ಒಂದನ್ನೇ ಆರಿಸಿಕೊಳ್ಳಬೇಕಾಗಿತ್ತು. ಆದರೆ ಇವೆರಡೂ ಭ್ರಷ್ಟಾಚಾರವನ್ನು ಒಂದು ಕಲಾಪ್ರಾಕಾರವಾಗಿ ಮಾರ್ಪಡಿಸಿವೆ. ಅವೆರಡೂ ಅನುಸರಿಸುವ ಆರ್ಥಿಕ ಧೋರಣೆಗಳಲ್ಲೂ ಏನೂ ವ್ಯತ್ಯಾಸವಿಲ್ಲ. ಈಗ ಆಳುವ ಪಕ್ಷ ಕೇಂದ್ರದಲ್ಲಿ ಆಳುತ್ತಿರುವ ಒಂದೆಡೆಯಲ್ಲಿ ಜನರಿಗೆ ತೊಂದರೆ ಕಲ್ಪಿಸುವ ಆರ್ಥಿಕ ನೀತಿಗಳು ಮತ್ತು ಇನ್ನೊಂದೆಡೆಯಲ್ಲಿ ವಿಷಕಾರಿ ಸಾಮಾಜಿಕ ಧೋರಣೆಗಳನ್ನು ಹೊಂದಿರುವ ಪಕ್ಷವನ್ನು ಓಲೈಸುವ ಪ್ರಯತ್ನ ನಡೆಸಿದೆ. ಇಂತಹ ಸನ್ನಿವೇಶದಲ್ಲಿ ಮಧುರೈ ರ್‍ಯಾಲಿ ಅಪಾರ ಜನಸ್ಪಂದನ ಗಳಿಸಿದೆ ಎಂದಿರುವ ಸೀತಾರಾಮ್ ಯೆಚೂರಿಯವರು ಭಾರತವನ್ನು ಉಳಿಸಲು ಮತ್ತು ಒಂದು ಉತ್ತಮ ಭವಿಷ್ಯ ನಿರ್ಮಿಸಲು ಪರ್ಯಾಯ ಧೋರಣೆಗಳು ಅತ್ಯವಶ್ಯಕ ಎಂದಿದ್ದಾರೆ. ●



ಮಹಿಳೆಯರಿಗೆ ಗರ್ಭಗುಡಿ ಪ್ರವೇಶ ನಿರಾಕರಣೆ: ಮಹಾರಾಷ್ಟ್ರ ಮಂತ್ರಿಗಳ ಸಮರ್ಥನೆಗೆ ಎಐಡಿಡಬ್ಲ್ಯುಎ ಖಂಡನೆ


ಮಹಾರಾಷ್ಟ್ರದ ಅಹಮ್ಮದ್‌ನಗರ ಜಿಲ್ಲೆಯಲ್ಲಿರುವ ಶನಿ ಶಿಂಗ್ನಾಪುರ ದೇವಸ್ಥಾನದ ‘ಚೌಥಾರ’ (ಪವಿತ್ರ ಚೌಕ)ಕ್ಕೆ ಮಹಿಳೆಯರ ಪ್ರವೇಶವನ್ನು ನಿಷೇಧಿಸಿರುವ ಪದ್ಧತಿಯನ್ನು ಕೊನೆಗಾಣಿಸಬೇಕು ಎಂದು ಆಗ್ರಹಿಸಿ ಬಹಳ ಸಮಯದಿಂದ ಚಳುವಳಿ ನಡೆಯುತ್ತಿದೆ. ಜನವರಿ 26ರಂದು ‘ರಣರಾಗಿಣಿ ಭೂಮಾತಾ ಬ್ರಿಗೇಡ್’ ಎಂಬ ಮಹಿಳಾ ತಂಡದ ಸುಮಾರು 500 ಮಹಿಳೆಯರು ಈ ‘ಚೌಥಾರ’ವನ್ನು ಪ್ರವೇಶಿಸಿ ಈ ನಿಷೇಧವನ್ನು ಮುರಿಯುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಅದರೆ ಮಹಾರಾಷ್ಟ್ರ ಸರಕಾರ 70ಕಿ.ಮೀ. ದೂರದಲ್ಲೇ ಅವರನ್ನು ಬಂಧಿಸಿತು.

ಮರುದಿನ ಈ ಸಂಘಟನೆಯ ಮುಖಂಡರಾದ ತೃಪ್ತಿ ದೇಸಾಯಿ ಮತ್ತು ಅವರ ಸಂಗಡಿಗರು ಸಮಾರಂಭವೊಂದಕ್ಕೆ ಆಗಮಿಸಿದ್ದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಲೈಂಗಿಕ ತಾರತಮ್ಯದ ವಿರುದ್ಧ ಮಹಿಳೆಯರ ಹೋರಾಟಕ್ಕೆ ಬೆಂಬಲ ನೀಡಬೇಕು, ರಾಜ್ಯದ ಎಲ್ಲ ದೇವಸ್ಥಾನಗಳಿಗೆ ಮತ್ತು ಇತರ ಪವಿತ್ರ ಸ್ಥಳಗಳಿಗೆ ಮಹಿಳೆಯರ ಅನಿರ್ಬಂಧಿತ ಪ್ರವೇಶಕ್ಕೆ ಅವಕಾಶವಿರುವಂತೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಈ ನಡುವೆ ಮಹಾರಾಷ್ಟ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಪಂಕಜಾ ಮೂಂಡೆಯವರು ದೇವಸ್ಥಾನ ಹೇರಿರುವ ಈ ನಿಷೇಧವನ್ನು ಅದು ಅವರ ಪರಂಪರೆ, ಅದೇನೂ ಮಹಿಳೆಯರಿಗೆ ಅವಮಾನ ಮಾಡುವ ಆಶಯ ಹೊಂದಿಲ್ಲ ಎಂದು ಸಮರ್ಥಿಸಿಕೊಂಡಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ)ದ ಮಹಾರಾಷ್ಟ್ರ ಘಟಕ ಬಲವಾಗಿ ಖಂಡಿಸಿದೆ. ಒಬ್ಬ ಮಂತ್ರಿಯಾಗಿ, ದೇಶದ ಸಂವಿಧಾನದ ಅಡಿಯಲ್ಲಿ ಚುನಾಯಿತರಾದ ಪ್ರತಿನಿಧಿಯಾಗಿ ಆಕೆ ಸಂವಿಧಾನದಲ್ಲಿ ವಿಧಿಸಿರುವ ಸಮಾನತೆಯ ನೀತಿಯನ್ನು ಎತ್ತಿ ಹಿಡಿಯಬೇಕು, ಮಹಿಳೆಯರ ವಿರುದ್ಧ ತಾರತಮ್ಯ ಮಾಡುವ, ಅವರ ಅಪಮೌಲ್ಯ ಮಾಡುವ ಜಾತಿವಾದಿ ಮತ್ತು ಪಿತೃಪ್ರಧಾನ ವ್ಯವಸ್ಥೆಯ ಕಂದಾಚಾರಗಳನ್ನು ವಿರೋಧಿಸಬೇಕು. ಮಹಿಳೆಯರ ಮೇಲೆ ಸಾಮಾಜಿಕ ಹತೋಟಿಯನ್ನು ಬಲಪಡಿಸುವ, ಮುಟ್ಟು, ಹೆರಿಗೆ ಮುಂತಾದ ಮಹಿಳೆಯರ ನೈಸರ್ಗಿಕ ಕ್ರಿಯೆಗಳ ಬಗ್ಗೆ ನಿಷೇಧದ ಅವೈಜ್ಞಾನಿಕ ಆಚರಣೆಗಳ ವಿರುದ್ಧ ಹೋರಾಟಗಳ ದೀರ್ಘ ಪರಂಪರೆಯಿರುವ ಮಹಾರಾಷ್ಟ್ರ ರಾಜ್ಯದಲ್ಲಿ ಅದರ ಈಗಿನ ಮುಖ್ಯಮಂತ್ರಿಗಳು ತಕ್ಷಣವೇ ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು, ಎಲ್ಲ ಪೂಜಾಸ್ಥಳಗಳಿಗೆ ಪ್ರವೇಶದ ಹಕ್ಕು ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನವಾಗಿ ಇದೆ ಎಂಬುದನ್ನು ದೃಢಪಡಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ■

ªAiÁvEAzÀgÉ EzÀÄ

ಆರೆಸ್ಸೆಸ್ ಮೂಲಭೂತವಾಗಿ ಸಾರ್ವಜನಿಕ ಮುಖವಾಡವನ್ನು ಹೊಂದಿದ ಒಂದು ಸೀಕ್ರೆಟ್ ಸಂಸ್ಥೆ. ಈ ಆರೆಸ್ಸೆಸ್ ಸಂಸ್ಥೆಯಲ್ಲಿ ಸದಸ್ಯರಿಲ್ಲ. ನೊಂದಣಿ ಇಲ್ಲ, ಅಸಂಖ್ಯಾತ ದೇಣಿಗೆ ಪಡೆಯುತ್ತಿದ್ದರೂ ಅಲ್ಲಿ ಲೆಕ್ಕಪತ್ರಗಳಿಲ್ಲ. ಆರೆಸ್ಸೆಸ್ ಸಂಘಟನೆಗೆ ಶಾಂತಿಯುತ ವಿಧಾನಗಳಲ್ಲಿ ನಂಬಿಕೆ ಇಲ್ಲ. ಇದು ಸತ್ಯಾಗ್ರಹ ನೀತಿಗೆ ವಿರೋಧಿ. ಸಾರ್ವಜನಿಕವಾಗಿ ಅವರು ಏನು ಹೇಳುತ್ತಾರೋ ಅದಕ್ಕೆ ವಿರುದ್ಧವಾಗಿ ಖಾಸಗಿಯಾಗಿ ನಡೆದುಕೊಳ್ಳುತ್ತಾರೆ.



– ಜವಾಹರಲಾಲ್ ನೆಹರೂ

ಮಾನವ ಹಕ್ಕು ಎಂಬ ಪರಿಕಲ್ಪನೆಯನ್ನು ನಗೆಪಾಟಲು ಮಾಡಬೇಡಿ - ಉತ್ತರಪ್ರದೇಶ ಮುಖ್ಯಮಂತ್ರಿಗಳಿಗೆ ಸುಭಾಷಿಣಿ ಅಲಿ ಪತ್ರ

ಲೈಂಗಿಕ ಕಿರುಕುಳದ ಆಪಾದನೆಗೆ ಗುರಿಯಾಗಿದ್ದ ಹಿರಿಯ ಪೊಲೀಸ್ ಅಧಿಕಾರಿ ಡಿ.ಪಿ. ಶ್ರೀವಾಸ್ತವ ಅವರನ್ನು ಮಾನವ ಹಕ್ಕುಗಳ ಡಿಐಜಿಯಾಗಿ ಉತ್ತರ ಪ್ರದೇಶ ಸರಕಾರ ನೇಮಿಸಿರುವುದರ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಉಪಾಧ್ಯಕ್ಷರೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ ಆಗಿರುವ ಸುಭಾಷಿಣಿ ಅಲಿಯವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉತ್ತರ ಪ್ರದೇಶದ ಮುಖ್ಯಮಂತ್ರಿಗಳಿಗೆ ಅವರು ಈ ಕುರಿತು ಬರೆದಿರುವ ಪತ್ರದಲ್ಲಿ ಈ ನೇಮಕದ ಮೂಲಕ ಅವರು ಉತ್ತರಪ್ರದೇಶದಲ್ಲಿ ಮಹಿಳೆಯರಿಗೆ ಭದ್ರತೆ ನೀಡುವ ತಮ್ಮ ಭರವಸೆಗಳನ್ನೇ ಅಪಹಾಸ್ಯ ಮಾಡಿದ್ದಾರೆ, ಮಾನವ ಹಕ್ಕುಗಳು ಎಂಬ ಪರಿಕಲ್ಪನೆಯನ್ನು ನಗೆಪಾಟಲಿನ ಮಟ್ಟಕ್ಕೆ ಇಳಿಸಿದ್ದಾರೆ ಎಂದು ಸುಭಾಷಿಣಿ ಅಲಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಐಪಿಎಸ್ ಅಧಿಕಾರಿ ಶ್ರೀಮತಿ ತಾಪಾ ಸುತಪ ಸನ್ಯಾಲ್‌ರವರ ನೇತೃತ್ವದ ಪೊಲೀಸ್ ಇಲಾಖೆಯ ತನಿಖಾ ಸಮಿತಿಯೇ ಸಬ್ ಇನ್ಸ್‌ಪೆಕ್ಟರ್ ಅರುಣಾ ರಾಯ್ ಅವರಿಗೆ ಈತ ಲೈಂಗಿಕ ಕಿರುಕುಳ ಕೊಟ್ಟಿದ್ದಾರೆ ಎಂಬ ಆಪಾದನೆ ಎಲ್ಲ ರೀತಿಯಿಂದಲೂ ಸರಿ ಎಂಬ ತೀರ್ಮಾನಕ್ಕೆ ಬಂದಿತ್ತು. ಆತನ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಜನವಾದಿ ಮಹಿಳಾ ಸಂಘಟನೆ ಆಗ್ರಹಗಳನ್ನು ಮಾಡಿದಾಗಲೆಲ್ಲ ಈ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಸರಕಾರದ ಮುಖ್ಯ ಕಾರ್ಯದರ್ಶಿಗಳು ಭರವಸೆ ನೀಡಿದ್ದರು.

ಆದರೆ ಈಗ ಆತನಿಗೇ ಮಾನವ ಹಕ್ಕುಗಳನ್ನು ರಕ್ಷಿಸುವ ಹೊಣೆ ವಹಿಸಿ ತಾವು ತಮ್ಮ ಭರವಸೆಯನ್ನು ಈಡೇರಿಸಿದ್ದೀರಾ ಎಂದು ಸುಭಾಷಿಣಿಯವರು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದ್ದಾರೆ. ಈಗಲಾದರೂ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸಿ ಜನತೆಗೆ, ನಿರ್ದಿಷ್ಟವಾಗಿ ಉತ್ತರಪ್ರದೇಶದ ಮಹಿಳೆಯರಿಗೆ ಈ ಮೂಲಕ ಮಾಡಿರುವ ತೀವ್ರ ಅವಮಾನವನ್ನು ಸರಿಪಡಿಸಬೇಕು, ಆ ವ್ಯಕ್ತಿಗೆ ಸೂಕ್ತ ಶಿಕ್ಷೆಯನ್ನು ವಿಧಿಸಬೇಕು ಎಂದು ಸುಭಾಷಿಣಿಯವರು ತಮ್ಮ ಪತ್ರದಲ್ಲಿ ಆಗ್ರಹಿಸಿದ್ದಾರೆ. ●

ರಾಜಸ್ತಾನದ ಸಿಕಾರ್‌ನಲ್ಲಿ ನಡೆದ 15ನೇ ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿಯಾಗಿ ವಿಕ್ರಮ್ ಸಿಂಗ್ ಮತ್ತು ಅಧ್ಯಕ್ಷರಾಗಿ ವಿ.ಪಿ.ಸಾನು ಚುನಾಯಿತರಾಗಿದ್ದಾರೆ.



ಪಂಚಾಯತ್ ಚುನಾವಣೆಗಳಲ್ಲಿ ಎಡಪಕ್ಷಗಳನ್ನು ಗೆಲ್ಲಿಸಿ!

ಸಂಪಾದಕೀಯ

ಫೆಬ್ರವರಿ 13 ಮತ್ತು 20ರಂದು ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲೂಕ ಪಂಚಾಯತ್‌ಗಳಿಗೆ ಚುನಾವಣೆ ನಡೆಯಲಿದೆ. ಸ್ವಾತಂತ್ರ್ಯಾ ನಂತರ ಬಹಳ ವರ್ಷಗಳ ಕಾಲ ಕೇಂದ್ರ ಸರಕಾರದ ಮತ್ತು ಒಂದು ಮಿತಿಯೊಳಗೆ ರಾಜ್ಯ ಸರ್ಕಾರಗಳಲ್ಲೇ ಅಧಿಕಾರ ಮತ್ತು ಸಂಪನ್ಮೂಲಗಳು ಕೇಂದ್ರೀಕೃತಗೊಂಡಿತ್ತು. ಆದ್ದರಿಂದ ಗ್ರಾಮೀಣಾಭಿವೃದ್ದಿಯಲ್ಲಿ ಜನಗಳು ನೈಜವಾದ ಪಾತ್ರವಹಿಸಲಾಗದೇ ಗ್ರಾಮೀಣಾಭಿವೃದ್ಧಿಗೆ ತೊಡಕಾಗಿತ್ತು. ದೇಶದಾದ್ಯಂತ ಬೆಳೆದು ಬಂದ ಹೋರಾಟದ ಮೇರೆಗೆ ಸಂವಿಧಾನಕ್ಕೆ ತಿದ್ದುಪಡಿ ತಂದ ನಂತರ ಕರ್ನಾಟಕ ರಾಜ್ಯ 1983 ಮತ್ತು ನಂತರ 1993ರಲ್ಲಿ ಗ್ರಾಮೀಣಾಭಿವೃದ್ದಿಯಲ್ಲಿ ಇನ್ನಷ್ಟು ಹೆಚ್ಚು ಹೆಚ್ಚು ಸಕ್ರಿಯ ಪಾತ್ರ ವಹಿಸಬೇಕೆಂಬ ಉದ್ದೇಶದಿಂದ ಮೂರು ಹಂತಗಳ ಜಿಲ್ಲಾ ಮತ್ತು ತಾಲೂಕಾ/ ಗ್ರಾಮ ಪಂಚಾಯತ್‌ಗಳನ್ನು ರಚಿಸಿತು. ಇತ್ತೀಚೆಗೆ ಈ ಕಾನೂನಿನಲ್ಲಿ ಇನ್ನಷ್ಟು ಬದಲಾವಣೆಗಳನ್ನು ತರಲಾಗಿದೆ.

ಆದರೆ ಪಂಚಾಯತುಗಳು ವಾಸ್ತವದಲ್ಲಿ ಗ್ರಾಮೀಣ ಪ್ರದೇಶದಭಿವೃದ್ಧಿಗೆ ಪೂರಕವಾದ ನೀತಿ ನಿರೂಪಣೆ ಮಾಡುವುದಾಗಲೀ ಮತ್ತು ಇರುವ ಅಲ್ಪ ಅಧಿಕಾರವನ್ನು ಚಲಾಯಿಸಲು ಅಗತ್ಯ ಸಂಪನ್ಮೂಲಗಳನ್ನಾಗಲೀ ಹೊಂದಿರಲಿಲ್ಲ. ಈಗಲೂ ಗ್ರಾಮೀಣ ಅಭಿವೃದ್ದಿಗೆ ಒಳಗೊಳ್ಳಬಹುದಾದ ಬಹುತೇಕ ಅಧಿಕಾರಗಳನ್ನು ಮತ್ತು ಸಂಪನ್ಮೂಲಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳೇ ಹೊಂದಿವೆ. ಹೀಗಾಗಿ ಜಿಲ್ಲಾ ಹಾಗೂ ತಾಲೂಕ ಪಂಚಾಯತ್‌ಗಳು ಗ್ರಾಮೀಣಾಭಿವೃದ್ದಿಯಲ್ಲಿ ನಾಮಕಾ–ವಾಸ್ತೆ ಪಾತ್ರ ವಹಿಸುವಂತಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ನೀತಿ ನಿರೂಪಿಸಿ ಅವುಗಳನ್ನು ಇಲಾಖೆಗಳ ಮೂಲಕ ಜಾರಿಮಾಡುವ ಕಾರ್ಯತಂತ್ರ ಹಾಗೂ ಸಂಪನ್ಮೂಲಗಳನ್ನು ನಿಗದಿ ಪಡಿಸುತ್ತವೆ. ಆ ಮಿತಿಯೊಳಗೆ ಜಿಲ್ಲಾ ಹಾಗೂ ತಾಲೂಕ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿ ಜಾರಿ ಮಾಡುವ ಕಾರ್ಯ ಭಾರವನ್ನಷ್ಟೇ ಮಾಡುವಂತಹವುಗಳಾಗಿವೆ.

ಶಿಕ್ಷಣ, ನೈರ್ಮಲ್ಯ ಹಾಗೂ ಆರೋಗ್ಯ ಕಾಪಾಡುವ, ಉತ್ತಮ ಕುಡಿಯುವ ನೀರು ಒದಗಿಸುವ, ಪಶು ಸಂಗೋಪನೆ, ಕೃಷಿ ಉತ್ಪಾದನೆಗಳ ಹೆಚ್ಚಳ ಹಾಗೂ ಭೂ ಸಾರ ಸಂರಕ್ಷಣೆ, ಗುಡಿ ಕೈಗಾರಿಕೆ, ಕೈಗಾರಿಕೆ ಮತ್ತು ಅರಣ್ಯ ಬೆಳವಣಿಗೆ, ರಸ್ತೆ ಮತ್ತು ಅಂತರ್ಜಲದ ಅಭಿವೃದ್ದಿ ಮುಂತಾದ ಹೊಣೆಗಾರಿಕೆಗಳನ್ನು ನೀಡಲಾಗಿದೆಯಾಗಿದೆ. ಆದರೆ ಈಗಲೂ, ಇವುಗಳಿಗೂ ಕೂಡ ಅಗತ್ಯ ಸಂಪನ್ಮೂಲ ದೊರೆಯುತ್ತಿಲ್ಲ. ಇರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಲಾಗುತ್ತಿಲ್ಲ. ಆದ್ದರಿಂದಲೇ ಕಳೆದ 22 ವರ್ಷಗಳಲ್ಲಿ ಕನಿಷ್ಠ ಬೆಳವಣಿಗೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಕಾಣಲಾಗುತ್ತಿಲ್ಲ. ಇರುವ ಬಹುತೇಕ ಅಭಿವೃಧ್ಧಿ ಕಾರ್ಯಕ್ರಮಗಳು ಪೇಪರ್‌ಗಳಲ್ಲಿ ಮಾತ್ರವೇ ಆಗುತ್ತಿರುವುದು ಮತ್ತು ಸಂಪನ್ಮೂಲಗಳೆಲ್ಲಾ ಬಹುತೇಕ ಗುಳುಂ ಆಗುತ್ತಿರುವುದು ಗುಟ್ಟಾದ ವಿಚಾರವಾಗಿಯೇನು ಉಳಿದಿಲ್ಲ. ಆದ್ದರಿಂದ ಗ್ರಾಮೀಣ ಪ್ರದೇಶಗಳು ಕುಡಿಯುವ ಶುದ್ಧ ನೀರಿನ ಕೊರತೆ, ತೀವ್ರ ಕೃಷಿಯ ಬಿಕ್ಕಟ್ಟು, ನೈರ್ಮಲ್ಯದ ಅಭಾವ, ಸಾಂಕ್ರಾಮಿಕ ರೋಗಗಳು, ಪರಿಸರ ಮಾಲಿನ್ಯ ಮುಂತಾದ ಸಮಸ್ಯೆಗಳ ಗೂಡಾಗಿ ಹೋಗಿವೆ.

ಇದ್ದ ಬದ್ದ ಗ್ರಾಮೀಣ ಅಭಿವೃಧ್ಧಿ ಯೋಜನೆಗಳನ್ನು ಜಾರಿಗೆ ತರುವ ಗ್ರಾಮಪಂಚಾಯತ್‌ಗಳ ಪರಿಸ್ಥಿತಿ ತೀರಾ ಶೋಚನೀಯವಾಗಿದೆ. ಅಲ್ಲಿ ಪಂಚಾಯತ್‌ಗಳಲ್ಲಿ ಕಾರ್ಯ ನಿರ್ವಹಿಸುವ ಚುನಾಯಿತ ಪ್ರತಿನಿಧಿಗಳಿಗಾಗಲೀ ಮತ್ತು ಅಲ್ಲಿ ಸೇವೆಯಲ್ಲಿ ತೊಡಗಿದ ಬಹುತೇಕ ಸಿಬ್ಬಂದಿಗಾಗಲೀ ಕನಿಷ್ಟ ವೇತನವೂ ಇಲ್ಲಾ! ಕೊನೆಯ ಪಕ್ಷ ಇವುಗಳಿಗೆ ಬೀದಿ ದೀಪಗಳ ಬಿಲ್ ಗಳನ್ನು ಪಾವತಿಸಲಾಗುತ್ತಿಲ್ಲ. ಹೆಚ್ಚಿನ ಅಧಿಕಾರ ದೂರದ ಮಾತಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮೂರು ಹಂತದ ಪಂಚಾಯತುಗಳಿಗೆ ಅಧಿಕಾರ ಮತ್ತು ಸಂಪನ್ಮೂಲ ವಿಕೇಂದ್ರೀಕರಣಕ್ಕೆ ಗಮನಹರಿಸಿ ಗ್ರಾಮೀಣಾಭಿವೃದ್ದಿಗೆ ಪೂರಕವಾಗುವ ನೀತಿಗಳನ್ನು ಜಾರಿಗೆ ತರುವ ಬದಲು ವ್ಯತಿರಿಕ್ತ ನಡೆಯನ್ನು ಅನುಸರಿಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜಾಗತೀಕರಣದ ನೀತಿಗಳಿಂದ ಮತ್ತು ಜಿಲ್ಲಾ/ತಾಲೂಕಾ/ಗ್ರಾಮ ಪಂಚಾಯತ್‌ಗಳ ಸೀಮಿತ ಸಂಪನ್ಮೂಲಗಳ ಲೂಟಿಯಿಂದ ಗ್ರಾಮೀಣ ಪ್ರದೇಶ ತೀವ್ರ ಬಿಕ್ಕಟ್ಟಿನಿಂದ ಬಳಲುತ್ತಿದೆ.

ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಕೊಬ್ಬಿದ ಕೈಬೆರಳೆಣಿಕೆಯ ಸಣ್ಣ ಸಂಖ್ಯೆಯ ಶ್ರೀಮಂತ ವಿಭಾಗವೊಂದು ಬಲವಾಗಿ ಬೇರೂರಿರುವಾಗಲೇ ಶೇ 95ರಷ್ಟು ಗ್ರಾಮೀಣ ಜನತೆ ದಿವಾಳಿಯಾಗಿದೆ. ಈ ಸಣ್ಣ ಸಂಖ್ಯೆಯ ಶ್ರೀಮಂತ ವಿಭಾಗ ಗ್ರಾಮೀಣ ಪ್ರಧೇಶದ ಸರ್ವಾಧಿಕಾರಿಯಾಗಿ ಜನಗಳ ಮೇಲೆ ದೌರ್ಜನ್ಯವನ್ನು ಹರಿಬಿಟ್ಟಿರುವುದಲ್ಲದೇ ದೇಶದ ಐಕ್ಯತೆಗೆ ಧಕ್ಕೆ ತರುವ ಜನತೆಯನ್ನು ಒಡೆದಾಳಲು ಮತ್ತು ತಮ್ಮ ಅಧಿಕಾರವನ್ನು ನಿರಂತರವಾಗಿ ಮುನ್ನಡೆಸಲು ಜಾತಿವಾದ ಮತ್ತು ಕೋಮುವಾದಕ್ಕೆ ಕುಮ್ಮಕ್ಕು ನೀಡುತ್ತಿದೆ. ಗ್ರಾಮೀಣ ಶ್ರೀಮಂತರ (ಭೂಮಾಲಕ, ಲೇವಾದೇವಿಗಾರರ, ಕಂಟ್ರಾಕ್ಟರುಗಳ) ದುಷ್ಟ ಕೂಟವೇ ಅವರನ್ನು ಪ್ರತಿನಿಧಿಸುವ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ನಂತಹ ಬೂರ್ಜ್ವಾ–ಭೂಮಾಲಕ ಪಕ್ಷಗಳ ಮೂಲಕ ಪಂಚಾಯತುಗಳ ಮೂರು ಹಂತಗಳಲ್ಲಿಯೂ ಅಧಿಕಾರ ನಡೆಸುತ್ತಿವೆ.

ಆದ್ದರಿಂದ ಇಂತಹ ವಾತಾವರಣವನ್ನು ಪ್ರಶ್ನಿಸುವ ಯಾವುದೇ ಕೆಲಸವನ್ನು ಕೂಡಾ ಜಿಲ್ಲಾ/ ತಾಲೂಕ ಪಂಚಾಯ್ತಿಗಳು ಮಾಡುತ್ತಿಲ್ಲ. ಅಲ್ಲಿನ ಬಹುತೇಕ ಸದಸ್ಯರಿಗೆ ಸಮಸ್ಯೆಗಳ ಪರಿಹಾರಕ್ಕಿಂತ, ಅವರ ವೈಯ್ಯಕ್ತಿಕ ಆದಾಯವೇ ಮುಖ್ಯವಾಗುತ್ತಿದೆ. ಹೀಗಾಗಿ, ಈ ಚುನಾವಣೆಯಲ್ಲಿಯೂ ಕೂಡಾ ಬಹುತೇಕರು ಜನತೆಯ ನೈಜ ಸಮಸ್ಯೆಗಳನ್ನು ಮತ್ತು ಅಧಿಕಾರ ಹಾಗೂ ಸಂಪನ್ಮೂಲಗಳ ವಿಕೇಂದ್ರೀಕರಣದ ಪ್ರಶ್ನೆಗಳನ್ನು ಮುಂದು ಮಾಡಿ ಚುನಾವಣೆಯಲ್ಲಿ ತೊಡಗುತ್ತಿಲ್ಲ. ಬದಲಾಗಿ, ಮತದಾರರನ್ನು ಅವುಗಳಿಂದ ದಾರಿತಪ್ಪಿಸಿ ಜಾತಿ, ಧರ್ಮ ಮತ್ತು ಹಣ ಹೆಂಡದ ಹಾಗೂ ತೋಳ್ಬಲದ ಆಧಾರದಲ್ಲಿ ಮತದಾನವನ್ನು ನಡೆಸಲು ಮುಂದಾಗುತ್ತಿದ್ದಾರೆ. ಹೀಗಾಗಿ ಮತದಾರರು ಗ್ರಾಮೀಣಾಭಿವೃಧ್ಧಿಯ ಈ ಅಧೋಗತಿಯನ್ನು ಗಮನಿಸಿ, ಇದುವರೆಗೆ ಕೇಂದ್ರ ಹಾಗೂ ರಾಜ್ಯ ಮತ್ತು ಜಿಲ್ಲಾ/ ತಾಲೂಕಾ ಪಂಚಾಯತ್‌ಗಳಲ್ಲಿ ಅಧಿಕಾರದಲ್ಲಿ ತೊಡಗಿರುವ ಮುಖ್ಯವಾಗಿ ಗ್ರಾಮೀಣ ಪ್ರದೇಶದ ನೈಜ ಅಭಿವೃಧ್ಧಿಯ ವಿರೋಧಿಯಾಗಿರುವ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಮೂಲಕ ಈ ಪರಿಸ್ಥಿತಿಗೆ ಕಾರಣವಾಗಿರುವ ಬಿಜೆಪಿ, ಕಾಂಗ್ರೆಸ್ ಪಕ್ಷಗಳ ಅಭ್ಯರ್ಥಿಗಳನ್ನು ಸೋಲಿಸುವ ಅಗತ್ಯ ಇದೆ.

ಗ್ರಾಮೀಣ ಸಮಸ್ಯೆಗಳ ಪರಿಹಾರ ಆಗಬೇಕಾದರೆ, ಗ್ರಾಮೀಣ ಅಭಿವೃಧ್ಧಿ ಸಾಧ್ಯವಾಗಬೇಕಾದರೆ ಅಧಿಕಾರ ಮತ್ತು ಸಂಪನ್ಮೂಲಗಳ ನೈಜ ವಿಕೇಂದ್ರೀಕರಣ ಆಗಬೇಕಾಗಿದೆ. ಇದಕ್ಕೆ ಬದಲಿ ನೀತಿಗಳ ಬದಲಿ ರಾಜಕೀಯ ಶಕ್ತಿಗಳನ್ನು ಬಲಪಡಿಸುವ ಅಗತ್ಯ ಇದೆ. ಒಂದು ಸೀಮಿತ ರಾಜ್ಯಗಳ ಅಧಿಕಾರ ಮತ್ತು ಸಂಪನ್ಮೂಲಗಳಲ್ಲೂ ಹೆಚ್ಚಿನ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಗ್ರಾಮೀಣಾಭಿವೃಧ್ಧಿಗೆ ಪಂಚಾಯತ್ ಸಂಸ್ಥೆಗಳ ಮೂಲಕ ಮಾದರಿ ಕೆಲಸ ನಿರ್ವಹಿಸಿದ ಎಡ ಪಕ್ಷಗಳು ಮಾತ್ರ ಇದನ್ನು ಮಾಡಲು ಸಾಧ್ಯ. ಕೇರಳ, ಪ.ಬಂಗಾಳ ಮತ್ತು ತ್ರಿಪುರಾಗಳಲ್ಲಿ ಎಡಪಕ್ಷಗಳು ಈಗಾಗಲೇ ಇದನ್ನು ಸಾಧಿಸಿ ತೋರಿಸಿವೆ. ದೇಶದಾದ್ಯಂತ ಇಂತಹ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಮತ್ತು ಎಲ್ಲಾ ದುಡಿಯುವ ಜನರ ಹಿತರಕ್ಷಣೆಗಾಗಿ ಎಡಪಕ್ಷಗಳು ನಿರಂತರ ಹೋರಾಟದಲ್ಲಿ ತೊಡಗಿವೆ. ಕರ್ನಾಟಕದಲ್ಲೂ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಹಾಗೂ ಸಂಪನ್ಮೂಲಗಳ ಲೂಟಿಯನ್ನು ಪರಿಣಾಮಕಾರಿಯಾಗಿ ತಡೆಯಲು ಚಳುವಳಿಯಲ್ಲಿ ಎಡಪಕ್ಷಗಳು ಸಕ್ರಿಯವಾಗಿವೆ. ಆದ್ದರಿಂದ ಎಡ ಪಕ್ಷಗಳಾದ ಸಿಪಿಐ, ಸಿಪಿಐ(ಎಂ), ಎಸ್.ಯು.ಸಿ.ಐ., ಸಿಪಿಐ(ಎಂ.ಎಲ್.), ಫಾರ್ವರ್ಡ್ ಬ್ಲಾಕ್ ಅರ್ಭರ್ಥಿಗಳನ್ನು ಅವರು ಸ್ಪರ್ಧಿಸಿದ ಕಡೆ ಗೆಲ್ಲಿಸಬೇಕಾಗಿದೆ. ಉಳಿದೆಡೆ ಜಾತ್ಯತೀತ ಪ್ರಗತಿಪರ ಅಭ್ಯರ್ಥಿಗಳಿಗೆ ಮತನೀಡಿ ಗೆಲ್ಲಿಸಬೇಕಾಗಿದೆ. ಬಿಜೆಪಿ, ಕಾಂಗ್ರೆಸ್‌ಗಳನ್ನು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ.



ಕರ್ನಾಟಕದಿಂದ ಗುರುರಾಜ್ ದೇಸಾಯಿಯವರು ಜಂಟಿ ಕಾರ್ಯದರ್ಶಿಯಾಗಿ ಹಾಗೂ ಅಂಬರೀಶ್, ಬಸವರಾಜ್ ಪೂಜಾರ್ ಮತ್ತು ರೇಣುಕ ಕಹಾರ್ ಎಸ್.ಎಫ್.ಐ ನ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.







ಜನಶಕ್ತಿ
ಕನ್ನಡ ವಾರಪತ್ರಿಕೆ

ವೆಬ್ ಸೈಟಿನಲ್ಲಿ ಏನಿದೆ?


janashakthi.co.in

1. ನಮ್ಮನ್ನು ಆಳುತ್ತಿರುವುದು ಸಾಮಾಜಿಕ ಮತ್ತು ಆರ್ಥಿಕ ಮೂಲಭೂತವಾದಿಗಳ ಒಕ್ಕೂಟ – ಪಿ.ಸಾಯಿನಾಥ್
2. ರೋಹಿತ್ ವೇಮುಲನ ದುರಂತ ಕಥೆ – ಹಿಂದುಸ್ತಾನ್ ಟೈಮ್ಸ್‌ನಲ್ಲಿ ಸುದೀಪ್ತೊ ಮಂಡಲ್‌ರವರು ಲೇಖನ
3. ಮಾರ್ಚ್ 01ರಂದು ರಸ್ತೆ ಸಾರಿಗೆ ಕಾರ್ಮಿಕರ ದೆಹಲಿ ಚಲೋ
4. ಹೊಸಪೇಟೆ : ಹೆಲ್ಮೆಟ್ ಕಡ್ಡಾಯ ಕಾನೂನು ಮರುಪರಿಶೀಲಿಸಲು ಒತ್ತಾಯ
5. ವಿಜಯಪುರ : ಸಮುದಾಯ ಭವನ ನಿರ್ಮಾಣಕ್ಕೆ ಆಗ್ರಹ
6. ಬೈಕ್ ಸವಾರರ ಬಗ್ಗೆ ಇರುವ ಕಾಳಜಿ ರೈತರ ಬಗ್ಗೆ ಇಲ್ಲವೇ
7. ಹೊಳೆನರಸಿಪುರದಲ್ಲಿ ದಲಿತ ಹಕ್ಕುಗಳ ಸಮಾವೇಶ

ನಮ್ಮ ಚುರು-ಟ್ವೀಟ್

@SitaramYechury

ಸೀತಾರಾಂ ಯೆಚೂರಿ: ಸುಪ್ರೀಂ ಕೋರ್ಟು ಪ್ರಕರಣದ ಬಗ್ಗೆ ವಿಚ್ಛರಣೆ ನಡೆಸುತ್ತಲಿರುವಾಗ ಕೇಂದ್ರ ಸಚಿವ ಸಂಪುಟ ಅಧ್ಯಕ್ಷರ ಆಡಳಿತಕ್ಕೆ ಶಿಫಾರಸು ಮಾಡುವುದು ಅಭೂತಪೂರ್ವ ಕ್ರಮ #ಅರುಚಾಲಬಿಕ್ಕಟ್ಟು




ಮಹಾಂತೇಶ್ ಕೆ.

ಕನಿಷ್ಟ ವೇತನ ಪರಿಷ್ಕರಣೆ :
ಮಾಲೀಕರ ಒತ್ತಡಕ್ಕೆ ಮಣಿಯದಿರಲು ಆಗ್ರಹ

ಕನಿಷ್ಠ ವೇತನ ಪರಿಷ್ಕರಣೆ ಅಧಿಸೂಚನೆಗಳು ಮತ್ತು ಕರಡು ಅಧಿಸೂಚನೆಗಳಿಗೆ ವಿರೋಧ ವ್ಯಕ್ತಪಡಿಸಿರುವ ಕೈಗಾರಿಕಾ ಮಾಲೀಕರ ಸಂಘಗಳು ಈ ಕನಿಷ್ಟವೇತನ ಪರಿಷ್ಕರಣೆಗೆ ಒಪ್ಪಿಗೆ ನೀಡಬಾರದೆಂದು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಆಗ್ರಹಿಸಿವೆ. ಇದಕ್ಕೆ ಸ್ಪಂದಿಸುವಂತೆ ಕಂಡಿರುವ ಮುಖ್ಯಮಂತ್ರಿಗಳು ಈ ಬಗೆಗೆ ಪರಿಶೀಲಿಸುವಂತೆ ಕನಿಷ್ಟವೇತನ ಸಲಹಾ ಮಂಡಳಿ ಅಧ್ಯಕ್ಷರಿಗೆ ಪತ್ರವೊಂದನ್ನು ಬರೆದಿದ್ದಾರೆ ಎಂಬ ಮಾಹಿತಿ ಬಂದಿದೆ. ಈ ಬಗ್ಗೆ ಸಿಐಟಿಯು ರಾಜ್ಯ ಕೇಂದ್ರದ ಸಭೆಯಲ್ಲಿ ಚರ್ಚಿಸಿ ಈ ಬಗ್ಗೆ ಸಿಐಟಿಯು ಸ್ವತಂತ್ರವಾಗಿ ಹಾಗೂ ಇತರೆ ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಸೇರಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ನಿರ್ಧರಿಸಿದೆ. ಅಲ್ಲದೆ ಜನವರಿ 28 ರಂದು ಜಿಲ್ಲಾಧಿಕಾರಿಗಳ ಮೂಲಕ ಎಲ್ಲಾ ಜಿಲ್ಲೆಗಳಲ್ಲಿ ಮನವಿ ಕೂಡ ಸಲ್ಲಿಸಲಾಗಿದೆ.

ಅಂದು ಬೆಂಗಳೂರಿನಲ್ಲಿ ರಾಜ್ಯ ಕಾರ್ಯದರ್ಶಿಗಳು ಕೆ.ಎನ್. ಉಮೇಶ್ ಕೆ.ಮಹಾಂತೇಶ್ ಅವರ ನೇತೃತ್ವದಲ್ಲಿ ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಕಚೇರಿಗೆ ತೆರಳಿ ಯಾವುದೇ ಒತ್ತಡಕ್ಕೆ ಮಣಿದು ಈಗಾಗಲೇ ಪ್ರಕಟಿಸಿರುವ ಅಂತಿಮ ಹಾಗು ಕರಡು ಅಧಿಸೂಚನೆಗಳನ್ನು ಹಿಂಪಡೆಯಬಾರದೆಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಪರವಾಗಿ ಮನವಿ ಸಲ್ಲಿಸಲಾಯಿತು. ■

108 ನೌಕರರ ಹೋರಾಟ ಹತ್ತಿಕ್ಕುತ್ತಿರುವ ಸಚಿವರು



ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಜನವರಿ 24 ರಿಂದ ರಾಜ್ಯದ್ಯಂತ ಆರೋಗ್ಯ ಕವಚ '108' ಅಂಬೂಲೆನ್ಸ್ ಸಿಬ್ಬಂದಿಗಳು ಹೋರಾಟ ನಡೆಸುತ್ತಿದ್ದಾರೆ. ಅವರು ಮುಷ್ಕರಕ್ಕೆ ಹೋಗುವ ಪೂರ್ವದಲ್ಲಿ ಸರಕಾರ-ಕ್ಕೆ ಮೊದಲೇ ಮನವಿ ಸಲ್ಲಿಸಿದ್ದಾರೆ. ಆದರೆ ಅದು ನಮಗೆ ಸಂಬಂಧಿಸಿಲ್ಲ ಎಂದು ಹಾರಿಕೆ ಉತ್ತರ ನೀಡಿದ ಆರೋಗ್ಯ ಸಚಿವ ಯು.ಟಿ. ಖಾದರ್ 'ಎಸ್ಮಾ' ಜಾರಿಗೊಳಿಸುವ ಬೆದರಿಕೆಯನ್ನು ಹಾಕಿದ್ದರು. ಆದರೆ ಇದಕ್ಕೆ ನೌಕರರು ಕಿವಿಗೊಡದೇ ಹೋರಾಟ ನಿರತರಾಗಿದ್ದಾರೆ.

ಇದಕ್ಕೆ ಸ್ಪಂದಿಸಬೇಕಾದ ಸಚಿವರು ಮತ್ತು ಜಿವಿಕೆ ಕಂಪನಿ ಮಾತ್ರ ಯವುದೋ ಎರಡು ನೌಕರರು ಪೋನ್ ನಲ್ಲಿ ಸಂಘವು ನಡೆಸುವ ಹೊರಾಟವನ್ನು ಹೇಗೆ ಯಶಸ್ವಿಗೊಳಿಸಬೇಕು ಎಂದು ನಡೆಸಿದ ಸಂಭಾಷಣೆಯ ಧ್ವನಿ ಮುದ್ರಣವನ್ನೆ ಬಂಡವಾಳವಾಗಿಸಿಕೊಂಡು ಆ ನೌಕರರನ್ನು ಕೆಲಸದಿಂದ ಅಮಾನತು ಮಾಡಿದೆ. ಸಾಲದೆಂಬಂತೆ ಸರಕಾರದ ನಿರ್ಲಕ್ಷ್ಯ ಧೋರಣೆಯನ್ನು ಪ್ರತಿಭಟಿಸಿ ಸ್ವಚ್ಚತಾ ಆಂದೋಲನ ನಡೆಸಲು ಮುಂದಾದ ಸಂಘದ ಪದಾಧಿಕಾರಿಗಳನ್ನು ಮತ್ತು ನೌಕರರನ್ನು ಅನಗತ್ಯವಾಗಿ ಬಂಧಿಸಲಾಗಿದೆ. ನೌಕರರು ಮುಂದಿಟ್ಟಿರುವ ಹೆಚ್ಚುವರಿ ವೇತನ, ಮೂಲಭೂತ ಸೌಲಭ್ಯ ಮೊದಲಾದ ಬೇಡಿಕೆಗಳ ಕುರಿತು ಮಾತುಕತೆ ನಡೆಸುವುದನ್ನು ಬಿಟ್ಟು ಸಂಘ ಕಟ್ಟಬಾರದು, ಮಾಧ್ಯಮಗಳೊಂದಿಗೆ ಮಾತನಾಡಬಾರದು ಎಂಬ ಅನಗತ್ಯ ಕಿರುಕುಳಗಳನ್ನು ನೀಡಿ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಗುತ್ತಿದೆ. ಫೆಬ್ರವರಿ ಮೊದಲ ವಾರದಿಂದ ಬಂಡವಾಳ ಹೂಡಿಕೆದಾರರ ಅಂತರಾಷ್ಟ್ರೀಯ ಸಮಾವೇಶ ಮತ್ತು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಭರ್ಜರಿಯಾಗಿ ನಡೆಸುವ ಉಮೇದಿನಲ್ಲಿರುವ ಸಿದ್ದರಾಮಯ್ಯ ಸರಕಾರಕ್ಕೆ 108 ಕಾರ್ಮಿಕರ ಈ ಹೋರಾಟ ಮಗ್ಗಲು ಮುಳ್ಳಾಗಿ ಕಾಡುತ್ತಿರುವುದಂತೂ ಸತ್ಯ. ■

ದೆಹಲಿಯಲ್ಲಿ ಮಾರ್ಚ 1 ರಂದು ಸಾರಿಗೆ ನೌಕರರ ಪ್ರತಿಭಟನೆ

ಜನ ವಿರೋಧೀ, ಕಾರ್ಮಿಕ ವಿರೋಧಿ ರಸ್ತೆ ಸಾರಿಗೆ ಮತ್ತು ಸುರಕ್ಷತಾ ಮಸೂದೆ 2015 ನ್ನು ವಾಪಾಸಾತಿ ಮಾಡಬೇಕು. ವಿ.ವಿ.ಗಿರಿ ಲೇಬರ್ ಇನ್ಸ್ಟಿಟ್ಯೂಟ್‌ನ ಶಿಫಾರಸುಗಳನ್ನು ಜಾರಿ ಮಾಡಬೇಕು ಹಾಗು ನೇಮಕಾತಿ ಪತ್ರ ಮತ್ತು ಗುರುತಿನ ಚೀಟಿಯನ್ನು ನೀಡಬೇಕು. ಸಾಮಾಜಿಕ ಭದ್ರತಾ ಯೋಜನೆಯನ್ನು ಅಸಂಘಟಿತ ಕಾರ್ಮಿಕರಾದ ಸಾರಿಗೆ ನೌಕರರಿಗೆ ಹಣಕಾಸಿನ ನೆರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಲು ಕ್ರಮವಹಿಸಬೇಕು. ಪೆಟ್ರೋಲ್ ಮತ್ತು ಡಿಸೇಲ್‌ಗಳ ಮೇಲೆ ಹಾಕುವ ಅಮದು ಸುಂಕ ಮತ್ತು ತೆರಿಗೆಯನ್ನು ಕಡಿಮೆ ಮಾಡಬೇಕು. ಐಎಲ್‌ಓನ ಶಿಫಾರಸಿನಂತೆ ಮೋಟಾರ್ ವಾಹನ ಚಾಲಕರ ಜೊತೆಗೆ ಆಟೋ ಮತ್ತು ಟ್ಯಾಕ್ಸಿ ಚಾಲಕರನ್ನು ಒಳಗೊಂಡಂತೆ ಇಎಸ್‌ಐ ಸೌಲಭ್ಯವನ್ನು ಜಾರಿ ಮಾಡಬೇಕು. ಸಾರಿಗೆ ಅಧಿಕಾರಿಗಳು ಹಾಗು ಪೋಲೀಸ್‌ರು ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕು ಎಂಬ ಮೊದಲಾದ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಬರುವ ಮಾರ್ಚ 1 ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಲಿದ್ದಾರೆ.

ಜನವರಿ 9 ಮತ್ತು 10 ರಂದು ಕೊಲ್ಕತ್ತಾದಲ್ಲಿ ನಡೆಸಲಾದ ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಫೆಡರೇಷನ್ ಜನರಲ್ ಕೌನ್ಸಿಲ್ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ. ಈ ಹೋರಾಟದ ಭಾಗವಾಗಿ ಫೆಬ್ರವರಿ 16 ರಂದು ಕರ್ನಾಟಕದ ಸಾರಿಗೆ ನೌಕರರ ರಾಜ್ಯ ಮಟ್ಟದ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಸಾರಿಗೆ ನೌಕರರ ಫೇಡರೇಶನಿನ ಪ್ರಧಾನ ಕಾರ್ಯದರ್ಶಿ ಕೆ.ಕೆ. ದಿವಾಕರನ್ ಭಾಗವಹಿಸಲಿದ್ದಾರೆ. ■

ಫೆಬ್ರವರಿ 5, ಕನಿಷ್ಟ ಕೂಲಿ, ಗುತ್ತಿಗೆ ಪದ್ಧತಿ ನಿಷೇಧ,
ಸ್ಕಿಮ್ ನೌಕರ ಬೇಡಿಕೆಗಾಗಿ ರಾಷ್ಟ್ರ ಮಟ್ಟದಲ್ಲಿ ಹೋರಾಟ



ಕನಿಷ್ಟ ಕೂಲಿಯನ್ನು ಮಾಸಿಕ 18,000 ರೂ ನಿಗದಿಗೊಳಿಸಬೇಕು, ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಬೇಕು, ಹಾಲಿ ಮುನಿಸಿಪಾಲಿಟಿ, ಆಸ್ಪತ್ರೆ, ನಿಗಮ ಮಂಡಳಿಗಳಲ್ಲಿ, ಹಾಸ್ಟಲ್, ಖಾಸಗಿ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಖಾಯಂಗೊಳಿಸಬೇಕು, ಅಂಗನವಾಡಿ, ಬಿಸಿ ಊಟ, ಆಶಾಗಳಲ್ಲಿ ದುಡಿಯುತ್ತಿರುವ ನೌಕರರ ಸೇವೆಯನ್ನು ಖಾಯಂಗೊಳಿಸಬೇಕು, ಹಾಗು ಅನುಧಾನ ಕಡಿತವನ್ನು ನಿಲ್ಲಿಸಿ, ಮುಂದಿನ ಬಜೆಟ್ ನಲ್ಲಿ ಪೂರ್ಣ ಅನುಧಾನ ನೀಡಬೇಕು, ಕೇಂದ್ರ ಸರ್ಕಾರ ರೈತ -ಕಾರ್ಮಿಕರ ಪರವಾದ ನೀತಿಯನ್ನು ಜಾರಿಗೊಳಿಸಬೇಕು ಮೊದಲಾದ ಬೇಡಿಕೆಗಳ ಜಾರಿಗಾಗಿ ಫೆಬ್ರವರಿ 05ರಂದು ದೇಶದ ಎಲ್ಲಾ ಕಡೆಗಳಲ್ಲಿ ಕಾರ್ಮಿಕರ ಪ್ರತಿಭಟನೆ ನಡೆಲಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮಿನಾಕ್ಷಿ ಸುಂದರಂ ತಿಳಿಸಿದರು.

ಅವರು ದಿನಾಂಕ 24-01-2016ರಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಸಂಘಟನೆಯ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯ ತೀರ್ಮಾನಗಳ ಬಗ್ಗೆ ತಿಳಿಸಲು ತುಮಕೂರು ನಗರದಲ್ಲಿ ಏರ್ಪಡಿಸಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು, ಮುಂದುವರಿದು ಮಾತನಾಡಿದ ಅವರು ಕಾರ್ಮಿಕ ವರ್ಗವು ಐಕ್ಯತೆಯಿಂದ ಚಳುವಳಿ ಯಶಸ್ವಿಗೊಳಿಸಲು ಕರೆ ನಿಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಸೈಯದ್ ಮುಜಿಬ್ ಅವರು ಮಾತನಾಡಿ ರಾಜ್ಯ ಸರ್ಕಾರವೂ ಕಾರ್ಮಿಕರ ಕನಿಷ್ಟ ಕೂಲಿಯನ್ನು ಕಡಿತ ಮಾಡಲು ಹೋರಡುವ ಕ್ರಮವನ್ನು ಕೈಬಿಡುವಂತೆ ಆಗ್ರಹಿಸಿದರು ಹಾಗು ಬೀಡಿ ಕಾರ್ಮಿಕರ ತುಟಿಭತ್ಯೆ ನೀಡದಂತೆ ಅದೇಶಿಸಿರುವುದನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುಬ್ರಮಣ್ಯ, ಜಿಲ್ಲಾ ಖಚಾಂಜಿ ಜಿ. ಕಮಲ, ಕಟ್ಟಡ ಕಾರ್ಮಿಕರ ಸಂಘ ಜಿಲ್ಲಾಧ್ಯಾಕ್ಷರಾದ ಬಿ.ಉಮೇಶ, ಗ್ರಾಮ ಪಂಚಾಯತಿ ನೌಕರರ ಸಂಘದ ನಾಗೇಶ್, ಅಂಗನವಾಡಿ ನೌಕರರ ಸಂಘದ ಗುಲ್ಜಾರ್ ಬಾನು, ಶಾಂತಕುಮಾರಿ, ಅನಸೂಯ, ಕೈಗಾರಿಕ ಕಾರ್ಮಿಕ ಸಂಘದ ಮುಖಂಡರಾದ ದಿಸಾ ಲೋಕೇಶ್. ಷಣ್ಮುಗಪ್ಪ, ಶಶಿಕುಮಾರ, ಶಿವಕುಮಾರ್, ಸಂದೀಪ್ ಗೌಡ ಮತ್ತಿತರರು ಹಾಜರಿದ್ದರು. ■


ಈ ವಾರ ಚರಿತ್ರೆಯಲ್ಲಿ

ಜನವರಿ 27, 1945

ಹೊಲೊಕಾಸ್ಟ್ ಸ್ಮರಣ ದಿನ

ಈ ದಿನ ಜರ್ಮನಿ ಪ್ರವೇಶಿಸಿ ಬರ್ಲಿನ್ ನತ್ತ ಸಾಗುತ್ತಿದ್ದ ಸೋವಿಯೆಟ್ ಕೆಂಪು ಸೈನ್ಯ ಆಶ್‌ವಿಟ್ಝ್ ನಾಜಿ ಯಾತನಾ ಕ್ಯಾಂಪು ವಶ ಪಡಿಸಿಕೊಂಡು ಇದ್ದ ಕೈದಿಗಳನ್ನು ಬಿಡುಗಡೆ ಮಾಡಿತು.

ನಾಜಿ ಯಾತನಾ ಕ್ಯಾಂಪುಗಳಲ್ಲೇ ಅತ್ಯಂತ ಕುಖ್ಯಾತವಾಗಿದ್ದ ಆಶ್‌ವಿಟ್ಝ್ ಕ್ಯಾಂಪನ್ನು 1941ರಲ್ಲಿ ರಾಜಕೀಯ ಕೈದಿಗಳಿಗಾಗಿ ಆರಂಭಿಸಲಾಯಿತು. ಅಲ್ಲಿ 11 ಲಕ್ಷ (ಇವರಲ್ಲಿ ಶೇ.90 ಯಹೂದಿಯರು) ಜನರನ್ನು ಅತ್ಯಂತ ಕ್ರೂರವಾಗಿ ಕೊಲ್ಲಲಾಯಿತು.



ಬಯಲಾದ ಬೆಳ್ತಂಗಡಿಯ ಅಸಹಜ ಸಾವುಗಳು:

ವರದಿ: ವಾ.ಉಚ್ಚಿಲ್

ಮೂರು ವರ್ಷದ ಹಿಂದೆ ಧರ್ಮಸ್ಥಳದ ಸೌಜನ್ಯ ಎಂಬ ಕಾಲೇಜು ವಿದ್ಯಾರ್ಥಿನಿ ಅತ್ಯಾಚಾರ ಹಾಗೂ ಕೊಲೆಗೆ ಈಡಾದ ದುರ್ಘಟನೆಯಲ್ಲಿ ಒಳಗೊಂಡಿರಬಹುದಾದ ಅಪರಾಧಿಗಳ ವಿವರ ಮುಚ್ಚಿ ಹಾಕಲು ಅಲ್ಲಿನ ಪ್ರಭಾವಿ ವ್ಯಕ್ತಿಗಳ ಪರವಾಗಿ ಪೋಲೀಸು ಇಲಾಖೆ, ಜಿಲ್ಲಾಡಳಿತ ಸಾಕಷ್ಟು ಕಸರತ್ತು ನಡೆಸಿದೆ. ಬೆಳ್ತಂಗಡಿ ತಾಲೂಕು ಸಿಪಿಐ(ಎಂ) ಮತ್ತು ಡಿವೈಎಫ್ಐಗಳು ರಾಜ್ಯ ಪೋಲೀಸ್ ಇಲಾಖೆಯ ಮೇಲೆ ಅಪನಂಬಿಕೆ ವ್ಯಕ್ತಪಡಿಸಿ ಪದೇ ಪದೇ ಪ್ರತಿಭಟನೆಗಳನ್ನು ನಡೆಸಿದ ಪರಿಣಾಮವಾಗಿ ಈಗ ಒಂದು ವರ್ಷಕ್ಕೂ ಮೀರಿ ಸಿಬಿಐ ತನಿಖೆಯನ್ನು ನಡೆಸುತ್ತಿದೆಯಾದರೂ, ಆರೋಪಿಗಳನ್ನು ಗುರುತಿಸಿ ಕಾನೂನುಕ್ರಮ ಕೈಗೊಳ್ಳಲು ಅದು ಕೂಡಾ ವಿಫಲವಾಗಿದೆ. ಸ್ಥಳೀಯ ಗಣ್ಯ ಪ್ರಭಾವಿಗಳು ಕೇಂದ್ರ ಸರಕಾರದ ಮೇಲೂ ಮೂಗುದಾರ ಹಾಕಬಲ್ಲರೆಂದು ತಿಳಿಯುತ್ತಿದೆ.

ಸೌಜನ್ಯ ಪ್ರತಿಭಟನೆಗಳ ಸಂದರ್ಭದಲ್ಲಿ ಡಿವೈಎಫ್ಐಯವರು ಬಹಿರಂಗಕ್ಕೆ ತಂದ ಇನ್ನೊಂದು ಮಾಹಿತಿ ಏನೆಂದರೆ ಕಳೆದ ಹತ್ತು ವರ್ಷಗಳಲ್ಲಿ ಬೆಳ್ತಂಗಡಿ ಪೋಲೀಸು ಠಾಣಾ ವ್ಯಾಪ್ತಿಯಲ್ಲಿ 500 ಕ್ಕೂ ಮೀರಿ ಅಸಹಜ ಸಾವುಗಳು ನಡೆದಿವೆ ಎಂಬುದು. ಅವುಗಳಲ್ಲಿ ಹೆಚ್ಚಿನ ಸಾವುಗಳು ಧರ್ಮಸ್ಥಳ ಗ್ರಾಮವೊಂದರಲ್ಲೇ ನಡೆದಿವೆ ಎಂಬುದು. ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಸಲ್ಲಿಸಿದ ಅರ್ಜಿಗೆ ಪೋಲೀಸು ಇಲಾಖೆಯೇ ಕೊಟ್ಟ ಮಾಹಿತಿ ಇದು. ದ.ಕ.ಜಿಲ್ಲೆಯಲ್ಲಂತೂ ಧರ್ಮಸ್ಥಳ ಸಂಸ್ಥೆಗಳು ಮತ್ತು ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಏನೇ ಕಾನೂನುಬಾಹಿರ ಕೃತ್ಯಗಳು ನಡೆದರೂ, ಅವನ್ನು ಗೌಣಗೊಳಿಸುವ ಜನಸಮುದಾಯ, ಭಕ್ತವೃಂದ ಮತ್ತು ಮಾಧ್ಯಮಗಳಿವೆ. ಐದುನೂರು ಮೀರಿದ ಅಸಹಜ ಸಾವುಗಳಿಗೆ ಸಂಬಂಧಿಸಿಯೂ ಸಮಗ್ರ ತನಿಖೆಯಾಗಬೇಕೆಂದು ಡಿವೈಎಫ್ಐ ಮತ್ತು ಸಿಪಿಐ(ಎಂ) ಎತ್ತಿದ ಪ್ರಶ್ನೆಗಳು ಪರಿಶೋಧನೆಗೆ ಅರ್ಹವೆಂದು ಹಾಗೂ ಧರ್ಮಸ್ಥಳದಲ್ಲಿ ಅಷ್ಟೊಂದು ಸಾವುಗಳು ಯಾಕೆ ಆಗುತ್ತಿವೆ ಎಂದು ಕಂಡುಹಿಡಿಯಬೇಕೆಂದು ಕರ್ನಾಟಕ ರಾಜ್ಯ ಸರಕಾರದ ಸದನ ಸಮಿತಿ ಇತ್ತೀಚೆಗೆ ಗುರುತಿಸಿದೆ.



ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಬಗೆಗಿನ ಸದನ ಸಮಿತಿ ಅಧ್ಯಕ್ಷ ವಿಧಾನ ಪರಿಷತ್ ಸದಸ್ಯ ವಿ.ಎಸ್.ಉಗ್ರಪ್ಪನವರ ನೇತೃತ್ವದಲ್ಲಿ ಜನವರಿ 23 ರಂದು ಮಂಗಳೂರಿನಲ್ಲಿ ನಡೆಸಿದ ಸಭೆಯ ವೇಳೆಗೆ ಬೆಳ್ತಂಗಡಿ ಪೋಲೀಸ್ ಠಾಣಾ ವ್ಯಾಪ್ತಿಯ ವಿದ್ಯಮಾನಗಳ ಬಗ್ಗೆ ವಿಶೇಷ ಲಕ್ಷ್ಯವಹಿಸಿ ಚರ್ಚಿಸಿತು. ಇತ್ತೀಚಿನ ಮೂರು ವರ್ಷಗಳಲ್ಲಿ ಧರ್ಮಸ್ಥಳ ಗ್ರಾಮದಲ್ಲಿ ವಾರ್ಷಿಕ ಸರಾಸರಿ 100 ಅಸಹಜ ಸಾವುಗಳು ಘಟಿಸಿವೆ ಎಂದು ಸಂಬಂಧಪಟ್ಟ ಪೊಲೀಸ್ ಎಸಿಪಿ ಪೂರಕ ವಿವರ ನೀಡಿದರು. ಸಭೆಯಲ್ಲಿ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಸದಸ್ಯ ಶೇಖರ ಲಾಯಿಲ ಈ ಪ್ರಶ್ನೆಯನ್ನು ಎತ್ತಿದ್ದರು. ಧರ್ಮಸ್ಥಳದ ಅಸಹಜ ಸಾವುಗಳಲ್ಲಿ ಹೆಚ್ಚಿನವುಗಳು ಸ್ನಾನಘಟ್ಟದಲ್ಲಿ ಮುಳುಗಿ ಆದವುಗಳು ಎಂದು ಪೋಲೀಸ್ ಅಧಿಕಾರಿಗಳು ಹೇಳುತ್ತಾರೆ. ಆದರೆ ಆಗಿರುವ ಅಸಹಜ ಸಾವುಗಳಲ್ಲಿ ಸ್ಥಳೀಯರು ಎಷ್ಟು ಹೊರಗಿನವರು ಎಷ್ಟು, ಗಂಡು ಎಷ್ಟು, ಹೆಣ್ಣು ಎಷ್ಟು ಎಂಬ ಮಾಹಿತಿಯನ್ನು ಅಧ್ಯಕ್ಷ ವಿ.ಎಸ್. ಉಗ್ರಪ್ಪನವರು ಕೇಳಿದಾಗ ಪೋಲೀಸು ಅಧಿಕಾರಿಗಳು ನಿರುತ್ತರಾದರು. ತಿರುಪತಿಗೆ ಧರ್ಮಸ್ಥಳಕ್ಕಿಂತ ಹೆಚ್ಚು ಯಾತ್ರಾರ್ಥಿಗಳು ಬರುತ್ತಿಲ್ಲವೆ? ಅಲ್ಲಿ ಯಾ-ಕೆ ಇಷ್ಟೊಂದು ಅಸಹಜ ಸಾವುಗಳು ಆಗುತ್ತಿಲ್ಲ ಎಂಬ ಪ್ರಶ್ನೆಗೂ ಅಧಿಕಾರಿಗಳಲ್ಲಿ ಉತ್ತರವಿರಲಿಲ್ಲ. ಬೆಳ್ತಂಗಡಿಯ ಅಸಹಜ ಸಾವುಗಳನ್ನು ತಡೆಹಿಡಿಯುವ ಸಂಬಂಧ ಅಧ್ಯಯನ ಮಾಡಲು ವಿಶೇಷ ಪೊಲೀಸು ದಳವನ್ನು ರಚಿಸುವಂತೆ ಶಿಫಾರಸು ಮಾಡುವುದಾಗಿ ಸಮಿತಿ ಘೋಷಿಸಿತು.

ಸೌಜನ್ಯ ಪ್ರಕರಣವೊಂದೇ ಜನತೆಯ ಮಧ್ಯೆ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಡಿವೈಎಫ್ಐ ಎತ್ತಿದ ಧರ್ಮಸ್ಥಳದ ಅಸಹಜ ಸಾವುಗಳ ಬಗ್ಗೆ ಸರಕಾರವೂ ಗಮನಹರಿಸುವಂತಾದುದು ಸದನ ಸಮಿತಿ ಸಭೆ ನಡೆದುದರಿಂದ ಎಂಬುದು ಸ್ಪಷ್ಟ. ಈ ನಿಟ್ಟಿನಲ್ಲಿ ಡಿವೈಎಫ್ಐ ನಡೆಸಿದ್ದ ಹೋರಾಟಗಳಿಗೂ ಒಂದು ಗೆಲುವು ಸಿಕ್ಕಿದಂತಾಗಿದೆ.

ದ.ಕ.ಜಿಲ್ಲೆಯಲ್ಲಿ 0–6 ವರ್ಷದ ಮಕ್ಕಳ ಲಿಂಗಾನುಪಾತದಲ್ಲಿ ಇಳಿಕೆಯನ್ನೂ ಸದನ ಸಮಿತಿ ಗಮನಿಸಿತು. 2011ರ ಜನಗಣತಿಯಂತೆ 1000 ಪುರುಷರಿಗೆ 1019 ಮಹಿಳೆಯರು ಇರುವ ಜಿಲ್ಲೆಯಲ್ಲಿ 0–6ರ ಗುಂಪಿನ ಮಕ್ಕಳಲ್ಲಿ 1000 ಕ್ಕೆ 947 ಇರುವುದಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಲು ಸಮಿತಿ ಬಯಸಿತು. ಜಿಲ್ಲೆಯಲ್ಲಿರುವ ಆಸ್ಪತ್ರೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭ್ರೂಣಲಿಂಗ ಪತ್ತೆ ಮಾಡಬಹುದಾದ ಸ್ಕ್ಯಾನಿಂಗ್ ಸೆಂಟರ್‌ಗಳಿರುವುದರ ಬಗ್ಗೆ ಸಮಿತಿ ಸದಸ್ಯೆ ಪ್ರಭಾ ಬೆಳವಂಗಲ ಗಮನ ಸೆಳೆದರು. ಆರೋಗ್ಯ ಇಲಾಖೆಯವರು ಅದಕ್ಕೆ ಸೂಕ್ತ ಉತ್ತರ ನೀಡಲಿಲ್ಲ. ರೋಗಿಗಳನ್ನು ಖಾಸಗೀ ಶುಶ್ರೂಷೆ ಕಡೆಗೆ ಅಟ್ಟುವುದು ನಡೆಯುತ್ತಿದೆ ಎಂಬುದಾಗಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ವಿವರಿಸಿದರು. ಹೆಣ್ಣು ಮಕ್ಕಳ ಅನುಪಾತ ಇಳಿಕೆ ಯಾಕಾಗುತ್ತಿದೆ ಎಂಬ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಯಬೇಕಾಗಿದೆ ಎಂಬುದಾಗಿ ಸಮಿತಿ ಸೂಚಿಸಿದೆ.



ಅದೇ ದಿನ ಉಡುಪಿ ಜಿಲ್ಲೆಯಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ನಡೆಸಿದ ಆರೋಗ್ಯ ಇಲಾಖೆಯ ಕುರಿತಾದ ಸಭೆಯಲ್ಲಿಯೂ 2011ರ ಜನಗಣತಿ ವೇಳೆಗೆ ಒಟ್ಟು ಮಹಿಳೆಯರ ಸಂ-ಖ್ಯೆಯೂ ದಶಕದ ಅಂತ್ಯಕ್ಕೆ ಇಳಿಮುಖವಾಗಿರುವುದು ದೃಢಪಟ್ಟಿದ್ದು, ಅದು ಮಾಧ್ಯಮದಲ್ಲಿ ವರದಿಯಾಗಿರುತ್ತಿದೆ. ಮುಂದುವರಿದ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾಕೆ ಹೀಗಾಗುತ್ತಿದೆ ಎಂಬುದು ಅಧ್ಯಯನ ಯೋಗ್ಯ ವಿಷಯ.

ಹೆಣ್ಣು ಮಕ್ಕಳೂ ಕಾಣೆಯಾಗುವುದು, ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಆರೋಪಗಳು ಸಾಬೀತಾಗದೆ ಇರುವುದು, ಅತ್ಯಾಚಾರ ಸಂತ್ರಸ್ತರಿಗೆ ಅತಿ ಕಡಿಮೆ ಮಂದಿಗೆ ಆರ್ಥಿಕ ಪರಿಹಾರ ನೀಡಿದ್ದು ಹೀಗೆ ದ.ಕ.ಜಿಲ್ಲೆಯಲ್ಲಿ ಮಹಿಳೆಯರ ಬಗ್ಗೆ ತೀರಾ ನಿರ್ಲಕ್ಷ್ಯ ಇದೆ ಎಂಬುದು ಸದನ ಸಮಿತಿ ಸಭೆಯಿಂದ ಬಹಿರಂಗವಾಗಿರುತ್ತದೆ. ಹೋರಾಟಗಾರ್ತಿಯರಾಗಿ ಗುರುತಿಸಲ್ಪಟ್ಟಿರುವ ಈ ಸಮಿತಿ ಸದಸ್ಯರಾದ ಕೆ.ಎಸ್.ವಿಮಲ, ಡಾ।ಲೀಲಾ ಸಂಪಿಗೆ, ಪ್ರಭಾ ಬೆಳವಂಗಲ, ಜ್ಯೋತಿ ಇವರುಗಳೂ ಈ ಸಭೆಯಲ್ಲಿ ಭಾಗವಹಿಸಿದ್ದರು. ■

ಅರೆ-ಬೆತ್ತಲೆ ಹಾಗೂ ಶೂ ಪಾಲಿಶ್ ಮಾಡುವ ಮೂಲಕ ಪ್ರತಿಭಟನೆ

ಜನವರಿ 12ರಿಂದ ಪ್ರಾರಂಭವಾದ ಅತಿಥಿ ಉಪನ್ಯಾಸಕರ ಪ್ರತಿಭಟನೆಯು ದಿನದಿಂದ ದಿನಕ್ಕೆ ಕಾವು ಪಡೆದುಕೊಂಡಿದೆ.

ರಾಜ್ಯಾದ್ಯಂತ 411 ಸರಕಾರಿ ಪದವಿ ಕಾಲೇಜುಗಳಲ್ಲಿ 14,531 ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದು, ಈಗ ತರಗತಿ ಬಹಿಷ್ಕರಿಸುವುದರಿಂದ ಲಕ್ಷಾಂತರ ಪದವಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮಗಳು ನಡೆಯದೆ ತೊಂದರೆಗೀಡಾಗಿದ್ದಾರೆ. ಸೆಮಿಸ್ಟರ್ ಪದ್ಧತಿ ಇರುವುದರಿಂದ ಶೈಕ್ಷಣಿಕ ಚಟುವಟಿಕೆಗಳಿಗೂ ತೊಂದರೆಯಾಗಲಿದೆ. ಈ ಬಗ್ಗೆ ಕಿಂಚತ್ತೂ ಗಮನ ಹರಿಸಿದ ಉನ್ನತ ಶಿಕ್ಷಣ ಇಲಾಖೆ, ರಾಜ್ಯ ಸರಕಾರ ಅತ್ಯಂತ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ. ಅಷ್ಟೇ ಅಲ್ಲ ಅತಿಥಿ ಉಪನ್ಯಾಸಕರಿಗೆ ಕಳೆದ ನಾಲ್ಕು ತಿಂಗಳ ಸಂಬಳವನ್ನು ಬಿಡುಗಡೆ ಮಾಡಿಲ್ಲ. 14,531 ಅತಿಥಿ ಉಪನ್ಯಾಸಕರ ಪೈಕಿ 6 ಸಾವಿರಕ್ಕಿಂತ ಹೆಚ್ಚು ಮಹಿಳಾ ಅತಿಥಿ ಉಪನ್ಯಾಸಕರು ಇದ್ದು ಹಗಲು-ರಾತ್ರಿ ಎನ್ನದೆ ಬೀದಿಗಿಳಿದು ಹೋರಾಟಕ್ಕಿಳಿದಿದ್ದಾರೆ.

ಉನ್ನತ ಶಿಕ್ಷಣ ಸಚಿವರಾದ ಟಿ.ಬಿ.ಜಯಚಂದ್ರರವರನ್ನು ಬಸವರಾಜ



ಹೊರಟ್ಟಿ ಒಳಗೊಂಡು ಸಂಘಟನೆಯ ಮುಖಂಡರು ಭೇಟಿ ಮಾಡಿದಾಗ ಬೇಡಿಕೆ ಈಡೇರಿಸಲು ಕ್ರಮವಹಿಸದೆ ಪ್ರತಿಭಟಕಾರರಿಗೆ ಬೇಜವಾಬ್ದಾರಿ ಹೇಳಿಕೆ ನೀಡಿದನ್ನು ಖಂಡಿಸಿ ದಿನಾಂಕ ಜನವರಿ 29ರಂದು ಬೆಂಗಳೂರು, ಮಂಗಳೂರು, ಶಿವಮೊಗ್ಗ, ಕಲಬುರಗಿ, ಮೈಸೂರು, ಧಾರವಾಡ ಸೇರಿದಂತೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗಿದೆ.

ಹಾವೇರಿಯಲ್ಲಿ ಅರೆ-ಬೆತ್ತಲೆ ಹಾಗೂ ಮೌನ ಪ್ರತಿಭಟನೆಗಳು ನಡೆದಿದೆ. ಅಷ್ಟೇ ಅಲ್ಲದೆ ಜಿಲ್ಲಾಧಿಕಾರ ಕಛೇರಿ ಹೋಗುವ ವಾಹನಗಳನ್ನು ಸ್ವಚ್ಛಗೊಳಿಸುವುದು ಮತ್ತು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಶೂಗಳನ್ನು ಪಾಲಿಶ್ ಮಾಡುವ ಮೂಲಕವೂ ಪ್ರತಿಭಟನೆಗಳು ನಡೆದಿದೆ. ■


PEA½ZAAY

ನಮ್ಮ ದೇಶದಲ್ಲಿ ಪ್ರಶಸ್ತಿಗಳು ನಮ್ಮ ವ್ಯವಸ್ಥೆಯನ್ನು ಅಣಕಿಸುವಂತಿವೆ. ಫಿಲಂ, ರಾಷ್ಟ್ರೀಯ ಅಥವಾ ಪದ್ಮ ಪ್ರಶಸ್ತಿಗಳಲ್ಲಿ ಅಥೆಂಟಿಕ್ ಎನ್ನುವುದು ಉಳಿದಿಲ್ಲ.

– ಅನುಪಮ್ ಖೇರ್ (ಬಾಲಿವುಡ್ ನಟ)
ಜನವರಿ 26, 2010
(ಈ ಬಾರಿಯ ಪದ್ಮ ಪ್ರಶಸ್ತಿ ವಿಜೇತ)

ಈಗ ಏನಂತೀರಿ ಸಾರ್! ಈಗ ಪದ್ಮ ಪ್ರಶಸ್ತಿ ಅಥೆಂಟಿಕ್ ಆಗೋಯ್ತಾ?

ಶಿಕ್ಷಣದಲ್ಲಿ ಆಳುವ ಪಕ್ಷದ ಹೊಸ ಅಜೆಂಡಾ



• ಪ್ರೊ. ರಾಜೇಂದ್ರ ಚೆನ್ನಿ

ಹೈದರಾಬಾದ್ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲಾನ ಆತ್ಮಹತ್ಯೆಯನ್ನು ದಲಿತ ಹಾಗೂ ಪ್ರಗತಿಪರ ವಿದ್ಯಾರ್ಥಿಗಳು ಸಾಂಸ್ಥಿಕ ಕೊಲೆ (Institutional Murder) ಎಂದೇ ನೋಡುತ್ತಿರುವುದಕ್ಕೆ ಬಲವಾದ ಕಾರಣಗಳಿವೆ. ಒಂದು ಕಾರಣವೆಂದರೆ, ಭಾರತದ ಮುಂಚೂಣಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇಂಥ ಅನೇಕ ಆತ್ಮಹತ್ಯೆಗಳು ಆಗಿರುವುದರಿಂದ ಅವು ವೈಯಕ್ತಿಕ ಕಾರಣಗಳಿಂದಾಗಿ ಅಲ್ಲ, ನಮ್ಮ ಶಿಕ್ಷಣ ಸಂಸ್ಥೆಗಳ ರೋಗಗ್ರಸ್ತ ವಾತಾವರಣದಿಂದ ಎನ್ನಬಹುದಾಗಿದೆ. ಈ ಸಂಸ್ಥೆಗಳು ನಮ್ಮ ಸಂವಿಧಾನ ಮತ್ತು ಯಾವುದೇ ದೇಶದ ಶಿಕ್ಷಣ ನೀತಿಯು ಬಯಸುವ ಸಮಾನತೆ, ವೈಜ್ಞಾನಿಕ ಮನೋಭಾವ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಗಳಲ್ಲಿ ನಂಬಿಕೆಯನ್ನಿಟ್ಟು ಅವುಗಳನ್ನು ತಮ್ಮ ವಾತಾವರಣದಲ್ಲಿ, ಆಡಳಿತದಲ್ಲಿ ಹಾಗೂ ಕಾರ್ಯವಿಧಾನದಲ್ಲಿ ಅನುಷ್ಠಾನಕ್ಕೆ ತಂದಿಲ್ಲ. ಈ ಮೌಲ್ಯಗಳ ತದ್ವಿರುದ್ಧವಾಗಿ ದೇಶದ ವಿಶ್ವವಿದ್ಯಾಲಯಗಳು ಜಾತೀಯತೆ ಹಾಗೂ ಭ್ರಷ್ಟಾಚಾರದ ಪಾಪಕೂಪಗಳಾಗಿವೆ. ಉದಾಹರಣೆಗೆ ಕರ್ನಾಟಕ ರಾಜ್ಯದ ಯಾವುದೇ ಮೂಲೆಗೆ ನೀವು ಹೋದರೂ ಅಲ್ಲಿಯ ವಿಶ್ವವಿದ್ಯಾನಿಲಯದ ಕುಲಪತಿಗಳು ಯಾವ ಜಾತಿಯ ಆಧಾರದ ಮೇಲೆ ಹಾಗೂ ಎಷ್ಟು ಹಣವನ್ನು ತೆತ್ತು ಆ ಹುದ್ದೆಯನ್ನು ಪಡೆದುಕೊಂಡಿದ್ದಾರೆ ಎನ್ನುವುದನ್ನು ಜನರು ಮುಕ್ತವಾಗಿ ಚರ್ಚಿಸುವುದನ್ನು ಕಾಣುತ್ತೀರಿ. ಜಾತಿ ಹಾಗೂ ಹಣದ ಜೊತೆಗೆ ರಾಜಕೀಯ ಪ್ರಭಾವವೂ ಕೆಲಸ ಮಾಡುತ್ತದೆ. ಕುಲಪತಿಗಳ ಆಯ್ಕೆಯಿಂದ ಶುರುವಾದ ಜಾತೀಯತೆಯು ಅಲ್ಲಿಯ ಶಿಕ್ಷಕರು ಹಾಗೂ ಸಿಬ್ಬಂದಿಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವುದು ಆಶ್ಚರ್ಯವಲ್ಲ.

ಮೆರಿಟ್ ಹೆಸರಲ್ಲಿ ಅಕಾಡೆಮಿಕ್ ಬ್ರಾಹಣವಾದ

ಹೀಗೆ ಆಗುವುದಕ್ಕೆ ಪೂರಕವಾದ ಒಂದು ಕಾರಣವೆಂದರೆ ಉನ್ನತ ಶಿಕ್ಷಣವು ಜಾಗತೀಕರಣದಿಂದಾಗಿ ಒಂದು ವರ್ಗಕ್ಕೆ ತೆರೆದುಕೊಂಡಿರುವ ಅವಕಾಶಗಳಿಗೆ ರಹದಾರಿಯಾಗಿದೆ. ಹೀಗಾಗಿ ಎಲ್ಲಾ ಜಾತಿಗಳು ಶಿಕ್ಷಣದ ಮೂಲಕ ಅವಕಾಶಗಳನ್ನು ಪಡೆಯುವ ಸ್ಪರ್ಧೆಯಲ್ಲಿವೆ. ಆದರೆ, ಜಾತೀಯತೆಯ ಒಂದು ಲಕ್ಷಣವೆಂದರೆ ಅದು ವೈಯಕ್ತಿಕ ಬುದ್ಧಿ ಸಾಮರ್ಥ್ಯಗಳ ಬದಲಾಗಿ ಜಾತಿಬಾಂಧವ್ಯದ ಮೂಲಕ ಎಲ್ಲವನ್ನೂ ಪಡೆಯಲು ಪ್ರಯತ್ನಿಸುತ್ತದೆ. ಹೀಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಜಾತಿಗ್ರಸ್ತವಾದ ವಾತಾವರಣವು ಪ್ರಬಲವಾಗಿ ಬೆಳೆಯುತ್ತದೆ. ದೇಶದ ಮುಂಚೂಣಿ ಸಂಸ್ಥೆಗಳಾದ ಐಐಟಿ, ಐಐಎಂ ಹಾಗೂ ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಅಖಿಲ ಭಾರತೀಯ ಸ್ವರೂಪದ ಸಂಸ್ಥೆಗಳು ಹಾಗೂ ವಿಶ್ವದರ್ಜೆಯ ಶಿಕ್ಷಣಕ್ಕಾಗಿ ಸರಕಾರದಿಂದ ಅಪಾರವಾದ ಧನಸಹಾಯವನ್ನು ಮತ್ತು ಆಚೆ ಮೊನ್ನೆಯವರೆಗೂ ಸ್ವಾಯತ್ತತೆಯನ್ನು ಹೊಂದಿದ್ದವು ಎಂದು ನಂಬಲಾಗಿತ್ತು. ಅಂ-ದರೆ, ಈ ಕಾರಣಗಳಿಂದಾಗಿ ಈ ಸಂಸ್ಥೆಗಳಲ್ಲಿ ಜಾತೀಯತೆಯನ್ನು ಮೀರಿದ ಸೆಕ್ಯುಲರ್ ಆದ ಹಾಗೂ ವೈಚಾರಿಕ ಸ್ವಾತಂತ್ರ್ಯ, ಸಮಾನತೆಗಳು ಇತರ ಸಂಸ್ಥೆಗಳಿಗಿಂತ ಮಿಗಿಲಾಗಿರುತ್ತವೆಯೆಂದು ನಂಬಲಾಗಿತ್ತು. ಇದು ತಕ್ಕಮಟ್ಟಿಗೆ ನಿಜವೂ ಆಗಿತ್ತು. ಆದರೆ, ನಮ್ಮ ದೇಶದಲ್ಲಿ ಸುಪ್ತವಾಗಿ ಕೆಲಸ ಮಾಡುವ

ಈ ಅಜೆಂಡಾಗೆ ಈಗ ಸೇರಿಕೊಂಡಿರುವ ಹೊಸ ಅಂಶವೆಂದರೆ ಐಐಟಿ, ಕೇಂದ್ರೀಯ ವಿಶ್ವವಿದ್ಯಾಲಯ ಇಂಥ ಮುಂಚೂಣಿ ಸಂಸ್ಥೆಗಳಲ್ಲಿ ಅಂಬೇಡ್ಕರ್‌ವಾದಿ ದಲಿತ ವಿದ್ಯಾರ್ಥಿಗಳ ಮೇಲೆ ಸಾಂಸ್ಥಿಕವಾದ ದೌರ್ಜನ್ಯವನ್ನು ನಡೆಸುವುದು. ಈ ಕೆಲಸದ ಎರಡು ಉದ್ದೇಶಗಳೆಂದರೆ ದಲಿತ ಯುವಜನತೆಯನ್ನು ಅತ್ಯುನ್ನತ ಶಿಕ್ಷಣದಿಂದ ಹೊರಗೆ ಹಾಕುವುದು ಮತ್ತು ಬಲಪಂಥೀಯ ಸಿದ್ಧಾಂತಕ್ಕೆ ಅತ್ಯಂತ ಪ್ರಬಲ ಸವಾಲಾಗಿರುವ ಅಂಬೇಡ್ಕರ್‌ವಾದವು ಕ್ಯಾಂಪಸ್‌ಗಳಲ್ಲಿ ಬೆಳೆಯದಂತೆ ಮಾಡುವುದು.

ಜಾತೀಯತೆಯಿಂದಾಗಿ ಈ ಮುಂಚೂಣಿ ಸಂಸ್ಥೆಗಳಲ್ಲಿ ಒಂದು ಬಗೆಯ ಅಕಾಡೆಮಿಕ್ ಬ್ರಾಹ್ಮಣವಾದ ಬೆಳೆಯುತ್ತ ಬಂದಿತು. ಇದು "ಮೆರಿಟ್"ನ ಹೆಸರಿನಲ್ಲಿ ದಲಿತ ಸಮುದಾಯದ ವಿದ್ಯಾರ್ಥಿಗಳ ವಿರುದ್ಧ ಕೆಲಸ ಮಾಡುತ್ತ ಅವರಲ್ಲಿ ಕೀಳರಿಮೆ ಅಭದ್ರತೆಗಳನ್ನು ಹುಟ್ಟಿಸುತ್ತಿತ್ತು. ಈ ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯ ಕಡಿಮೆ ಇರುತ್ತದೆ, ಅವರಿಗೆ ಇಂಗ್ಲಿಷ್ ಬರುವುದಿಲ್ಲ, ಹೀಗಾಗಿ ಇಂಥ "ಇತರೇ" ವಿದ್ಯಾರ್ಥಿಗಳಿಂದಾಗಿ ಈ ಸಂಸ್ಥೆಗಳ ಗುಣಮಟ್ಟ ಕುಸಿಯುತ್ತಿದೆಯೆಂದು ಪ್ರಬಲವಾದ ಅಪನಂಬಿಕೆಗಳನ್ನು ಹುಟ್ಟಿಸಲಾಯಿತು. ಇದರ ಪರಿಣಾಮವಾಗಿ ಅನೇಕ ದಲಿತ ವಿದ್ಯಾರ್ಥಿಗಳು ಶಿಕ್ಷಣವನ್ನು ಪೂರೈಸದೇ ಹೊರಬರುತ್ತಿದ್ದರು.

ಆದರೆ, ಕ್ರಮೇಣವಾಗಿ ಇಂಥ ಜಾತೀಯತೆಯನ್ನು ವಿರೋಧಿಸುತ್ತಾ ಸಂಘಟಿತವಾಗುತ್ತ ಬಂದರು. ಇತ್ತೀಚಿನ ದಶಕಗಳಲ್ಲಿ ಈ ಮುಂಚೂಣಿ ಸಂಸ್ಥೆಗಳಲ್ಲಿ ಅಂಬೇಡ್ಕರ್‌ವಾದಿ, ಎಡಪಂಥೀಯ ಸಂಘಟನೆಗಳು ತೀವ್ರ ಪ್ರತಿಭಟನಾತ್ಮಕವಾದ ವೈಚಾರಿಕತೆ ಹಾಗೂ ಕಾರ್ಯವೈಖರಿಗಳನ್ನು ರೂಪಿಸಿಕೊಂಡವು. ಇದೇ ಹೊತ್ತಿಗೆ ದೇಶದ ಅನೇಕಾನೇಕ ಮೇಲು/ಮಧ್ಯಮ ಜಾತಿಗಳಿಂದ ಬಂದ ವಿದ್ಯಾರ್ಥಿಗಳು ಬಲಪಂಥೀಯ ಸಿದ್ಧಾಂತಗಳನ್ನು, ಆರ್‌ಎಸ್‌ಎಸ್ ನಂಟಿನ ವಿದ್ಯಾರ್ಥಿ ಸಂಘಟನೆಗಳನ್ನು ಒಪ್ಪಿಕೊಳ್ಳತೊಡಗಿದರು. ಈ ಜಾತಿಗಳನ್ನು ಒಳಗೊಂಡಿರುವ ಭಾರತದ ಶಿಕ್ಷಿತ ಮಧ್ಯಮವರ್ಗವು ಬಲಪಂಥೀಯ ಸಿದ್ಧಾಂತಗಳನ್ನು ನಂಬಿಕೊಂಡು ಬಲಪಂಥೀಯ ರಾಜಕೀಯದ ಪರವಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಎರಡು ಬೆಳವಣಿಗೆಗಳಿಂದಾಗಿ ಒಂದು ಕಡೆಗೆ ತೀವ್ರ ಪ್ರತಿಭಟನಾತ್ಮಕ ಧೋರಣೆಗಳ ದಲಿತ ವಿದ್ಯಾರ್ಥಿ ಸಂಘಟನೆಗಳು ಪ್ರಬಲವಾಗುತ್ತ ಬಂದು ಈಗ ನಿರಂತರ ಸಂಘರ್ಷದ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೇ ಬಿಜೆಪಿ ಪಕ್ಷವು ಅಧಿಕಾರಕ್ಕೆ ಬಂದ ಕೂಡಲೇ ಈ ಸಂಸ್ಥೆಗಳ ಸ್ವಾಯತ್ತತೆಯನ್ನು ಮೊಟಕುಮಾಡಿ, ಅಧಿಕಾರಸ್ಥ ರಾಜಕೀಯವು ಈ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡಲು ಅನುಕೂಲವಾಗುವಂತೆ ಈ ಸಂಸ್ಥೆಗಳ ಸಂವಿಧಾನಗಳನ್ನೇ ಬದಲಿಸುತ್ತಿದೆ. ಬಹುಮುಖ್ಯವಾಗಿ ಈ ಸಂಸ್ಥೆಗಳಿಗೆ ಆರ್‌ಎಸ್‌ಎಸ್ ಬೆಂಬಲಿಗರನ್ನು ನೇಮಕ ಮಾಡುತ್ತಿದೆ. ಐ.ಸಿ.ಎಚ್.ಆರ್, ಎನ್.ಬಿ.ಟಿ, ಎಫ್.ಟಿ.ಐ.ಐ ಈ ಎಲ್ಲಾ ಸಂಸ್ಥೆಗಳಲ್ಲಿ ಇದನ್ನು ಮಾಡಲಾಗಿದೆ. ಅಲ್ಲದೇ ಯಾವ ಬಲಪಂಥೀಯ ರಾಜಕಾರಣಿಯು ಯಾವುದೇ ಶಿಕ್ಷಣ ಸಂಸ್ಥೆಯ ಬಗ್ಗೆ ಆಕ್ಷೇಪಿಸಿದರೆ ಅದನ್ನು ನೇರವಾಗಿ ಉನ್ನತ ಶಿಕ್ಷಣ ಸಚಿವಾಲಯವು ಪರಿಗಣಿಸಿ ಆ ಸಂಸ್ಥೆಯ ಮೇಲೆ ಒತ್ತಡಗಳನ್ನು ತರಲು ಆರಂಭಿಸುತ್ತದೆ. ಇದರ ಪ್ರಯೋಜನವನ್ನು ಅನೈತಿಕವಾಗಿ ಬಳಸಿಕೊಳ್ಳುತ್ತಿರುವುದು ಬಲಪಂಥೀಯ ವಿದ್ಯಾರ್ಥಿ ಸಂಘಟನೆಗಳು.

ಹುಸಿ ರಾಷ್ಟ್ರೀಯತೆ ಮೂಲಕ ದೌರ್ಜನ್ಯ

ರೋಹಿತ್ ವೇಮುಲ ಪ್ರಕರಣವನ್ನೇ ತೆಗೆದುಕೊಳ್ಳಿ. ರೋಹಿತ್ ಸೇರಿದಂತೆ ಹಲವು ದಲಿತ ವಿದ್ಯಾರ್ಥಿಗಳ ವಿರುದ್ಧ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳಲು ಎರಡು ಕಾರಣಗಳನ್ನು ತೋರಿಸಲಾಗಿದೆ. ಒಂದು, ಅವರು ಬಲಪಂಥೀಯ ವಿದ್ಯಾರ್ಥಿ ಸಂಘಟನೆಯ ವಿದ್ಯಾರ್ಥಿ ಧುರೀಣನ ಮೇಲೆ ದೈಹಿಕ ಹಲ್ಲೆ ಮಾಡಿದರು ಮತ್ತು ಅದರಿಂದಾಗಿ ಗಾಯಗೊಂಡು ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಎನ್ನುವುದು. ಅವನ ಜೊತೆಗೆ ಚಕಮಕಿ ನಡೆದಿರುವುದು ನಿಜ. ಆದರೆ ಅವನು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ಸೇರಿದ್ದು ಶುದ್ಧಸುಳ್ಳು ಎನ್ನುವುದನ್ನು ಪೊಲೀಸ್ ತನಿಖೆಯು ಸಾಬೀತುಮಾಡಿದೆ. ಆತನಿಗೆ ಸಣ್ಣಪುಟ್ಟ ಗಾಯಗಳಿದ್ದವು; ಅವನಿಗೆ ಅಪೆಂಡಿಸೈಟಿಸ್‌ಗಾಗಿ ಚಿಕಿತ್ಸೆ ನಡೆಯಿತು ಎನ್ನುವುದನ್ನು ಪೊಲೀಸ್ ವರದಿ ಖಚಿತವಾಗಿ ಹೇಳಿದ್ದನ್ನು ಎಲ್ಲಾ ಪ್ರಮುಖ ದಿನಪತ್ರಿಕೆಗಳು ದಾಖಲಿಸಿವೆ. ಅಂದರೆ, ದಲಿತ ವಿದ್ಯಾರ್ಥಿಗಳ ಮೇಲೆ ಬಂದ ಆಪಾದನೆ, ಅವರ ಮೇಲೆ ಕೈಕೊಂಡ ಶಿಸ್ತಿನ ಕ್ರಮಗಳಿಗೆ ಕಾರಣವಾದದ್ದು ಬಲಪಂಥೀಯ ವಿದ್ಯಾರ್ಥಿ ಸಂಸ್ಥೆಯ ಮುಖಂಡನೊಬ್ಬ ಹೇಳಿದ ಸುಳ್ಳು! ಹೀಗೆ ಮಾಡಿದ್ದು ಕ್ರಿಮಿನಲ್ ಕೆಲಸವಲ್ಲವೇ? ಅದು ಮುಂದೆ ರೋಹಿತ್‌ನ ಆತ್ಮಹತ್ಯೆಗೆ ಪರೋಕ್ಷವಾಗಿ ಕಾರಣವಾಗಲಿಲ್ಲವೇ? ತನಿಖೆ ಆಗಬೇಕಾಗಿರುವುದು ಈ ವಿಷಯದ ಬಗ್ಗೆ.

ಇನ್ನೊಂದು ಕಾರಣವೆಂದು ಹೇಳಲಾಗುತ್ತಿರುವುದು ದಲಿತ ವಿದ್ಯಾರ್ಥಿಗಳು ಯಾಕೂಬ್ ಮೆಮನ್‌ನ ಪರವಾಗಿ ಅಂದರೆ ರಾಷ್ಟ್ರಕ್ಕೆ ವಿರೋಧಿಯಾಗಿ ವರ್ತಿಸಿದರು ಎನ್ನುವುದು. ಈ ವಿಷಯದ ಬಗ್ಗೆ ಬಂಡಾರು ದತ್ತಾತ್ರೇಯ ಅವರು ಉನ್ನತ ಶಿಕ್ಷಣ ಸಚಿವಾಲಯಕ್ಕೆ ಪತ್ರ ಬರೆದು, ಸಚಿವಾಲಯವು ಅಸಹಜವಾದ ಒತ್ತಡವನ್ನು ವಿಶ್ವವಿದ್ಯಾನಿಲಯದ ಮೇಲೆ ಹೇರಿದ್ದು ಮುಂದೆ ರೋಹಿತನ ಆತ್ಮಹತ್ಯೆಗೆ ಕಾರಣವಾಯಿತು. ಬಂಡಾರು ದತ್ತಾತ್ರೇಯ ಅವರು ಯಾವ ಸಮಗ್ರ ತನಿಖೆಯ ಆಧಾರದ ಮೇಲೆ "ಹೈದರಾಬಾದ್ ವಿಶ್ವವಿದ್ಯಾನಿಲಯವು ರಾಷ್ಟ್ರವಿರೋಧಿ ಚಟುವಟಿಕೆಗಳ ತಾಣವಾಗಿದೆ" ಎಂದು ಪತ್ರ ಬರೆದ-ರೋ ಅದು ಯಾರಿಗೂ ಗೊತ್ತಿಲ್ಲ. ಇದು ನಿಜವಾಗಿದ್ದರೆ ವಿಶ್ವವಿದ್ಯಾನಿಲಯವು ದಲಿತ ವಿದ್ಯಾರ್ಥಿಗಳನ್ನು ನೇರವಾಗಿ ಜೈಲಿಗೆ ಕಳುಹಿಸಬಹುದಿತ್ತಲ್ಲ? ಯಾಕೆ ಅವರ ಮೇಲಿನ ಆರೋಪಗಳು ಸಾಬೀತಾಗಿಲ್ಲವೆಂದು ಹೇಳಿತ್ತು? ಉತ್ತರ ಸರಳವಾಗಿದೆ. ಹುಸಿ ರಾಷ್ಟ್ರೀಯತೆ ಹಾಗೂ ಹುಸಿ ಧರ್ಮಗಳ ಮೂಲಕ ದಲಿತ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದೌರ್ಜನ್ಯ ನಡೆಸುವುದು ಸದ್ಯದ ಬಲಪಂಥೀಯ ರಾಜಕೀಯವಾಗಿದೆ. ಇದನ್ನು ದೇಶದ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ಪ್ರಯೋಗಿಸಲಾಗುತ್ತಿದೆ. ಹಲ್ಲೆ ಹಾಗೂ ದೈಹಿಕ ಹಿಂಸೆ ನಡೆದಿದೆಯೆಂದು ಸುಳ್ಳು ದೂರನ್ನು ಕೊಟ್ಟವರ ಬಗ್ಗೆ ತನಿಖೆ ಮಾಡುವುದರ ಬದಲಾಗಿ ರೋಹಿತ್ ವೇಮುಲನು ಹುಟ್ಟಿದ ಜಾತಿ ಯಾವುದು ಎಂದು ತನಿಖೆ ಮಾಡಲಾಗುತ್ತಿದೆ. ಅವನು ಹುಟ್ಟಿದ ಜಾತಿಯು ಅಧಿಕೃತವಾದ ಪರಿಶಿಷ್ಟ ಜಾತಿ ಜನಾಂಗಗಳ ಪಟ್ಟಿಯಲ್ಲಿ ಇಲ್ಲದಿದ್ದರೆ ಅಂಥ ಪ್ರತಿಭಾವಂತನ ಆತ್ಮಹತ್ಯೆಗೆ ಕಾರಣವಾದ ಸಂಗತಿಗಳನ್ನು ಮರೆತುಬಿಡಬಹುದೆ? ಅಥವಾ ಕಾರಣರಾದವರು ತಪ್ಪಿತಸ್ಥರಲ್ಲವೆಂದು ಒಪ್ಪಬೇಕೆ?

ಹೊಸ ಅಜೆಂಡಾದ ವಿರುದ್ಧ ಪ್ರತಿರೋಧ

ತನಿಖೆಯು ಈ ಜಾಡಿನಲ್ಲಿ ನಡೆದರೆ ಅದರ ಫಲಿತಾಂಶವನ್ನು ಈಗಲೇ ಊಹಿಸಬಹುದಾಗಿದೆ. ನಿಯಮ ಕಾನೂನುಗಳ ಟ್ರ್ಯಾಫಿಕ್ ಜ್ಯಾಮ್‌ನಲ್ಲಿ ಸತ್ಯವು ಕಳೆದುಹೋಗುತ್ತದೆ. ತ್ವರಿತವಾಗಿ ಬದಲಾಗುತ್ತಿರುವ ಸಮಾಜದಲ್ಲಿ ಹುಟ್ಟಿಕೊಳ್ಳುವ ವೈರುಧ್ಯಗಳನ್ನು ನಿಭಾಯಿಸುವ ಸಾಮರ್ಥ್ಯವು ನಮ್ಮ ಶಿಕ್ಷಣ ಸಂಸ್ಥೆಗಳಿಗೆ ಇಲ್ಲ. ಇನ್ನು ಜಾತಿ, ಶೋಷಣೆ, ಅವಮಾನ ಇಂಥ ಸೂಕ್ಷ್ಮವಿಷಯಗಳನ್ನು ಅವು ಅರ್ಥಮಾಡಿಕೊಳ್ಳುವುದು ಅಸಾಧ್ಯವೇ ಸರಿ. ಆದರೆ ತುರ್ತಾಗಿ ಆಗಬೇಕಾಗಿರುವ ಕೆಲಸವೆಂದರೆ ಆಧುನಿಕ ಜಗತ್ತಿನ ಸಂಕೇತಗಳಾಗಿರುವ ವಿದ್ಯಾಸಂಸ್ಥೆಗಳಲ್ಲಿ ಬಲಪಂಥೀಯ ರಾಜಕೀಯ ಪಕ್ಷ ಹಾಗೂ ಸಂಸ್ಥೆಗಳು ತಮ್ಮ ಮನುವಾದವನ್ನು ಹೇರಲು ಅವಕಾಶವಿರದಂತೆ ಪ್ರತಿಭಟನೆಯ ಮೂಲಕ ಒತ್ತಡವನ್ನು ತರಬೇಕಾಗಿದೆ. ಆದರೆ, ಅದು ಒಟ್ಟಾ-ರೆಯಾಗಿ ನಮ್ಮನ್ನೆಲ್ಲ ಪೀಡಿಸುತ್ತಿರುವ ಅಸಹಿಷ್ಣುತೆಯ ವಿರುದ್ಧದ ಸಾಮುದಾಯಿಕವಾದ ಹೋರಾಟವಾಗಿ ಆಗಬೇಕಿದೆ. ನನ್ನ ದೃಷ್ಟಿಯಲ್ಲಿ ರೋಹಿತ್‌ನ ಆತ್ಮಹತ್ಯೆಯನ್ನು ಒಂದು ಬಿಡಿಯಾದ ಘಟನೆಯನ್ನಾಗಿ ನೋಡಲಾಗದು. ಅದು ಒಂದು ನಿರ್ದಿಷ್ಟ ಚರಿತ್ರೆಯ ಫಲವಾಗಿದೆ. ಸ್ವಾತಂತ್ರ್ಯಪೂರ್ವ ಕಾಲದಿಂದ ಆರಂಭವಾದ ಸಾಂಸ್ಕೃತಿಕ ಹಾಗೂ ರಾಜಕೀಯ ಸಂಘರ್ಷದ ನಿಡಿದಾದ ನೆರಳಿನಲ್ಲಿ ಈಗಲೂ ನಾವು ಇದ್ದೇವೆ. ಸಾಂಪ್ರದಾಯಿಕ ಮೌಲ್ಯಗಳು, ನಡವಳಿಕೆ, ಕಟ್ಟಳೆಗಳು, ಜಾತಿ ವ್ಯವಸ್ಥೆ, ಸ್ತ್ರೀಪುರುಷರ ನಡುವಣ ಅಸಮಾನತೆ ಇವುಗಳ ವಿರುದ್ಧ ಬಹುದೊಡ್ಡ ಸಂಘರ್ಷವು ಅಂದು ಶುರುವಾಯಿತು. ಸಮಾನತೆ, ಸೆಕ್ಯುಲರ್‌ವಾದ, ಜಾತಿ ವ್ಯವಸ್ಥೆಯ ವಿರೋ ಧ ಇಂಥ ನಾಗರಿಕ ಮೌಲ್ಯಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದ ಫಲವಾಗಿ ಸ್ವಾತಂತ್ರ್ಯ ಹಾಗೂ ಸಂವಿಧಾನಗಳನ್ನು ಪಡೆದುಕೊಂಡವು.

ಆದರೆ, ಸ್ವಾತಂತ್ರ್ಯಪೂರ್ವ ಕಾಲದಿಂದಲೇ ಬ್ರಾಹ್ಮಣವಾದಿ ಮನುಷ್ಯವಿರೋಧಿ ಸಿದ್ಧಾಂತಗಳನ್ನು ಪ್ರತಿಪಾದಿಸುವ ಬಲಪಂಥೀಯ ಸಂಘಟನೆಗಳೂ ಬೆಳೆಯುತ್ತ ಬಂದವು. ಅನೇಕ ಸಂಕೀರ್ಣವಾದ ಕಾರಣಗಳಿಂದಾಗಿ ಈಗ ಚುನಾವಣಾ ರಾಜಕೀಯದ ಮೂಲಕ ಈ ಸಂಘಟನೆಗಳ ರಾಜಕೀಯ ಪ್ರತಿನಿಧಿಯಾದ ಪಕ್ಷವು ಅಧಿಕಾರಕ್ಕೆ ಬಂದಿದೆ. ಈ ಹಿಂದೆಯೂ ನಾವು ನೋಡಿದಂತೆ ಅಧಿಕಾರಕ್ಕೆ ಬಂದಕೂಡಲೇ ಈ ಪಕ್ಷವು ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಹಸ್ತಕ್ಷೇಪವನ್ನು ಮಾಡತೊಡಗುತ್ತದೆ. ಪಠ್ಯಗಳ ಕೇಸರೀಕರಣ, ಇತಿಹಾಸ ಕಥನಗಳನ್ನು ತಿರುಚುವುದು, ಶಿಕ್ಷಣ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ಹಿಂಬಾಲಕರನ್ನು ಆಡಳಿತದ ಸ್ಥಾನಗಳಿಗೆ ನೇಮಕಮಾಡುವುದು, ಎಡಪಂಥೀಯ ಶಿಕ್ಷಕರು ಹಾಗೂ ವಿದ್ವಾಂಸರನ್ನು ಪೀಡಿಸುವುದು – ಇವೆಲ್ಲ ಅದರ ಅಜೆಂಡಾದ ಅಂಶಗಳಾಗಿವೆ. ಈ ಅಜೆಂಡಾಗೆ ಈಗ ಸೇರಿಕೊಂಡಿರುವ ಹೊಸ ಅಂಶವೆಂದರೆ ಐಐಟಿ, ಕೇಂದ್ರೀಯ ವಿಶ್ವವಿದ್ಯಾಲಯ ಇಂಥ ಮುಂಚೂಣಿ ಸಂಸ್ಥೆಗಳಲ್ಲಿ ಅಂಬೇಡ್ಕರ್‌ವಾದಿ ದಲಿತ ವಿದ್ಯಾರ್ಥಿಗಳ ಮೇಲೆ ಸಾಂಸ್ಥಿಕವಾದ ದೌರ್ಜನ್ಯವನ್ನು ನಡೆಸುವುದು. ಈ ಕೆಲಸದ ಎರಡು ಉದ್ದೇಶಗಳೆಂದರೆ ದಲಿತ ಯುವಜನತೆಯನ್ನು ಅತ್ಯುನ್ನತ ಶಿಕ್ಷಣದಿಂದ ಹೊರಗೆ ಹಾಕುವುದು ಮತ್ತು ಬಲಪಂಥೀಯ ಸಿದ್ಧಾಂತಕ್ಕೆ ಅತ್ಯಂತ ಪ್ರಬಲ ಸವಾಲಾಗಿರುವ ಅಂಬೇಡ್ಕರ್‌ವಾದವು ಕ್ಯಾಂಪಸ್‌ಗಳಲ್ಲಿ ಬೆಳೆಯದಂತೆ ಮಾಡುವುದು. ನಿನ್ನೆ ಐಐಟಿ, ಈಗ ಹೈದರಾಬಾದ್ ವಿಶ್ವವಿದ್ಯಾಲಯ, ಮುಂದೆ ಇಂಥ ಇತರ ಸಂಸ್ಥೆಗಳು. ಸಂಘಟಿತವಾದ ಹೋರಾಟಗಳು ಇಲ್ಲದಿದ್ದರೆ ಇನ್ನೆಷ್ಟು ಜನ ಶೋಷಿತರು ಬಲಿಪಶುಗಳಾಗುತ್ತಾರೋ. ■

ನೈತಿಕ ಅಧಿಕಾರ ಕಳಕೊಂಡ ಸರಕಾರ

ಬಂಡಾರು ದತ್ತಾತ್ರೇಯ ಮತ್ತು ಸ್ಮೃತಿ ಇರಾನಿ ಕೇಂದ್ರ ಸಂಪುಟದಲ್ಲಿ ಮಂತ್ರಿಗಳಾಗಿ ಮುಂದುವರೆಯುವುದಕ್ಕೆ ಅನರ್ಹರಾಗಿದ್ದಾರೆ. ತಮ್ಮ ಸರಕಾರ ಕಳಕೊಂಡಿರುವ ನೈತಿಕ ಅಧಿಕಾರವನ್ನು ಸ್ವಲ್ಪವಾದರೂ ಉಳಿಸಿಕೊಳ್ಳಬೇಕಾದರೆ ಅವರಿಬ್ಬರೂ ಹೋಗಬೇಕು ಎಂಬುದನ್ನು ಪ್ರಧಾನ ಮಂತ್ರಿಗಳು ಅರಿಯಬೇಕಾಗಿದೆ.



ಪ್ರಕಾಶ ಕಾರಟ್

ಕೆಲವೊಮ್ಮೆ ಒಂದೇ ಘಟನೆ ಒಂದು ಸರಕಾರದ ನೈತಿಕ ಅಧಿಕಾರವನ್ನು ಪುಡಿಪುಡಿ ಮಾಡಬಲ್ಲದು. ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಸಾವು ಇಂತಹ ಒಂದು ಘಟನೆ.

26 ವರ್ಷದ ರೋಹಿತ್ ಮತ್ತು ಇತರ ನಾಲ್ಕು ದಲಿತ ವಿದ್ಯಾರ್ಥಿಗಳನ್ನು ಕೇಂದ್ರ ಮಂತ್ರಿ –ಈತ ಹೈದರಾಬಾದಿನಿಂದ ಆರಿಸಲ್ಪಟ್ಟ ಸಂಸತ್ ಸದಸ್ಯ–ಬಂಡಾರು ದತ್ತಾತ್ರೇಯ ಅವರಿಂದಾಗಿ ವಿಶ್ವವಿದ್ಯಾಲಯದಿಂದ ಅಮಾನತು ಮಾಡಲಾಯಿತು. ಆರಂಭದ ತನಿಖೆ ಅಂಬೇಡ್ಕರ್ ವಿದ್ಯಾರ್ಥಿ ಸಂಘ(ಎಎಸ್‌ಎ)ಕ್ಕೆ ಸೇರಿರುವ ಈ ದಲಿತ ವಿದ್ಯಾರ್ಥಿಗಳ ಮೇಲೆ ಕ್ರಮ ಕೈಗೊಳ್ಳಬೇಕಾಗಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದರೂ, ದತ್ತಾತ್ರೇಯ ಮಾನವ ಸಂಪನ್ಮೂಲ ಅಭಿವೃದ್ಧಿ (ಹೆಚ್‌ಆರ್‌ಡಿ) ಮಂತ್ರಿ ಸ್ಮೃತಿ ಇರಾನಿಯವರಿಗೆ ಕಳಿಸಿದ ಪತ್ರದಿಂದಾಗಿ ವಿಶ್ವವಿದ್ಯಾಲಯದ ಉಪಕುಲಪತಿ ಈ ಐವರನ್ನು ಅಮಾನತು ಮಾಡುವಂತಾಯಿತು. ದತ್ತಾತ್ರೇಯ ತಮ್ಮ ಪತ್ರದಲ್ಲಿ ಹೈದರಾಬಾದ್ ವಿಶ್ವವಿದ್ಯಾಲಯ 'ಜಾತಿವಾದಿ, ಉಗ್ರಗಾಮಿ ಮತ್ತು ರಾಷ್ಟ್ರ–ವಿರೋಧಿ ರಾಜಕೀಯದ ಬಿಲವಾಗಿ ಬಿಟ್ಟಿದೆ' ಎಂದು ಬರೆದಿದ್ದರು. ಮಾನವ ಸಂಪನ್ಮೂಲ ಇಲಾಖೆ ಈ ಪತ್ರದ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಐದು ಪತ್ರಗಳನ್ನು ವಿಶ್ವವಿದ್ಯಾಲಯಕ್ಕೆ ಬರೆದಿತ್ತು.

ಹೀಗೆ ರೋಹಿತ್ ಮತ್ತು ಇತರ ನಾಲ್ವರನ್ನು ವಿ.ವಿ.ದ ಹಾಸ್ಟೆಲ್ ಮತ್ತು ಇತರ ಸೌಲಭ್ಯಗಳನ್ನು ಉಪಯೋಗಿಸದಂತೆ ನಿಷೇಧಿಸಿ, ಕೊನೆಗೆ ರೋಹಿತ್ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ ಕ್ರಮಕ್ಕೆ ಈ ಇಬ್ಬರು ಮಂತ್ರಿಗಳು ಕಾರಣ ಎಂದು ಹೇಳಬಹುದು.

ಈ ವಿ.ವಿ. ಕಳೆದ ಹತ್ತು ವರ್ಷಗಳಲ್ಲಿ ಎಂಟು ದಲಿತ ವಿದ್ಯಾರ್ಥಿಗಳ ಆತ್ಮಹತ್ಯೆಗಳನ್ನು ಕಂಡಿದೆ. ದೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿವಾದ ಎಷ್ಟರ ಮಟ್ಟಿಗೆ ತಾಂಡವವಾಡುತ್ತಿದೆ ಎಂಬುದನ್ನು ಇದು ತೋರಿಸುತ್ತದೆ. ದಲಿತ ಹಿನ್ನೆಲೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಸಂಸ್ಥೆಗಳಿಗೆ, ಸಂಶೋಧನಾ ಕೇಂದ್ರಗಳಿಗೆ ಪ್ರವೇಶ ಪಡೆಯುವುದೇ ಅತ್ಯಂತ ಕಷ್ಟದ ಸಂಗತಿ. ಒಂದು ವೇಳೆ ಮೀಸಲಾತಿಯಿಂದ ಪ್ರವೇಶ ಪಡೆದರೂ ಅವರು ತಾರತಮ್ಯ, ಕಿರುಕುಳ ಮತ್ತು ಗುಪ್ತಗಾಮಿನಿಯಾಗಿರುವ ದಲಿತ–ವಿರೋಧಿ ಭಾವನೆಗಳನ್ನು ಎದುರಿಸಬೇಕಾಗುತ್ತದೆ.

ಇದು ಬಹು ವರ್ಷಗಳಿಂದ ಇರುವ ವಾಸ್ತವತೆಯಾದರೂ, **ಬಿಜೆಪಿ ಸರಕಾರದ ಉದಯ ದಲಿತ–ವಿರೋಧಿ ಭಾವನೆಗಳಿಗೆ ಹೊಸದೊಂದು ಸೈದ್ಧಾಂತಿಕ ಮೊನಚನ್ನು ತಂದಿದೆ. ಬಿಜೆಪಿ ಮತ್ತು ಆರೆಸ್ಸೆಸ್ ತಮ್ಮ ಹಿಂದುತ್ವ ಮೌಲ್ಯಗಳಿಗೆ ದಲಿತ ವಿದ್ಯಾರ್ಥಿಗಳಿಂದ ಯಾವುದೇ ಸವಾಲು ಬರುವುದನ್ನು ಸಹಿಸಲಾರರು.**

ಕಳೆದ ವರ್ಷ ಮದ್ರಾಸ್ ಐಐಟಿಯಲ್ಲಿ ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್(ಎಪಿಎಸ್‌ಸಿ) ಮೇಲೆ ನಿಷೇಧ ಹಾಕಲಾಯಿತು. ಈ ಕ್ರಮಕ್ಕೂ ಅದೇ ಹೆಚ್‌ಆರ್‌ಡಿ ಇಲಾಖೆಯೇ ಕಾರಣ. ಎಪಿಎಸ್‌ಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಮತ್ತು ಅವರ ಸರಕಾರದ ಧೋರಣೆಗಳನ್ನು ಟೀಕಿಸುತ್ತಿದೆ ಎಂಬ ಅನಾಮಧೇಯ ದೂರೊಂದನ್ನು ಐಐಟಿ ಅಧಿಕಾರಿಗಳಿಗೆ ಕಳಿಸಿ ಈ ಬಗ್ಗೆ ಕ್ರಮ ತಗೊಳ್ಳುವಂತೆ ಮಾಡಿತು. ವ್ಯಾಪಕ ಪ್ರತಿಭಟನೆಗಳ ನಂತರವೇ ಎಪಿಎಸ್‌ಸಿ ಮೇಲಿನ ನಿಷೇಧವನ್ನು ಹಿಂತೆಗೆದುಕೊಂಡು ಅದು ಕಾರ್ಯ ನಿರ್ವಹಿಸಲು ಅವಕಾಶವಾಯಿತು. ಅನಾಮಧೆಯ ದೂರು ಕಳಿಸಿದವರು ಎಪಿಎಸ್‌ಸಿ ತಳೆದ ಸೈದ್ಧಾಂತಿಕ ನಿಲುವುಗಳಿಗೆ ಆಕ್ಷೇಪವಿದ್ದ ಕೆಲವು ಐಐಟಿ ಕ್ಯಾಂಪಸ್‌ನ ಆರೆಸ್ಸೆಸ್ ಮನಸ್ಸಿನ ಜನಗಳು.

ಹೈದರಾಬಾದ್ ವಿ.ವಿ.ಯಲ್ಲಿ ಕೂಡ ಅಂಬೇಡ್ಕರ್ ವಿದ್ಯಾರ್ಥಿ ಸಂಘ ಬಿಜೆಪಿ ಮತ್ತು ಹಿಂದುತ್ವ ವಲಯಗಳಿಗೆ ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ವಿರುದ್ಧವಾಗಿದ್ದ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಿತ್ತು–ಮುಝಫ್ಫರ್‌ನಗರ್ ಹಿಂಸಾಚಾರಗಳ ಕುರಿತ ಚಿತ್ರದ ಪ್ರದರ್ಶನ ಮತ್ತು ಯಾಕೂಬ್ ಮೆಮನ್ ನೇಣಿನ ಸಂದರ್ಭದಲ್ಲಿ ಮರಣ ದಂಡನೆಯ ಬಗ್ಗೆ ಚರ್ಚೆ ಏರ್ಪಡಿಸಿತ್ತು. ಇಂತಹ ಚಟುವಟಿಕೆಗಳು ಆರೆಸ್ಸೆಸ್ ವಿದ್ಯಾರ್ಥಿ ಸಂಘಟನೆಯಾದ ಎಬಿವಿಪಿಯ ದಾಳಿಗಳಿಗೆ ಆಹ್ವಾನವಾದವು. ಎಬಿವಿಪಿ ವಿದ್ಯಾರ್ಥಿ ಮುಖಂಡನ ಸಾಬೀತಾಗದ ದೂರಿನ ಆಧಾರದ ಮೇಲೆಯೇ ತಾನೇ ರೋಹಿತ್ ಮತ್ತು ಅತನ ಸಂಗಡಿಗರಿಗೆ ಶಿಕ್ಷೆಯಾಗುವಂತೆ ಬಿಜೆಪಿ ಮಂತ್ರಿಗಳು ಮಾಡಿರುವುದು.

ಆರೆಸ್ಸೆಸ್ ಮತ್ತು ಎಬಿವಿಪಿ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಎಲ್ಲ ಪ್ರಗತಿಪರ ಮತ್ತು ಎಡಪಂಥೀಯ ಚಟುವಟಿಕೆಗಳನ್ನು 'ರಾಷ್ಟ್ರ–ವಿರೋಧಿ' ಎಂದು ಹಣೆಪಟ್ಟಿ ಹಚ್ಚುತ್ತಿದೆ. ಹೀಗೆ ಹೈದರಾಬಾದ್ ವಿ.ವಿ.ದಲ್ಲಿ ಕೈಗೊಂಡಿರುವ ಕ್ರಮ ವಿ.ವಿ. ಆವರಣಗಳಲ್ಲಿ ಜಾತ್ಯಾತೀತ ಪ್ರಗತಿಪರ ವಿಚಾರಗಳು ಮತ್ತು ಚಟುವಟಿಕೆಗಳ ಮೇಲೆ ಹಿಂದುತ್ವ ದಾಳಿಯ ಒಂದು ಭಾಗ.

ಹೀಗೆ ರೋಹಿತ್ ವಿ.ವಿ.ದ ಉಪಕುಲಪತಿ ಮತ್ತು ಇತರ ಅಧಿಕಾರಿಗಳ ಅದೇ ರೀತಿಯಲ್ಲಿ ಬಿಜೆಪಿ ಮತ್ತು ಅದರ ಗುರು ಆರೆಸ್ಸೆಸ್‌ನ ದಲಿತವಿರೋಧಿ ಪೂರ್ವಾಗ್ರಹಗಳಿಗೆ ಬಲಿಯಾಗಿದ್ದಾನೆ.

ರೋಹಿತ್ ದುರಂತ ಸಾವಿನ ಸುತ್ತ ಹೈದರಾಬಾದ್ ವಿ.ವಿ.ದಲ್ಲಿ ಮತ್ತು ದೇಶಾದ್ಯಂತ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದ ನಡೆಸುತ್ತಿರುವ ಹೋರಾಟಕ್ಕೆ ಇನ್ನೂ ವಿಶಾಲವಾದ ಅರ್ಥಗಳಿವೆ. ಅದು ಮರಣಾಸನ್ನ ಮೇಲ್ಜಾತಿ ವ್ಯವಸ್ಥೆ ಮತ್ತು ಹಿಂದುತ್ವ ಕಣ್ನೋಟದ ಪ್ರತಿಗಾಮಿ ಕೋಮುವಾದಿ ಶಕ್ತಿಗಳ ವಿರುದ್ಧ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ ಹೋರಾಟಕ್ಕೆ ಸಂಬಂಧಪಟ್ಟದ್ದು.

ಹೆಚ್‌ಆರ್‌ಡಿ ಮಂತ್ರಿಗಳು ಮತ್ತು ಇತರ ಬಿಜೆಪಿ ಮುಖಂಡರು ರೋಹಿತ್ ವಿಚಾರದಲ್ಲಿ ತಮ್ಮ ಮೇಲೆ ಬಂದಿರುವ ಆಪಾದನೆಗಳನ್ನು ಎದುರಿಸಿರುವ ರೀತಿ ಆಘಾತಕಾರಿಯಾಗಿದ್ದು, ಅದು ಈ ವಿಷಯದಲ್ಲಿ ಅವರ ಅಪರಾಧವನ್ನು ಮತ್ತು ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಪಡೆಯಬೇಕೆಂಬ ದಲಿತರ ಆಕಾಂಕ್ಷೆಗಳ ಬಗ್ಗೆ ಅವರಿಗಿರುವ ವೈಷಮ್ಯವನ್ನು ಎತ್ತಿ ತೋರಿಸಿವೆ. ವ್ಯಾಪಕವಾದ ಆಕ್ರೋಶ ಮತ್ತು ಪ್ರತಿಭಟನೆಗಳನ್ನು ಕಂಡ ಮೇಲೆ ಸರಕಾರ ತನ್ನ ಭಂಡ ನಿಲುವಿನಿಂದ ಹಿಂದೆ ಸರಿಯಲಾರಂಭಿಸಿತು. ಹೆಆರ್‌ಡಿ ಮಂತ್ರಿಗಳು ರೋಹಿತ್ ಸಾವಿನ ಸಂದರ್ಭಗಳ ಬಗ್ಗೆ ನ್ಯಾಯಾಂಗ ತನಿಖೆ ಮಾಡುವುದಾಗಿ ಪ್ರಕಟಿಸಿದರು. ವಿಶ್ವವಿದ್ಯಾಲಯ ಉಳಿದ ನಾಲ್ಕು ವಿದ್ಯಾರ್ಥಿಗಳ ಅಮಾನತು ಆದೇಶಗಳನ್ನು ಹಿಂತೆಗೆದುಕೊಂಡಿತು. ಲಕ್ನೌನ ಅಂಬೇಡ್ಕರ್ ಕಾನೂನು ವಿಶ್ವವಿದ್ಯಾಲಯದಲ್ಲಿ ಪ್ರತಿಭಟನೆಗಳನ್ನು ಎದುರಿಸಬೇಕಾಗಿ ಬಂದ ನರೇಂದ್ರ ಮೋದಿ ಭಾರತಮಾತೆ ಒಬ್ಬ ಮಗನನ್ನು ಕಳಕೊಂಡಿದ್ದಾಳೆ ಎಂದರು.

ಆದರೆ ಇವೆಲ್ಲ ಗೋಸುಂಬೆತನದ ಪ್ರದರ್ಶನಗಳಷ್ಟೇ. ಅದರಿಂದೇನೂ ಆಗುವುದಿಲ್ಲ. ವಿಶ್ವ ವಿದ್ಯಾಲಯಗಳಲ್ಲಿ ದಲಿತ ವಿದ್ಯಾರ್ಥಿಗಳ ಪರಿಸ್ಥಿತಿಗಳ ಬಗ್ಗೆ ಈಗಾಗಲೇ ನಿವೃತ್ತ ಯುಜಿಸಿ ಅಧ್ಯಕ್ಷ ಪ್ರೊ. ಸುಖದೇವ ಥೊರಟ್ ಅಧ್ಯಕ್ಷತೆಯ ಒಂದು ಸಮಿತಿಯ ವರದಿ ಈಗಾಗಲೇ ಇದೆ. ಆದ್ದರಿಂದ ಈಗ ಪ್ರಕಟಿಸಿರುವ ನ್ಯಾಯಾಂಗ ತನಿಖೆ ನಿರುಪಯುಕ್ತ. ಥೊರಟ್ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಬೇಕಾಗಿದೆಯಷ್ಟೇ.

ಉಪಕುಪಲಪತಿ ಪಿ. ಅಪ್ಪಾರಾವ್ ದೀರ್ಘ ರಜೆಯಲ್ಲಿ ಹೋಗಿದ್ದಾರಂತೆ. ಅವರನ್ನು ತಕ್ಷಣವೇ ವಜಾ ಮಾಡಬೇಕು. ಅವರು ಮತ್ತು ಬಂಡಾರು ದತ್ತಾತ್ರೇಯ ಇಬ್ಬರನ್ನೂ ಪರಿಶಿಷ್ಟ ಜಾತಿಗಳು ಪರಿಶಿಷ್ಟ ಬುಡಕಟ್ಟುಗಳು (ಅತ್ಯಾಚಾರಗಳ ತಡೆ) ಕಾನೂನಿನ ಅಡಿಯಲ್ಲಿ ಮತ್ತು ಆತ್ಮಹತ್ಯೆಗೆ ಕಾರಣರು ಎಂದು ಆರೋಪಿ ಗಳಾಗಿಸಬೇಕಾಗಿದೆ.

ಬಂಡಾರು ದತ್ತಾತ್ರೇಯ ಮತ್ತು ಸ್ಮೃತಿ ಇರಾನಿ ಕೇಂದ್ರ ಸಂಪುಟದಲ್ಲಿ ಮಂತ್ರಿಗಳಾಗಿ ಮುಂದುವರೆಯುವುದಕ್ಕೆ ಅನರ್ಹರಾಗಿದ್ದಾರೆ. ತಮ್ಮ ಸರಕಾರ ಕಳಕೊಂಡಿರುವ ನೈತಿಕ ಅಧಿಕಾರವನ್ನು ಸ್ವಲ್ಪವಾದರೂ ಉಳಿಸಿಕೊಳ್ಳಬೇಕಾದರೆ ಅವರಿಬ್ಬರೂ ಹೋಗಬೇಕು ಎಂಬುದನ್ನು ಪ್ರಧಾನ ಮಂತ್ರಿ ಗಳು ಅರಿಯಬೇಕಾಗಿದೆ.



* ಈ ಘಟನೆಯಲ್ಲಿ ತಮ್ಮ ಇಲಾಖೆಯ ಪಾತ್ರ ಏನೂ ಇಲ್ಲ ಎಂದ, ಇದು ದಲಿತ–ದಲಿತೇತರ ಪ್ರಶ್ನೆಯಲ್ಲ ಎಂದು ಹಾರಾಡಿದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳಿಂದ ಒಂದು ನ್ಯಾಯಾಂಗ ತನಿಖೆ ನಡೆಸುವುದಾಗಿ ಪ್ರಕಟಣೆ. ವಿಶ್ವ ವಿದ್ಯಾಲಯ ಆಡಳಿತಗಾರರಿಗೆ 'ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಪ್ರತಿಕೂಲ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳೊಂದಿಗೆ ವರ್ತಿಸಬೇಕಾದ ರೀತಿಯ ಬಗ್ಗೆ ಮರುಶಿಕ್ಷಣ ನೀಡುವ 'ಯೋಜನೆ' ಇದೆಯಂತೆ!
* ವಿಶ್ವವಿದ್ಯಾಲಯದವರು ಉಳಿದ ನಾಲ್ಕು ವಿದ್ಯಾರ್ಥಿಗಳ ಅಮಾನತು ರದ್ದು–ಹೋರಾಟ ನಿಲ್ಲಲಿಲ್ಲ.
* ರೋಹಿತ್ ತಾಯಿಗೆ 8 ಲಕ್ಷ ರೂ.ಗಳ ಪರಿಹಾರ ನೀಡುವುದಾಗಿ ಘೋಷಿಸಲಾಯಿತು. ಆದರೆ ಆ ತಾಯಿ ನೀವು 8 ಕೋಟಿ ಕೊಟ್ಟರೂ ಬೇಡ, ನನ್ನ ಮಗ ಏಕೆ ಸಾಯುವಂತಾಯಿತು ಎಂದು ನನಗೆ ಹೇಳಿ ಎಂದರು.
* ಉಪಕುಲಪತಿ ದೀರ್ಘ ರಜೆಗೆ. ಅವರ ಜಾಗದಲ್ಲಿ ರೋಹಿತ್ ಮತ್ತು ಸಂಗಡಿಗರನ್ನು ಅಮಾನತು ಮಾಡಿದ ಉಪಸಮಿತಿಯ ಅಧ್ಯಕ್ಷರೇ ಇನ್–ಚಾರ್ಜ್ ಉಪಕುಲಪತಿ. ವಿದ್ಯಾರ್ಥಿಗಳ ಆಕ್ರೋಶ.
* ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ 'ಸಾಮಾಜಿಕ ನ್ಯಾಯಕ್ಕಾಗಿ ಕ್ರಿಯಾ ಸಮಿತಿ' ನೇತೃತ್ವದಲ್ಲಿ ವಿದ್ಯಾರ್ಥಿಗಳ ತರಗತಿ ಬಹಿಷ್ಕಾರ ಮತ್ತು ಸರದಿ ಉಪವಾಸ ಸತ್ಯಾಗ್ರಹ ಮುಂದುವರೆದಿದೆ. ಬೇರೆಡೆಗೂ ವಿಸ್ತಾರ. ದಿಲ್ಲಿಯ ಜವಹರಲಾಲ್ ವಿಶ್ವವಿದ್ಯಾಲಯದಲ್ಲೂ ಪ್ರತಿಧ್ವನಿ. ಮುಂಬೈಯಲ್ಲಿ ಪ್ರತಿಭಟನಾಕಾರರ ಮೇಲೆ ಆರೆಸ್ಸೆಸ್/ಎಬಿವಿಪಿ ಮಂದಿಯ ದಾಳಿ.
* ಜನವರಿ 22: ಲಕ್ನೌನ ಅಂಬೇಡ್ಕರ್ ಕಾನೂನು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮೂವರು ವಿದ್ಯಾರ್ಥಿಗಳಿಂದ ಪ್ರಧಾನ ಮಂತ್ರಿ ಎದುರು ಪ್ರತಿಭಟನೆ–ರೋಹಿತ್ ಹಮ್ ಶರ್ಮಿಂದಾ ಹೈ/ದ್ರೋಣಾಚಾರ್ಯ ಅಭೀ ಜಿಂದಾ ಹೈ, ನರೇಂದ್ರ ಮೋದಿ ಮುರ್ದಾಬಾದ್, ನರೇಂದ್ರ ಮೋದಿ ಗೋ ಬ್ಯಾಕ್ ಘೋಷಣೆ. ಅವರನ್ನು ಹೊರಗಟ್ಟಲಾಯಿತು, ರೋಹಿತ್‌ನಂತೆ ಹಾಸ್ಟೆಲ್ ಕೋಣೆಗಳಿಂದಲೂ ಹೊರಹಾಕಲಾಯಿತು, ಕೇಸುಗಳನ್ನು ಹಾಕಲಾಯಿತು.
* ಆದರೆ ಇದು ಕೊನೆಗೂ ಐದು ದಿನಗಳ ನಂತರ ತಮ್ಮ ಎಂದಿನ ವಾಚಾಳಿತನದ ನಡುವಿನ ದಿವ್ಯಮೌನವನ್ನು ಪ್ರಧಾನಿಗಳು ಮುರಿಯುವಂತೆ ಮಾಡಿತು. ತಮ್ಮ ಪಕ್ಷದವರು, ಸಂಪುಟದವರು, ಪರಿವಾರದವರು ರಾಷ್ಟ್ರ–ವಿರೋಧಿ, ಉಗ್ರಗಾಮಿ ಎಂದೆಲ್ಲ ಬಯ್ದಾಡಿದ್ದವನನ್ನು ಭಾರತಮಾತೆ ಕಳಕೊಂಡ ಒಬ್ಬ ಮತ್ರ ಎಂದು ಕಣ್ಣೀರುಗರೆದರು! ಅದೇ ಕಣ್ಣೀರು ಒರೆಸಿಕೊಳ್ಳುತ್ತ ಮಗನನ್ನು ಕಳೆದುಕೊಂಡ ತಾಯಿಯ ನೋವು ನನಗೆ ಅರ್ಥವಾಗುತ್ತದೆ ಎಂದರು.
* ನಿಜವಾಗಿಯೂ ಅರ್ಥವಾಗಿದೆಯೇ ಎಂದು ಲೇವಡಿ ಮಾಡುತ್ತ, ನಮಗೆ ಮೊಸಳೆ ಕಣ್ಣೀರು ಬೇಡ, ನ್ಯಾಯ ಬೇಕು ಎಂದು ಟೀಕಿಸುತ್ತ ಜನವರಿ 27ರಂದು ದೇಶಾದ್ಯಂತ 'ವಿಶ್ವವಿದ್ಯಾಲಯ ಬಂದ್' ಆಚರಣೆ. ದೇಶದೆಲ್ಲೆಡೆಗಳಿಂದ ಹೈದರಾಬಾದಿಗೆ ಬರುವ ವಿದ್ಯಾರ್ಥಿ ಕಾರ್ಯಕರ್ತರಿಂದ ಸೌಹಾರ್ದ
* ಜನವರಿ 28–ಸಂಶೋಧನಾ ಚಟುವಟಿಕೆಗಳು ಪುನರಾರಂಭವಾಗುತ್ತಿದೆ ಎಂದ ಇನ್–ಚಾರ್ಜ್ ಉಪಕುಲಪತಿಯ ಹೇಳಿಕೆ–'ಅಮಾನತು ಮಾಡಿರಲಿಲ್ಲ, ಸಲಹಾ ಪತ್ರವನ್ನು ಕಳಿಸಲಾಗಿತ್ತಷ್ಟೇ' !

ಈ ನಡುವೆ ಕೇಸರಿ ಪಡೆಗಳು ತಮ್ಮ ಸಮರತಂತ್ರವನ್ನು ಬದಲಿಸಿರುವಂತೆ ಕಾಣುತ್ತದೆ. ಈ ಬಗ್ಗೆ ಒಂದು ಕಾಲ್ಪನಿಕ 'ಸುತ್ತೋಲೆ' 'ವಾಟ್ಸಪ್'ನಲ್ಲಿ ಅಡ್ಡಾಡುತ್ತಿದೆ. ಅದನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡಲಾಗಿದೆ. ರೋಹಿತ್ ದಲಿತನೇ ಅಲ್ಲ ಎಂದು ನಂಬಿಸಲು ಅವರು ಹೆಣಗುತ್ತಿದ್ದಾರೆ. ಅದರ ನಿಜಕಥೆಯನ್ನು ಮುಂದಿನ ಪುಟಗಳಲ್ಲಿ ನೋಡಿ.

ಹಿರಿಯರ ಗುಪ್ತ ಸಭೆ (ಒಂದು ಕಲ್ಪನೆ)

WhatsApp

ರೋಹಿತ್ ಆತ್ಮಹತ್ಯೆ ಹಿನ್ನೆಲೆಯಲ್ಲಿ ದೇಶಾದ್ಯಂತ ದಲಿತರ ಪ್ರತಿಭಟನೆ ನಡೆಯುತ್ತಿದೆ. ಇದರಿಂದ ದಲಿತ ಯುವಜನತೆ ಸಂಘಪರಿವಾರದಿಂದ ಹೊರಹೋಗುವ ಭಯ ಕಾಡುತ್ತಿದೆ. ದಲಿತರು ದೂರ ಹೋಗದಂತೆ ತಡೆಯುವ ತುರ್ತು ಕ್ರಮ ಕೈಗೊಳ್ಳಬೇಕಿದೆ. ಇದುವರೆಗೆ ನಮ್ಮ ಗುಪ್ತ ಅಜೆಂಡಾ ಬಚ್ಚಿಟ್ಟುಕೊಂಡೇ, ನಿಧಾನವಾಗಿ ಅದನ್ನು ಜಾರಿಗೊಳಿಸುತ್ತಿದ್ದೆವು. ಕೆಲವೊಂದು ಅಜೆಂಡಾ ಜಾರಿಗೊಳಿಸಲು ವಿಷ್ಣುವಿನ ಪಾದದಿಂದ ಜನಿಸಿದ ಶೂದ್ರರ ಸಹಾಯ ಪಡೆಯುತ್ತಿದ್ದೆವು. ಹರಿಭಕ್ತ (ಅಥವಾ ಹರಿಯ ಅವತಾರಿ) ರಾಮ ತನ್ನ ವೈರಿ ಶಿವಭಕ್ತ ರಾವಣನನ್ನು ಸೋಲಿಸಲು ಕಪಿಸೈನ್ಯದ ಸಹಾಯ ಪಡೆದಂತೆ ನಮ್ಮ ಧರ್ಮವಿರೋಧಿಗಳ ಮತ್ತು ಅನ್ಯಧರ್ಮೀಯರ ಮೇಲೆ ದಾಳಿಮಾಡಲು ಶೂದ್ರರ ಸಹಾಯ ಅವಶ್ಯಕವಾಗಿದೆ. ಅದಕ್ಕಾಗಿ ಈ ಕೆಳಗೆ ಸೂಚಿಸಿದ ವಿಷಯಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕಿದೆ. ಯಾರು ಯಾವ ವಿಷಯವನ್ನು ಯಾವ ಸಂದರ್ಭದಲ್ಲಿ ಪ್ರಚಾರ ಮಾಡಬೇಕೆಂದು ಸಂಬಂದಪಟ್ಟವರಿಗೆ ನೇರವಾಗಿ ತಿಳಿಸಲಾಗುವುದು. ನಾಯಕರ ಹೇಳಿಕೆಗಳನ್ನು ನಮ್ಮ ಬೆಂಬಲಿಗರು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವಂತೆ ನೋಡಿಕೊಳ್ಳಬೇಕು. ಅಗತ್ಯವಿದ್ದಲ್ಲಿ ಈ ವಿಭಾಗಕ್ಕೆ ತಾತ್ಕಾಲಿಕ ನೌಕರರನ್ನು ನೇಮಿಸಿಕೊಳ್ಳಬೇಕು.

1) ರೋಹಿತ್ ದಲಿತನಲ್ಲ. ಆತ ಹಿಂದುಳಿದ ವರ್ಗದ ವಿದ್ಯಾರ್ಥಿ.
2) ರೋಹಿತ್ ಮತ್ತು ಆತನ ಸ್ನೇಹಿತರು ಎಬಿವಿಪಿ ಕಾರ್ಯಕರ್ತನ ಮೇಲೆ ಹಲ್ಲೆಮಾಡಿದ್ದರು.
3) ರೋಹಿತ್ ಯಾಕುಬ್ ಮೆಮನ್‌ಗೆ ನೀಡಿದ ಗಲ್ಲು ಶಿಕ್ಷೆಯನ್ನು ವಿರೋಧಿಸಿ ಹೋರಾಟ ನಡೆಸಿದ್ದ.
4) ರೋಹಿತ್‌ಗೆ ಭಯೋತ್ಪಾದಕರ ಸಂಪರ್ಕ ವಿರಬಹುದು.
5) ರೋಹಿತ್ ಪರವಾಗಿ ಕಮ್ಯುನಿಸ್ಟರು ಹೋರಾಟ ಮಾಡುತ್ತಿದ್ದಾರೆ. ಆತನಿಗೆ ನಕ್ಸಲರ ಸಂಪರ್ಕವಿರುವ ಅನುಮಾನವಿದೆ.
6) ರೋಹಿತ್ ಉಗ್ರಗಾಮಿಯನ್ನು ಬೆಂಬಲಿಸಿದ್ದ. ಆತನೊಬ್ಬ ದೇಶದ್ರೋಹಿ.

ಪುಟ 8 ನೋಡಿ

ಈ ಹೋರಾಟವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಬೇಕಾಗಿದೆ

ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್. ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಹೋರಾಟ ನಿರತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾಡಿದ ಭಾಷಣದ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ಭಾವಾನುವಾದ ಕೃಪೆ: ಡಾ.ಕಿರಣ್ ಎಂ. ಗಾಜನೂರು

ಭಾರತದ ತಳವರ್ಗದ, ತುಳಿತಕ್ಕೊಳಗಾದವರ, ಅಂಚಿಗೆ ತಳ್ಳಲ್ಪಟ್ಟವರ ನೆಲೆಯಲ್ಲಿ ಯೋಚಿಸಿದರೆ ರೋಹಿತ್ ಬಹಳ ದೊಡ್ಡ ಸಾಧನೆ ಮಾಡಿದ್ದಾನೆ! ಆತ ಮಾಡಿದ ಸಾಧನೆ ನೀವು ತಿಳಿದುಕೊಳ್ಳಬೇಕಾದರೆ ಈ ದೇಶದ ಜನಗಣತಿಯ ವರದಿಗಳನ್ನು, ಸಮುದಾಯಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಸಮೀಕ್ಷೆಗಳನ್ನು, ನ್ಯಾಷನಲ್ ಸ್ಯಾಂಪೆಲ್ ಸರ್ವೇ ಇಲಾಖೆಯ ಅಂಕಿ–ಅಂಶಗಳನ್ನು ಗಮನಿಸಬೇಕು. ಆಗ ಆತ ಮಾಡಿರುವ ಸಾಧನೆ ಏನು ಎಂಬುದು ಅರ್ಥವಾಗುತ್ತದೆ.

....

ಆದರೆ ದುರಂತ ಎಂದರೆ ಇಂದು ಈ ಸಮಾಜದ ನಿರಂತರ ಶೋಷಣೆಯನ್ನು, ತಾರತಮ್ಯವನ್ನು ಜಯಿಸಿ ಮೇರಿಟ್ ಆಧಾರದಲ್ಲಿ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಪಿ.ಹೆಚ್.ಡಿ ಹಂತಕ್ಕೆ ಬಂದ ರೋಹಿತನ ವಿರುದ್ಧ ನಿಂತಿರುವುದು ಕಾಲೇಜು ಡ್ರಾಪ್ ಔಟ್ ಆದ ಶಿಕ್ಷಣ ಸಚಿವರು! .... ನಮಗೆ ಆಕೆಯ ಶೈಕ್ಷಣಿಕ ಅರ್ಹತೆಗಳೇನು ಎಂಬುದೇ ಗೊತ್ತಿಲ್ಲ! ಅವರು ಪ್ರತಿಭಾರಿ ಪ್ರಮಾಣ ಪತ್ರಗಳನ್ನು ಸಲ್ಲಿಸುವಾಗ ಅವರ ಪದವಿ ಬದಲಾಗುತ್ತಿರುತ್ತವೆ ಕಳೆದ ಚುನಾವಣೆಯ ನಂತರ ಅವರು ಎ.ಎಲ್ ವಿಶ್ವವಿದ್ಯಾನಿಲಯದ ಪ್ರಮಾಣ ಪತ್ರ ಪ್ರದರ್ಶಿಸಿದ್ದರು. . . .

ಆ ಹುಡುಗನನ್ನು ನೋಡಿ ಅವನು ಶಾಲೆಗಳ ಮುಖವನ್ನೆ ನೋಡದ ಆ 40 ಕೋಟಿ ಜನರ ನಡುವಿನಿಂದ ಬಂದಿದ್ದಾನೆ, ಈ ದೇಶದ ಶೋಷಿತ ಇತಿಹಾಸದ ಮಧ್ಯದಿಂದ ಎದ್ದು ಬಂದಿದ್ದಾನೆ. ಈ ಸಮಾಜದ ಶೋಷಣೆಯಿಂದ ನಲುಗಿ, ಜೀತ ಕಾರ್ಮಿಕನಾಗಿ ದುಡಿದು ಪಿ.ಹೆಚ್.ಡಿ ಅಧ್ಯಯನಕ್ಕೆಂದು ಬಂದಿದ್ದಾನೆ.

ಆದರೆ ಏನಾಗುತ್ತಿದೆ ನೋಡಿ ಕೇಂದ್ರ ಮಂತ್ರಿ ನಾನು ಎರಡು ಪತ್ರ ಬರೆದೆ ಎನ್ನುತ್ತಾರೆ! ಶಿಕ್ಷಣ ಸಚಿವರು ನಾನು ಐದು ಪತ್ರ ಬರೆದು ಎಂದು ಹೇಳುತ್ತಿದ್ದಾರೆ. ಆಶ್ಚರ್ಯದ ವಿಷಯ ಎಂದರೆ ಆ ಹುಡುಗರ ಮೇಲೆ ಏನು ಕ್ರಮ ಜರುಗಿಸಲಾಗಿದೆ ಎಂದು ಐದು ಪತ್ರ ಬರೆಯುವ ಶಿಕ್ಷಣ ಸಚಿವರಿಗೆ ಆ ಮಕ್ಕಳಿಗೆ ಕಳೆದ ಏಳು ತಿಂಗಳಿಂದ ಫೆಲೋಶಿಪ್ ಹಣ ಏಕೆ ಕೊಟ್ಟಿಲ್ಲ ಎಂದು ಒಂದೇ ಒಂದು ಸಾಲು ಬರೆಯುವುದಿಲ್ಲ. . .

ಆ ಮಕ್ಕಳ ಕುರಿತು ತೆಗೆದುಕೊಂಡ ಕ್ರಮದ ಕುರಿತು ಐದ್ದು ಆತನ ಮೇಲೆ ತೆಗೆದುಕೊಂಡ ಕ್ರಮದ ಮೇಲಿನ ನಿಮ್ಮ ಆಸಕ್ತಿ ಆತನ ಫೆಲೋಶಿಪ್ ನಿಲ್ಲಿಸಿರುವುದ ಕುರಿತು, ಅದನ್ನೆ ನಂಬಿಕೊಂಡ ಆತನ ಕುಟುಂಬದ ಪರಿಸ್ಥಿತಿಯ ಬಗ್ಗೆ ಇಲ್ಲ!

ನಾನು ಈ ವಿಷಯಗಳ ಕುರಿತ ಪತ್ರಿಕಾ ವರದಿಗಳನ್ನು ಗಮನಿಸುತ್ತಿದ್ದೇನೆ ಇಲ್ಲಿ ಆತ ಬರೆದ ಆತ್ಮಹತ್ಯಾ ಪತ್ರವನ್ನು ಆತ್ಮಹತ್ಯೆಯಿಂದ ಪ್ರತ್ಯೇಕಿಸಿ ನೋಡುವ ಪ್ರಯತ್ನ ನಡೆಯುತ್ತಿದೆ, ಮರಣ ಪತ್ರವನ್ನು ಆತನ ಬದುಕಿನಿಂದ ಪ್ರತ್ಯೇಕಿಸಿ ನೋಡುವ ಪ್ರಯತ್ನಗಳು ನಡೆಯುತ್ತಿವೆ. ನಾವು ರೋಹಿತನ ಸಾವನ್ನಷ್ಟೆ ನೋಡಿದರೆ ಸಾಲದು, ಬದಲಾಗಿ ಆತ ಬದುಕಿದ ರೀತಿಯನ್ನು ಗಮನಿಸಬೇಕು ರೋಹಿತನ ಬದುಕನ್ನು, ಸಂಘಟನೆಯುನ್ನು, ಸ್ನೇಹಿತರನ್ನು ಸಂಗಾತಿಗಳನ್ನು ಆತ ಬರೆದ ಪತ್ರದಿಂದ ಪ್ರತ್ಯೇಕಿಸಿ ಒಹೋ ಇದು ಒಂದು ದುಖ: ತರುವ ಆತ್ಮಹತ್ಯೆ ಅಷ್ಟೆ, ಇದಕ್ಕೂ ಶೋಷಣೆಗೂ, ಇದಕ್ಕೂ ಈ ಸಮಾಜದಲ್ಲಿನ ರಚನಾತ್ಮಕ ತಾರಮತ್ಯಕ್ಕೂ ಸಂಬಂದವಿಲ್ಲ ಎಂದು ಮಾತನಾಡುವ ಶುಷ್ಕ ಮನಸ್ಸಿನವರು ನಮ್ಮ ನಡುವೆ ಬರೆಯುತ್ತಿದ್ದಾರೆ. . . .

ಒಂದು ವಿಷಯದಲ್ಲಿ ನಾನು ಸ್ಮೃತಿ ಇರಾನಿಯವರ ಇದು ದಲಿತ ಮತ್ತು ದಲಿತೇತರರ ನಡುವಿನ ಸಂಘರ್ಷವಲ್ಲ ಎಂಬ ಹೇಳಿಕೆಯನ್ನು ಸಮರ್ಥಿಸುತ್ತೇನೆ. ಖಂಡಿತ ಅದು ಸತ್ಯ ಇದು ದಲಿತ ಮತ್ತು ದಲಿತೇತರರ ನಡುವಿನ ಹೋರಾಟವಲ್ಲ ಬದಲಾಗಿ ಇದು ಹಿಂದೂ ಮೇಲ್ಜಾತಿ ಮೂಲಭೂತವಾದಿಗಳು ಮತ್ತು ದಲಿತ, ದಲಿತೇತರರ ಮತ್ತು ಮನುಷ್ಯತ್ವವುಳ್ಳ ಮನುಷ್ಯರ ನಡುವಿನ ಸಂಘರ್ಷ. ....

ನೀವು ಒಪ್ಪಿ ಬಿಡಿ ನಿಜವಾದ ಅರ್ಥದಲ್ಲಿ ಇಂದು ನಿಮ್ಮ ದೇಶ ಅಳಲ್ಪಡುತ್ತಿರುವುದು ಸಾಮಾಜಿಕ ಮತ್ತು ಆರ್ಥಿಕ ಮೂಲಭೂತವಾದಿಗಳ ಒಕ್ಕೂಟ ಮತ್ತು ಮಾರುಕಟ್ಟೆ ಆರ್ಥಿಕತೆಯ ಮೂಲಭೂತವಾದಿಗಳಿಂದ ಇದು ಭಾರತಕ್ಕೆ ಸೀಮಿತವಾದ ಮೈತ್ರಿಕೂಟವಲ್ಲ ಬದಲಾಗಿ ಇದು ವಿಶ್ವವ್ಯಾಪಿಯಾಗಿದೆ. ನಿಮಗೆ ಆಶ್ಚರ್ಯವಾಗಬಹುದು ಜಗತ್ತಿನ ಅಂತ್ಯಂತ ಅಪಾಯಕಾರಿ ಬಂಡವಾಳಶಾಹಿ ಆರ್ಥಿಕತೆಯ ಜನಕ ಯುನೈಟೆಡ್ ಸ್ಟೇಟ್ಸ್ ಜಗತ್ತಿನ ಅತಿ ಅಪಾಯಕಾರಿಯಾದ ಎರಡು ಧಾರ್ಮಿಕ ಮೂಲಭೂತವಾದಿಗಳಾದ ಇಸ್ರೇಲ್ ಮತ್ತು ಸೌದಿ ಅರೇಬಿಯಾಗಳನ್ನು ತನ್ನ ಯುದ್ಧಗಳಿಗಾಗಿ ಆಶ್ರಯಿಸಿದೆ ಹಾಗೆ ನೋಡಿದರೆ ನಾವೀಗ ಅಂತ್ಯಂತ ಶಕ್ತಿಶಾಲಿ, ಒಗ್ಗೂಡಿದ ಶತ್ರುವಿನ ವಿರುದ್ದ ಹೋರಾಡಬೇಕಿದೆ. . .

ಇದು ಕೆಲವರು ಹೇಳುವಂತೆ ಕೇವಲ



ಹೈದರಾಬಾದ್‌ಗೆ ಸೀಮಿತವಾದ ಪ್ರಶ್ನೆ ಅಲ್ಲ. ನಾನು ದೇಶದ ಪ್ರತಿಷ್ಠಿತ ಜವಾಹಾರ್‌ಲಾಲ್ ನೆಹರು ವಿಶ್ವವಿದ್ಯಾನಿಲಯದ ಕಾರ್ಯಕಾರಿ ಮಂಡಳಿಯ ಸದಸ್ಯನಾಗಿ ಸೇವೆ ಸಲ್ಲಿಸಿದ್ದೇನೆ. ಅಲ್ಲಿ ನನ್ನ ಅವಧಿಯ ಶೇ 80ರಷ್ಟು ಸಮಯ ಮೀಸಲಾತಿ ವಿರೋಧಿಸುವ ಮನಸ್ಸುಗಳನ್ನು ಎದುರಿಸುವುದರಲ್ಲಿಯೇ ಕಳೆದು ಹೋಗಿದೆ ಎಂಬ ಸತ್ಯವನ್ನು ನಿಮ್ಮೆದುರು ಇಡುತ್ತಿದ್ದೇನೆ.

ಈ ಹಂತದಲ್ಲಿ ನಾವು ವಿಶ್ವವಿದ್ಯಾನಿಲಯಗಳ ಉಳಿವಿಗೆ ಏನು ಮಾಡಬೇಕು ಎಂಬುದರ ಕುರಿತು ನನ್ನ ಸ್ನೇಹಿತ ಪ್ರೊ. ಸುಖ್ದೇವ್ ಥೋರಟ್ ಒಂದು ನೀಲನಕ್ಷೆಯನ್ನು ಒದಗಿಸಿದ್ದಾರೆ ನಾನು ಅವರು ನೀಡಿದ ಆ ವರದಿಯನ್ನು ಸಂಪೂರ್ಣವಾಗಿ ಒಪ್ಪುತ್ತೇನೆ ನಾವು ಬದಲಾವಣೆ ಆರಂಭಿಸುವುದಿದ್ದರೆ ಅದು ಈ ವರದಿಯಿಂದಲೇ ಆರಂಭವಾಗಲಿ, ನಮಗಿರುವ ಉತ್ತಮ ಆರಂಭ ಅದೆ ಆಗಲಿದೆ . . .

ಇದರ ಮುಂದೆ ನಾವು ಹಲವು ರಾಜಕೀಯ ಹೋರಾಟಗಳನ್ನು ನಡೆಸಬೇಕಿದೆ ಹೊರಗೆ ಇನ್ನೂ ಹಲವು ಹೋರಾಟಗಳು ನಮ್ಮನ್ನು ಎದಿರು ನೋಡುತ್ತಿವೆ ದಯಮಾಡಿ ಅರ್ಥಮಾಡಿಕೊಳ್ಳಿ ಇದು ಹೈದರಾಬಾದ್ ಗೆ ಮಾತ್ರ ಸೀಮಿತವಾಗಿಲ್ಲ' . . .

ನನಗೆ ಅನ್ನಿಸುವಂತೆ ರೋಹಿತ್ ಸಾವು–ಆತ್ಮಹತ್ಯೆ ನಮ್ಮನ್ನು ಒಂದಾಗಿಸಬೇಕಿದೆಯೇ ಹೊರತು ನಮ್ಮಲ್ಲೆ ಒಡಕು ಮೂಡಿಸಬಾರದು! ಅವನು ಅವನ ಸಂಘಟನೆಯ ವಿರೋಧವನ್ನು ಮಾಡುತ್ತಿದ್ದ, ಅವನು ತನ್ನದೆ ಸ್ನೇಹಿತರನ್ನು ವಿರೊಧಿಸುತ್ತಿದ್ದ, ಎಂಬ ಹೇಳಿಕೆಗಳನ್ನು ನೀಡುವ, ಆ ಮೂಲಕ ನಮ್ಮನ್ನು ಒಡೆಯುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಆತನ ನೆನಪನ್ನು ನಮ್ಮಿಂದ ಅಳಿಸುವ ಕ್ರೌರ್ಯಕ್ಕೆ, ಅನ್ಯಾಯಕ್ಕೆ ಜನ ಮುಂದಾಗುತ್ತಿದ್ದಾರೆ. ಆದರೆ ಒಂದು ಶ್ಲಾಘನೀಯ ಅಂಶ ಎಂದರೆ ಈ ಎಲ್ಲಾ ವಿರೋಧ, ತಂತ್ರ, ಕುತಂತ್ರಗಳನ್ನು ಎದುರಿಸಿ ಪ್ರತಿರೋಧ ಎಂಬುದು ದೇಶದ ಮೂಲೆ ಮೂಲೆಗಳಿಂದ ಹರಿದು ಬರುತ್ತಿದೆ ಮತ್ತು ಅದು ವಿಧ್ಯಾರ್ಥಿಗಳ ಕಡೆಯಿಂದ ಹರಿದು ಬರುತ್ತಿದೆ . . . .

ನಿಮಗೆ ನೆನಪಿರಲಿ ಕಳೆದ 105 ದಿನಗಳಿಂದ ಫೀಲ್ಮ್ ಅಂಡ್ ಟೇಲಿವಿಷನ್ ಸಂಸ್ಥೆ, ಪುಣೆಯ ವಿಧ್ಯಾರ್ಥಿಗಳು ಈ ಸರ್ಕಾರದ ವಿರುದ್ಧ ವಿಶ್ವವಿದ್ಯಾನಿಲಯದ ಮೇಲೆ ಯುಧಿಷ್ಟರನ ಹೇರಿಕೆಯನ್ನು ವಿರೋಧಿಸಿ ಹೋರಾಡುತ್ತಿದ್ದಾರೆ..........

ಹೈದ್ರಾಬಾದ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೆ ನೀವು ಈ ಹೋರಾಟವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಬೇಕಿದೆ .ಈ ಹೋರಾಟದ ಜೊತೆಗೆ ಇನ್ನು ಮುಖ್ಯವಾದ ಸಂಗತಿಗಳನ್ನು ನೀವು ಮುಂಚೂಣಿಗೆ ತರಬೇಕಿದೆ ಇದನ್ನು ರೋಹಿತ್ ವೇಮುಲ ಎಂಬ ಚೇತನದ ಆತ್ಮಹತ್ಯೆಯ ಪರಿಣಾಮ ಎಂದು ನಾನು ಗುರುತಿಸುತ್ತೇನೆ ಜಗತ್ತು ಓದಿಕೊಳ್ಳುತ್ತದೆ . . .

ಬಹಳ ಹಿಂದೆ ಒಬ್ಬ ಫ್ರೆಂಚ್ ಬರಹಗಾರ ವಿಕ್ಟರ್ ಹ್ಯುಗೋ ಬರೆದಿದ್ದ– ಒಂದು ವಿಚಾರದ ಸಮಯ ಬಂದಿದ್ದರೆ, ಜಗತ್ತಿನಲ್ಲಿರುವ ಶಕ್ತಿಗಳು ಯಾವವೂ ಅದನ್ನು ತಡೆಯಲಾರವು...ನನಗೆ ಅನ್ನಿಸುವಂತೆ 2016 ರಲ್ಲಿ ಭಾರತಕ್ಕೆ ಆ ಸಮಯ ಬಂದಿದೆ. ಆ ವಿಚಾರದ ಹಿಂದಿನ ಬೇಡಿಕೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಲಿಂಗಾಧಾರಿತ, ನ್ಯಾಯದ ಹಕ್ಕೂತ್ತಾಯವಾಗಿದೆ ಜೊತೆಗೆ ರೋಹಿತ್ ಮತ್ತು ಲಕ್ಷಾಂತರ ರೋಹಿತರುಗಳ ನ್ಯಾಯಯುತ ಹಕ್ಕಾಗಿದೆ ನಮ್ಮ ಹೋರಾಟದ ಮಾದರಿಗಳು ಭಿನ್ನ ಇರಬಹುದು ಆದರೆ ಉದ್ದೇಶ ಅಂಬೇಡ್ಕರ್ ಹೇಳಿದ ಶಿಕ್ಷಣ, ಸಂಘಟನೆ, ಹೋರಾಟದ ಹಕ್ಕುಗಳಿಗಾಗಿದೆ ಎಂಬುದನ್ನು ಮರೆಯದಿರೋಣ. ●

"ನನ್ನ ಮಗನನ್ನು ಸಸ್ಪೆಂಡ್ ಮಾಡಿದ್ದೇಕೆ ಎಂಬ ನನ್ನ ಪ್ರಶ್ನೆಗೆ ಉತ್ತರದ ಬದಲು ಆತನ ಜಾತಿಯ ಪ್ರಶ್ನೆ ಏಕೆ ಎತ್ತಲಾಗುತ್ತಿದೆ?"




ರೋಹಿತ್ ವೇಮುಲ ದಲಿತನೇ ಅಲ್ಲ ಎಂದು ಸಾಬೀತು ಮಾಡಿದರೆ ಪ್ರತಿಭಟನೆಗಳೆಲ್ಲ ಠುಸ್ಸಾಗುತ್ತವೆ, ಅದಕ್ಕಿಂತ ಮುಖ್ಯವಾಗಿ ಎಸ್‌ಸಿ/ಎಸ್‌ಟಿ (ಅತ್ಯಾಚಾರಗಳ ತಡೆ)ಕಾನೂನಿನಿಂದ ತಮ್ಮ ಮಂತ್ರಿಗಳನ್ನು ಮತ್ತು ತಮ್ಮ ಕೈಂಕರ್ಯ ಮಾಡಿರುವ ಉಪಕುಲಪತಿಗಳನ್ನು ಕಾಪಾಡಬಹುದು ಎಂಬ ನಂಬಿಕೆಯಿಂದ ಕೇಸರೀ ಪಡೆಗಳು ಈ ದಿಕ್ಕಿನಲ್ಲಿ ಭಾರೀ ಪ್ರಯತ್ನ ನಡೆಸುತ್ತಿರುವಂತೆ ಕಾಣುತ್ತದೆ. ಬಹಳ ಹಿಂದೆಯೇ ಕೈಕೊಟ್ಟ ವೇಮುಲನ ತಂದೆಯಿಂದ ಹೇಳಿಕೆಯನ್ನು ಕೊಡಿಸಿಯಾಗಿದೆ. ರೋಹಿತ್‌ನ್ ತಾಯಿ ಮತ್ತು ಅಜ್ಜಿ ತಾವು ಒಬಿಸಿಗಳೆಂದು ಹೇಳಿರುವ ಗುಪ್ತದಾಖಲೆಗಳು ರಾಷ್ಟ್ರೀಯ ಭದ್ರತಾ ಸಲಹೆಗಾರರಿಗೆ(!) ತಲುಪಿವೆಯೆಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ನಿಜ ಕತೆಯೇನು? 'ಹಿಂದುಸ್ತಾನ್ ಟೈಮ್ಸ್‌ನ ಪತ್ರಕರ್ತ ಸುದೀಪ್ತೊ ಮಂಡಲ್ ಕಂಡು ಹಿಡಿದ ಅಂಶಗಳಲ್ಲಿ ಕೆಲವು ಹೀಗಿವೆ:

ರೋಹಿತ್ ವೇಮುಲನ ತಾಯಿ ರಾಧಿಕ. ಗುಂಟೂರಿಗೆ ಕೂಲಿಗೆಲಸ ಹುಡುಕಿಕೊಂಡು ವಲಸೆ ಬಂದ ಮಾಲ ಎಂಬ ದಲಿತ ಜಾತಿಯ ದಂಪತಿಗಳ ಮಗಳು. ಆ ಹೆಣ್ಣು ಮಗುವನ್ನು ಅಂಜನಿ ದೇವಿ ಎಂಬ ಮಹಿಳೆ ತನಗೆ ಕೊಡುತ್ತೀರಾ ಎಂದಾಗ ಆ ಕೂಲಿ ಕಾರ್ಮಿಕರು ಸಂತೋಷದಿಂದ ಒಪ್ಪಿಕೊಂಡರು. ಆ ಮಹಿಳೆ ವಡೇರು ಎಂಬ ಜಾತಿಗೆ ಸೇರಿದವರು.

ಅಂಜನಿ ರಾಧಿಕರನ್ನು ಅವರದೇ ಜಾತಿಯ ಹುಡುಗ ಮಣಿಕುಮಾರ್ ಎಂಬುವನಿಗೆ ಕೊಟ್ಟು ಮದುವೆ ಮಾಡಿದರು. ಆದರೆ ರಾಧಿಕರವರ ಜಾತಿಯ

ಬಗ್ಗೆಯಾಗಲೀ, ಅವರನ್ನು ಪಡೆದ ಬಗ್ಗೆಯಾಗಲೀ ಮಣಿಕುಮಾರ ಎಂಬಾತನಿಗೆ ತಿಳಿಸಿರಲಿಲ್ಲ. '

ಪುಟ 12 ನೋಡಿ



ಹಿರಿಯರ ಗುಪ್ತ ಸಭೆ (ಒಂದು ಕಲ್ಪನೆ)

WhatsApp

ಪುಟ 7 ರಿಂದ

7) ರೋಹಿತ್ ಗೋಮಾಂಸ ಸೇವನೆಗೆ ಬೆಂಬಲ ನೀಡಿ ಹೋರಾಟ ನಡೆಸಿದ್ದ. ಅವನೊಬ್ಬ ಹಿಂದೂ ಧರ್ಮದ ವಿರೋಧಿ.

8) ರೋಹಿತ್ ಮಾನಸಿಕ ರೋಗಿ.

9) ರೋಹಿತ್ ಪ್ರಕರಣಕ್ಕೆ ಸಂಬಂದಿಸಿದ ಹೋರಾಟ ಕಮ್ಯುನಿಷ್ಟರು ಮಾಡುತ್ತಿರುವ ನಾಟಕ.

10) ಕಮ್ಯುನಿಷ್ಟರ ಹಿಂದೆ ಓಡುವವರೆಲ್ಲಾ ನಾಯಿಗಳು.

11) ಪ್ರಧಾನಿ ಸ್ಥಾನದಲ್ಲಿರುವವರು ಮಾತ್ರ ರೋಹಿತ್ ಸಾವಿಗೆ ಈ ರೀತಿ ದುಖಃ ವ್ಯಕ್ತಪಡಿಸಬೇಕು. "ಈ ಸುದ್ದಿ ಅಘಾತಕಾರಿ. ತಾಯಿ ಭಾರತಮಾತೆ ಒಬ್ಬ ಮಗನನ್ನು ಕಳೆದುಕೊಂಡಿದ್ದಾಳೆ. ನನಗೆ ಈ ಘಟನೆಯಿಂದ ನೋವಾಗಿದೆ." ಪ್ರಧಾನಿ ಸಹಾ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಮಾತನಾಡಬಾರದು.

12) ಇಷ್ಟಲ್ಲದೇ ರೋಹಿತ್ ನ ಕುಟುಂಬದ ಹಿನ್ನೆಲೆಯನ್ನು ಜಾಲಾಡಿ ಅವನು ಹಿಂದಿನ ತಪ್ಪುಗಳನ್ನು ಪ್ರಚಾರಮಾಡಿ.

13) ಆತನ ಸಂಬಂಧಿಕರಿಂದ ಸಾಧ್ಯವಾದರೆ ಆತನ ಹೆತ್ತವರಿಂದ ರೋಹಿತನ ವಿರುದ್ಧ ಹೇಳಿಕೆ ಕೊಡಿಸುವ ಪ್ರಯತ್ನಮಾಡಿ.

14) ಮುಸ್ಲೀಂ ಭಯೋತ್ಪಾದಕರ 'ದಾಳಿಶಂಕೆ'ಯ ಕಡೆ ದೇಶದ ಗಮನ ಸೆಳೆಯುವಂತಹ ಕ್ರಮ ಕೈಗೊಳ್ಳಬೇಕು.

15) ಸಾಧ್ಯವಾದರೆ ಕೆಲವು 'ಶಂಕಿತ' ಭಯೋತ್ಪಾಕದರನ್ನು ಬಂದಿಸಬೇಕು.

16) ರೋಹಿತ್ ಪರ ನಡೆಯುವ ಹೋರಾಟಗಳು ಮಾಧ್ಯಮಗಳಲ್ಲಿ ಸುದ್ದಿಯಾಗದಂತೆ ನೋಡಿಕೊಳ್ಳಬೇಕು.

17) ಮುಸ್ಲೀಂ ಭಯೋತ್ಪಾಕರ ಶಂಕಿತ ದಾಳಿಗಳ ಬಗೆಗಿನ ಸುದ್ದಿಗಳೇ ಮಾಧ್ಯಮಗಳ ಬಹಳಷ್ಟು ಸಮಯವನ್ನು ನುಂಗಿಹಾಕುವಂತೆ ಮಾಡಬೇಕು.

ನಮ್ಮ 'ಗುಪ್ತಅಜೆಂಡಾ' ಜಾರಿಗಾಗಿ, ಮತ್ತಷ್ಟು ಸಮಯದವರೆಗೆ ದಲಿತರ ಸಹಾಯ ಬೇಕಾಗಿರುವುದರಿಂದ ಈ ಕ್ರಮ ಅವಶ್ಯಕವಾಗಿದೆ. ●

ಒಟ್ಟಾರೆಯಾಗಿ ನೋಡುವುದಾದರೆ ಹಿಂದಿನ ಮೂರು ಜಿಮ್ ಸಮಾವೇಶಗಳಲ್ಲಿ ಅನುಮೋದನೆಯಾಗಿವೆ ಎಂದು ಘೋಷಣೆಯಾದ ಪ್ರತಿ 8 ಪ್ರಸ್ತಾವನೆಗಳಲ್ಲಿ, ಕೇವಲ ಎರಡು ಘಟಕಗಳು ಅನುಷ್ಠಾನದ ಹಂತಕ್ಕೆ ಬಂದಿವೆ. ಅದರಲ್ಲಿ ಒಂದು ಘಟಕ ಮಾತ್ರ ನಿಜವಾಗಿಯೂ ಆರಂಭವಾಗಿದೆ. ಘೋಷಿತ ಬಂಡವಾಳದ ಕೇವಲ 10ರಲ್ಲಿ ಒಂದು ಭಾಗ ವಾಸ್ತವವಾಗಿ ಹೂಡಿಕೆಯಾಗಿದೆ. ಆದರೆ ಆರಂಭವಾಗದ ಅರ್ಧದಷ್ಟು ಘಟಕಗಳು ಸುಮಾರು ಶೇ. 70ರಷ್ಟು ಭೂಮಿಯನ್ನು ಇಟ್ಟುಕೊಂಡಿವೆ! ಎಷ್ಟು ಉದ್ಯೋಗಗಳನ್ನು ವಾಸ್ತವವಾಗಿ ಸೃಷ್ಟಿಸಿವೆ ಎಂಬುದಕ್ಕೆ ಅಂಕಿ ಅಂಶ ದೊರೆತಿಲ್ಲ. ಇದು ಹಿಂದಿನ ಸಮಾವೇಶಗಳ ರೆಕಾರ್ಡು. ಈ ಹಿನ್ನೆಲೆಯಲ್ಲಿ ಈ ಸಮಾವೇಶಕ್ಕೆ ಅರ್ಥವಿದೆಯೇ?

"ಇನ್‌ವೆಸ್ಟ್ ಕರ್ನಾಟಕ" : ಭರವಸೆ ಮತ್ತು ವಾಸ್ತವ

ಹರ್ಷ

ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಇನ್‌ವೆಸ್ಟ್ ಕರ್ನಾಟಕ–2016 ಎಂಬ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (ಗ್ಲೋಬಲ್ ಇನವೆಸ್ಟ್ ಮೆಂಟ್ ಮೀಟ್ = ಜಿ.ಐ.ಎಂ. = ಜಿಮ್) ಕಾರ್ಯಕ್ರಮವನ್ನು 3 ರಿಂದ 5 ನೇ ಫೆಬ್ರವರಿ 2016ರ ರಾಜ್ಯ ಸರ್ಕಾರವು ಆಯೋಜಿಸುತ್ತಿದೆ. ಈ ಸಮಾವೇಶಕ್ಕಾಗಿ ರೂ. 50 ಕೋಟಿಯಷ್ಟು ವೆಚ್ಚವನ್ನು ಸಹ ಮಾಡುತ್ತಿದೆ. ಆದರೆ, ಇಂತಹ ಸಮಾವೇಶಗಳಿಂದ ನಿಜಕ್ಕೂ ಹೆಚ್ಚು ಬಂಡವಾಳ ರಾಜ್ಯಕ್ಕೆ ಹರಿದು ಬರುತ್ತದೆ–ಯೇ? ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತದೆಯೇ? ಬಂಡವಾಳ ಆಕರ್ಷಣೆ ಹೆಸರಿನಲ್ಲಿ ಸಾವಿರಾರು ಕೋಟಿ ತೆರಿಗೆ ವಿನಾಯಿತಿ ಮತ್ತು ಪ್ರೋತ್ಸಾಹಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ನೀಡಲಾಗುತ್ತಿದೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಈ ಹಿಂದಿನ ಜಾಗತಿಕ ಹೂಡಿಕೆದಾರರ ಸಮಾವೇಶಗಳಲ್ಲಿ ಅನುಮೋದನೆಯಾಗಿರುವ ಕೈಗಾರಿಕಾ ಪ್ರಸ್ತಾವನೆಗಳ ಅನುಷ್ಠಾನವನ್ನು ತುಲನೆ ಮಾಡುವುದು ಮುಖ್ಯ.

ಕೈಗಾರಿಕೆ ಬಂಡವಾಳ ಹೂಡಿಕೆ ಪ್ರಕ್ರಿಯೆ:

ರಾಜ್ಯದಲ್ಲಿ ಬಂಡವಾಳ ಹೂಡಿಕೆಗಾಗಿ ಪ್ರಮುಖವಾಗಿ 3 ಅನುಮೋದನಾ ಸಮಿತಿಗಳಿವೆ. ಇದರಲ್ಲಿ, ರೂ. 15 ಕೋಟಿವರೆಗಿನ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಿಗೆ ಜಿಲ್ಲಾ ಮಟ್ಟದಲ್ಲಿ ಅನುಮೋದನೆ ನೀಡಲಾಗುತ್ತದೆ. ರೂ. 15 ಕೋಟಿಯಿಂದ ರೂ. 500 ಕೋಟಿ ವರೆಗಿನ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯು ಅನುಮೋದನೆ ನೀಡುತ್ತದೆ. ರೂ. 500 ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳನ್ನು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿಯು ಅನುಮೋದನೆ ನೀಡುತ್ತದೆ. ಬೃಹತ್ ಸಮಾವೇಶಗಳ ಹೊರತಾಗಿಯೂ ಈ ಸಮಿತಿಗಳು ನಿರಂತರವಾಗಿ ಸಭೆ ಸೇರಿ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುತ್ತಾ ಬರುತ್ತಿವೆ. ಹೀಗಾಗಿ, ಪ್ರತ್ಯೇಕವಾಗಿ ಈ ರೀತಿ ಸರ್ಕಾರದ ತೆರಿಗೆ ಹಣವನ್ನು ಪೋಲು ಮಾಡಿ, ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡುವುದು ಅವಶ್ಯವಿಲ್ಲ. ಇಂತಹ ಸಮಾವೇಶಗಳ ಒಟ್ಟು ಪರಿಣಾಮ ಏನಾಗಿದೆ ಎಂಬುದರಿಂದ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ

ಹಿಂದಿನ ಜಿಮ್ ಸಮಾವೇಶಗಳು: ಭ್ರಮೆ ಮತ್ತು ವಾಸ್ತವ

ಇದುವರೆಗೆ ಕರ್ನಾಟಕ ಸರಕಾರ ಮೂರು ಜಿಮ್ ಸಮಾವೇಶಗಳು ನಡೆದಿವೆ – 2000 (ಎಸ್.ಎಂ.ಕೃಷ್ಣ ಸರಕಾರದವಿದ್ದಾಗ), 2010 (ಯೆಡಿಯೂರಪ್ಪ ಸರಕಾರವಿದ್ದಾಗ) ಮತ್ತು 2012 (ಸದಾನಂದ ಗೌಡ ಸರಕಾರವಿದ್ದಾಗ)ಗಳಲ್ಲಿ. ಈ ಮೂರು ಸಮಾವೇಶಗಳಲ್ಲಿ ಅನುಮೋದನೆ ಆದ ಪ್ರಸ್ತಾವಗಳ ಸಂಖ್ಯೆ, ಅನುಮೋದಿತ ಪ್ರಸ್ತಾವಗಳ ಉದ್ದೇಶಿತ ಬಂಡವಾಳ ಹೂಡಿಕೆ, ಸೃಷ್ಟಿಯಾಗುತ್ತದೆಂದು ಹೇಳಲಾದ ಉದ್ಯೋಗಗಳ ಸಂಖ್ಯೆಯನ್ನು ಕೋಷ್ಟಕ–1 ರಲ್ಲಿ ಕೊಡಲಾಗಿದೆ. ಇದು ಸಮಾವೇಶಗಳಲ್ಲಿ ತೋರಿಸಲಾಗುವ ಭರವಸೆಯ ಚಿತ್ರವನ್ನು ಕೊಡುತ್ತದೆ.

ಕೋಷ್ಟಕ–2 ವಾಸ್ತವದ ಚಿತ್ರಣ ಕೊಡುತ್ತದೆ. ಅನುಷ್ಠಾನ ಹಂತಕ್ಕೆ ಬಂದ ಅನುಮೋದಿತ ಪ್ರಸ್ತಾವನೆಗಳ ಸಂಖ್ಯೆ, ಈ ಕಂಪನಿಗಳಿಗೆ ಕೆ–ಐಎಡಿಬಿ ಹಂಚಿದ ಭೂಮಿಯ ಒಟ್ಟು ವಿಸ್ತೀರ್ಣ, ವಾಸ್ತವವಾಗಿ ಆರಂಭವಾದ ಘಟಕಗಳು, ವಾಸ್ತವವಾಗಿ ಬಳಕೆಯಾದ ಭೂಮಿಯ ಒಟ್ಟು ವಿಸ್ತೀರ್ಣ, ವಾಸ್ತವವಾಗಿ ಹೂಡಿಕೆಯಾದ ಬಂಡವಾಳ – ಇವುಗಳನ್ನು ಕೋಷ್ಟಕ–2 ಕೊಡುತ್ತದೆ. ಈ ಕೋಷ್ಟಕದಲ್ಲಿ ಸಮಾವೇಶಗಳ ಘೋಷಣೆಗೂ ಘಟಕಗಳು ಆರಂಭವಾಗಿರುವ ವಾಸ್ತವಕ್ಕೂ ಇರುವ ಅಗಾಧ ಅಂತರವನ್ನು ತೋರಿಸುತ್ತದೆ. ಅನುಷ್ಠಾನದ ಹಂತಕ್ಕೆ ಬಂದು ಭೂಮಿಯನ್ನು ಪಡೆದುಕೊಂಡು ಘಟಕ ಆರಂಭ ಮಾಡದ ಘಟಕಗಳು ಸಾಕಷ್ಟು ಇವೆಯೆಂಬುದೂ ಕಾಣುತ್ತದೆ. ಇವುಗಳಲ್ಲಿ ಅನುಷ್ಠಾನ ಆರಂಭವಾಗಿರುವುದು ಎಂದರೆ ಭೂಮಿಯನ್ನು ಪಡೆದುಕೊಳ್ಳುವುದು ಅಷ್ಟೇ ಆಗಿದೆ ಅಥವಾ ನಾಮ್–ಕಾ–ವಾಸ್ತೆ ಕೆಲವು ಕಾಮಗಾರಿಗಳು ಆಗಿವೆ.

ಕೋಷ್ಟಕ–3 ಮೂರು ಸಮಾವೇಶಗಳು ಸೃಷ್ಟಿಸಿದ ಭರವಸೆ(ಭ್ರಮೆ ಎಂದರೆ ಹೆಚ್ಚು ಸರಿಯಾದೀತು) ಮತ್ತು ವಾಸ್ತವಗಳ ನಡುವಿರುವ ಅಂತರದ ಪ್ರಮಾಣಾತ್ಮಕ ಚಿತ್ರವನ್ನು ಕೊಡುತ್ತದೆ. ಸಮಾವೇಶದಲ್ಲಿ ಅನುಮೋದನೆ ಆಗಿವೆ ಎಂದು ಘೋಷಿಸಲಾದ ಪ್ರಸ್ತಾವಗಳ ಎಷ್ಟು ಪ್ರಮಾಣ (ಶೇಕಡಾವಾರು ಭಾಗ) ಅನುಷ್ಠಾನದ ಹಂತಕ್ಕೆ ಬಂದಿದೆ, ಎಷ್ಟು ಘಟಕಗಳ ಪ್ರಮಾಣ ಆರಂಭದ ಹಂತಕ್ಕೆ ಬಂದಿವೆ ಎಂದು ಕೋಷ್ಟಕ ತಿಳಿಸುತ್ತದೆ. ವಾಸ್ತವವಾಗಿ ಹೂಡಿದ ಬಂಡವಾಳ ಮತ್ತು ಬಳಕೆಯಾದ ಭೂಮಿಯ ಪ್ರಮಾಣದ ವಿವರವನ್ನೂ ಇದು ಕೊಡುತ್ತದೆ.

ಒಟ್ಟಾರೆಯಾಗಿ ನೋಡುವುದಾದರೆ ಹಿಂದಿನ ಮೂರು ಜಿಮ್ ಸಮಾವೇಶಗಳಲ್ಲಿ ಅನುಮೋದನೆಯಾಗಿವೆ ಎಂದು ಘೋಷಣೆಯಾದ ಪ್ರತಿ 8 ಪ್ರಸ್ತಾವನೆಗಳಲ್ಲಿ, ಕೇವಲ ಎರಡು ಘಟಕಗಳು ಅನುಷ್ಠಾನದ ಹಂತಕ್ಕೆ ಬಂದಿವೆ. ಅದರಲ್ಲಿ ಒಂದು ಘಟಕ ಮಾತ್ರ ಆರಂಭವಾಗಿದೆ. ಘೋಷಿತ ಬಂಡವಾಳದ ಕೇವಲ 10ರಲ್ಲಿ ಒಂದು ಭಾಗ ವಾಸ್ತವವಾಗಿ ಹೂಡಿಕೆಯಾಗಿದೆ. ಆದರೆ ಆರಂಭವಾಗದ ಅರ್ಧದಷ್ಟು ಘಟಕಗಳು ಸುಮಾರು ಶೇ. 70ರಷ್ಟು ಭೂಮಿಯನ್ನು ಇಟ್ಟುಕೊಂಡಿವೆ! ಎಷ್ಟು ಉದ್ಯೋಗಗಳನ್ನು ವಾಸ್ತವವಾಗಿ ಸೃಷ್ಟಿಸಿವೆ ಎಂಬುದಕ್ಕೆ ದಾಖಲೆಗಳಿಲ್ಲ. ಇದು ಹಿಂದಿನ ಸಮಾವೇಶಗಳ ರೆಕಾರ್ಡು. ಈ ಹಿನ್ನೆಲೆಯಲ್ಲಿ ಈ ಸಮಾವೇಶಕ್ಕೆ ಅರ್ಥವಿದೆಯೇ?

ಇದ್ದಿದ್ದರಲ್ಲಿ ಭರವಸೆಗೂ ವಾಸ್ತವಕ್ಕೂ ಕಡಿಮೆ ಅಂತರವಿರುವುದು 2000ದ ಜಿಮ್ ಸಮಾವೇಶದಲ್ಲಿ. ಅತಿ ಹೆಚ್ಚು ಅಂತರವಿರುವುದು 2010ರ ಜಿಮ್ ಸಮಾವೇಶದಲ್ಲಿ. ಇದರಲ್ಲಿ 3 ರಲ್ಲಿ 2 ಕಂಪನಿಗಳು ಘಟಕ ಆರಂಭ ಮಾಡಿಲ್ಲ. ಆದರೆ ಶೇ. 95 ಭೂಮಿಯನ್ನು ಬಳಸದೆ ಇಟ್ಟುಕೊಂಡಿವೆ! ಇದು ಅತ್ಯಂತ ಅಬ್ಬರದ ಸಮಾವೇಶವೂ ಆಗಿತ್ತು. ಜಿಮ್ ಸಮಾವೇಶದ ಮೂಲಕ

ಪುಟ 10 ನೋಡಿ

ಕೋಷ್ಟಕ–1: ಭರವಸೆ – ಸಮಾವೇಶದ ಘೋಷಣೆ
ಮೂಲ: ವಿಧಾನಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂ. 400 ಮತ್ತು ವಿಧಾನ ಪರಿಷತ್ ಪ್ರಶ್ನೆ ಸಂ.565

ಸಮಾವೇಶದ ವರ್ಷ	ಅನುಮೋದನೆ ಆದ ಪ್ರಸ್ತಾವನೆಗಳ ಸಂಖ್ಯೆ	ಉದ್ದೇಶಿತ ಬಂಡವಾಳ ಹೂಡಿಕೆ (ರೂ. ಕೋಟಿ)	ಸೃಷ್ಟಿಯಾಗುತ್ತದೆಂದು ಹೇಳಲಾದ ಉದ್ಯೋಗಗಳು
ಜಿಮ್–2000	254	27,160	98,910
ಜಿಮ್–2010	389	3,92,768	7,35,292
ಜಿಮ್–2012	246	2,81,520	13,50,802
ಒಟ್ಟು	**889**	**7,01,448**	**21,85,004**

ಕೋಷ್ಟಕ–2 : ವಾಸ್ತವ – ಆರಂಭವಾದ ಘಟಕಗಳ ಅಂಕಿಅಂಶಗಳು
ಮೂಲ: ವಿಧಾನಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂ.400 ಮತ್ತು ವಿಧಾನ ಪರಿಷತ್ ಪ್ರಶ್ನೆ ಸಂ.565)

ಸಮಾವೇಶದ ವರ್ಷ	ಅನುಷ್ಠಾನದ ಹಂತಕ್ಕೆ ಬಂದ ಘಟಕಗಳು	ಕೆಐಎಡಿಬಿ ಹಂಚಿದ ಭೂ ವಿಸ್ತೀರ್ಣ (ಎಕರೆಗಳಲ್ಲಿ)	ವಾಸ್ತವವಾಗಿ ಆರಂಭವಾದ ಘಟಕಗಳು	ವಾಸ್ತವವಾಗಿ ಬಳಕೆಯಾದ ಭೂ ವಿಸ್ತೀರ್ಣ (ಎಕರೆಗಳಲ್ಲಿ)	ವಾಸ್ತವವಾಗಿ ಹೂಡಿಕೆಯಾದ ಬಂಡವಾಳ (ರೂ. ಕೋಟಿ)
ಜಿಮ್–2000	53	3,141	52	3,347	8,000
ಜಿಮ್–2010	133	11,383	37	600	32,957
ಜಿಮ್–2012	45	2,003	21	1143	27,071
ಒಟ್ಟು	**231**	**16,797**	**110**	**5,091**	**68,028**

ಕೋಷ್ಟಕ 3: ಭರವಸೆ ಮತ್ತು ವಾಸ್ತವ
(ಕೋಷ್ಟಕ 1 ಮತ್ತು 2 ರ ಅಂಕೆಸಂಖ್ಯೆಗಳ ವಿಶ್ಲೇಷಣೆ)

ಸಮಾವೇಶದ ವರ್ಷ	ಅನುಷ್ಠಾನದ ಹಂತಕ್ಕೆ ಬಂದ ಪ್ರಸ್ತಾವನೆಗಳ ಶೇಕಡಾ	ಘಟಕ ಪ್ರಾರಂಭದ ಹಂತಕ್ಕೆ ಬಂದ ಪ್ರಸ್ತಾವನೆಗಳ ಶೇಕಡಾ	ವಾಸ್ತವವಾಗಿ ಹೂಡಿಕೆಯಾದ ಬಂಡವಾಳದ ಶೇಕಡಾ	ವಾಸ್ತವವಾಗಿ ಬಳಕೆಯಾದ ಭೂಮಿಯ ಶೇಕಡಾ
ಜಿಮ್–2000	20.9	20.5	29.5	106.0
ಜಿಮ್–2010	34.2	10.3	8.4	5.3
ಜಿಮ್–2012	18.3	8.5	9.6	57.0
ಒಟ್ಟು	**26.0**	**12.4**	**9.7**	**30.3**

ಬಳ್ಳಾರಿಯ ಅನುಭವ

ಇದು ಇಡೀ ರಾಜ್ಯದ ಸ್ಥೂಲ ಚಿತ್ರವಾದರೆ ಬಳ್ಳಾರಿಯ ನಿರ್ದಿಷ್ಟ ಚಿತ್ರಣ ಜಿಮ್ ಭ್ರಮೆಯ ಮೇಲೆ ಇನ್ನಷ್ಟು ಹೆಚ್ಚು ಬೆಳಕು ಚೆಲ್ಲುತ್ತದೆ. ಜಿಮ್ 2010ರ ಹೂಡಿಕೆಯ ಅರ್ಧ ಭಾಗ ಬಳ್ಳಾರಿಗೆ ಬಂದಿದೆ. ಜಿಮ್ 2010ರಲ್ಲಿ ಬಳ್ಳಾರಿಗೆ ಕೊಟ್ಟ ಭರವಸೆ 1.39 ಲಕ್ಷ ಕೋಟಿ ರೂ. ಹೂಡಿಕೆ, 35 ಕೈಗಾರಿಕೆಗಳು, 79 ಸಾವಿರ ಉದ್ಯೋಗಗಳು. ಕಳೆದ ಐದು ವರ್ಷಗಳಲ್ಲಿ ವಾಸ್ತವವಾಗಿ ಬಂದಿದ್ದು 15 ಕೈಗಾರಿಕೆಗಳು, 16.4 ಸಾವಿರ ಕೋಟಿ ರೂ. ಹೂಡಿಕೆ ಮಾಡಿ ಆರಂಭವಾಗಿವೆ. ಆದರೆ ಸೃಷ್ಟಿಯಾದ ಉದ್ಯೋಗಗಳು ಕೇವಲ 9,229.

ಪ್ರಗತಿ ಹಂತದಲ್ಲಿರುವ ಮೂರು ಪ್ರಮುಖ ಸ್ಟೀಲ್ ಉತ್ಪಾದನೆಯ ಸ್ಥಿತಿ ನೋಡಿದರೆ ಜಿಮ್ ಬಣ್ಣ ಬಯಲಾಗುತ್ತದೆ. ಬ್ರಹ್ಮಿಣಿ, ಎನ್.ಎಂ.ಡಿ.ಸಿ. ಮತ್ತು ಆರ್ಸೆಲರ್ – ಆ ಮೂರು ಕಂಪನಿಗಳು. ಅವುಗಳ ಹುಟ್ಟಿಸಿದ ಭರವಸೆ ಮತ್ತು ವಾಸ್ತವಗಳ ನಡುವಿನ ಅಂತರ ಮುಂದಿನ ಕೋಷ್ಟಕದಲ್ಲಿದೆ. ಅವುಗಳಲ್ಲಿ ಯಾವುದೂ ಭೂಸ್ವಾಧಿನ ಬಿಟ್ಟರೆ ಯಾವುದೇ ಕೆಲಸ ಆರಂಭಿಸಿಲ್ಲ. ಅವು ಹೂಡಿಕೆ ಮಾಡಿರುವ ಬಂಡವಾಳ ಅಂದರೆ ಭೂಮಾಲಕರಿಗೆ ಕೊಟ್ಟಿರುವ ಪರಿಹಾರದ ಮೊತ್ತ ಸುಮಾರು 250ರಿಂದ 350 ಕೋಟಿ ರೂ. ಮಾತ್ರ. ಬ್ರಹ್ಮಿಣಿ ಯಂತೂ ಕಂಪನಿಯನ್ನು (ಅಂದರೆ ಭೂಮಿಯನ್ನು, ಅದು ಬಿಟ್ಟರೆ ಇನ್ನೇನೂ ಇಲ್ಲವಲ್ಲ) ಉತ್ತಮ್ ಗಾಲ್ವಾರ್ ಎಂಬ ಇನ್ನೊಂದು ಕಂಪನಿಗೆ ಮಾರಿ ಬಿಟ್ಟಿದೆ. ಇದು ಜಿಮ್ ತರುವ ಕೈಗಾರಿಕೀಕರಣ. ಬರಿಯ ಭೂಸ್ವಾಧೀನ ಪಡಿಸಿಕೊಳ್ಳುವ ಒಂದು ಹುನ್ನಾರ.

ಸ್ಟೀಲ್ ಕಂಪನಿ	ಉದ್ದೇಶಿತ ಬಂಡವಾಳ ಹೂಡಿಕೆ (ಕೋಟಿ.ರೂ.)	ಸೃಷ್ಟಿಯಾಗುತ್ತದೆಂದು ಹೇಳಲಾದ ಉದ್ಯೋಗಗಳು	ಸ್ವಾಧೀನಪಡಿಸಿದ ಭೂಮಿ ವಿಸ್ತೀರ್ಣ (ಎಕ್ರೆಗಳಲ್ಲಿ)	ಈಗಿನ ಸ್ಥಿತಿ
ಬ್ರಹ್ಮಿಣಿ *	36,000	25,000	4950	ಯಾವ ಕಾಮಗಾರಿ ಇಲ್ಲ
ಎನ್.ಎಂ.ಡಿ.ಸಿ.	9280	2,500	2850	– ಅದೇ –
ಆರ್ಸೆಲರ್	30,000	10,000	5368	– ಅದೇ –

ಶಂಕಿತ ಉಗ್ರರ ಸೆರೆ ನಂತರ ಏನಾಗುತ್ತೆ ?

(ಜನವರಿ 26ರಂದು ಉದಯವಾಣಿಯಲ್ಲಿ ಪ್ರಕಟವಾದ ದಿನೇಶ್ ಪತ್ರ)

ಜನವರಿ 23ರಂದು ಪುಸ್ತಕ ಪ್ರೀತಿ ಎಂಬ ಸಂಸ್ಥೆ ಸೆಕ್ಯುಲರ್ ವಾದ ಎಂಬ ವಿಷಯದ ಮೇಲೆ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ನಾನು ಮಾತನಾಡಿದ್ದೆ. ಆ ಬಗ್ಗೆ ನಿಮ್ಮ ವರದಿ ಬಹುತೇಕ ಸಮರ್ಪಕವಾಗಿದ್ದರೂ ಗ್ರಹಿಕೆಯ ವೈಫಲ್ಯದಿಂದಾಗಿ ತಪ್ಪು ಅರ್ಥಮಾಡಿಕೊಳ್ಳುವವರ ಕೈಗೆ ವಿವಾದ ಸಿಕ್ಕಿದಂತಾಗುತ್ತದೆ. ಅದು ನನ್ನ ಸುಮಾರು 30 ನಿಮಿಷಗಳ ಭಾಷಣ. ನಾನು ಮಾತನಾಡುತ್ತಿರುವುದು ಸೂಕ್ಷ್ಮ ವಿಷಯವೆಂದು ನನಗೆ ಗೊತ್ತಿರುವ ಕಾರಣ, ಇದನ್ನು ಮಾಧ್ಯಮಗಳು ತಪ್ಪಾಗಿ ವರದಿ ಮಾಡುವ ಸಾಧ್ಯತೆಯೂ ಇದೆ ಎಂದು ಹೇಳಿದ್ದೆ. ವಿವಾದಕ್ಕೆ ಕಾರಣವಾದ ನನ್ನ ಮಾತುಗಳ ಮೂಲ ರೂಪದ ಅಂಶಗಳು ಇಲ್ಲಿವೆ:

1. ಹಿಂದೂ ಮತ್ತು ಮುಸ್ಲಿಮ್ ಕೋಮುವಾದಗಳೆರಡನ್ನೂ ನಾವು ವಿರೋಧಿಸಬೇಕಾಗುತ್ತದೆ, ಈ ಬಗ್ಗೆ ನಮಗೆ ಯಾವುದೇ ಹಿಂಜರಿಕೆ, ಗೊಂದಲಗಳು ಇರಬಾರದು.
2. ಕೋಮುವಾದವನ್ನು ಕೊನೆಗಾಣಿಸಬೇಕೆಂಬ ಪ್ರಾಮಾಣಿಕ ಇಚ್ಚೆ ನಮಗಿದ್ದರೆ ಮೊದಲು ಯಾವ ಕೋಮುವಾದ ಹೇಗೆ ಹುಟ್ಟಿಕೊಂಡಿತು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ.
3. ಹಿಂದೂ ಕೋಮುವಾದಕ್ಕೆ ಬಹುಸಂಖ್ಯಾತರೆಂಬ ಮೇಲರಿಮೆ ಮತ್ತು ಅಹಮಿಕೆ ಹಾಗೂ ಮುಸ್ಲಿಮ್ ಕೋಮುವಾದಕ್ಕೆ ಅಲ್ಪ ಸಂಖ್ಯಾತರೆಂಬ ಕೀಳರಿಮೆ ಮತ್ತು ಅಸುರಕ್ಷತೆ ಕಾರಣವಾಗುತ್ತದೆ. ಇದನ್ನು ಅರ್ಥಮಾಡಿಕೊಂಡರೆ ಮಾತ್ರ ಎರಡೂ ಧರ್ಮಗಳ ಕೋಮುವಾದವನ್ನು ಕೊನೆಗಾಣಿಸಲು ಸರಿಯಾದ ಕಾರ್ಯತಂತ್ರವನ್ನು ರೂಪಿಸಲು ಸಾಧ್ಯ.
4. ಆದರೆ ಇಂದು ಭಯೋತ್ಪಾದಕರ ಹೆಸರಲ್ಲಿ ಮುಸ್ಲಿಮ್ ಗುಮ್ಮನನ್ನು ತೋರಿಸಿ ಆ ಮೂಲಕ ಹಿಂದೂ ಧರ್ಮವನ್ನು ಸಂಘಟಿಸಲು ಹೊರಟಿರುವವರು ಹಿಂದೂ ಕೋಮುವಾದವನ್ನು ಬೆಳೆಸುತ್ತಿದ್ದಾರೆ.
5. ಧರ್ಮವನ್ನು ಬಿಟ್ಟು ಸೆಕ್ಯುಲರ್ ವಾದವನ್ನು ನಾವು ಕಟ್ಟಲಾಗುವುದಿಲ್ಲ. ಬಹುಶಃ ಎಡಪಂಥೀಯರು ಕೋಮುವಾದವನ್ನು ಸಮರ್ಥವಾಗಿ ಎದುರಿಸಲಾಗದೆ ಇರುವುದಕ್ಕೆ ಈ ಜಾತಿ–ಧರ್ಮದ ಕುರುಡು ಕೂಡಾ ಕಾರಣ. ಆದ್ದರಿಂದ ಧರ್ಮವನ್ನು ಸಾರಾಸಗಟಾಗಿ ತಿರಸ್ಕರಿಸದೆ ಧರ್ಮಾವಲಂಬಿಗಳ ಭಾವನೆಗಳನ್ನು ಗೌರವಿಸುತ್ತಲೇ ಸೆಕ್ಯುಲರ್ ವಾದವನ್ನು ಗಟ್ಟಿಗೊಳಿಸಬೇಕಾಗುತ್ತದೆ.
6. ಪ್ರತಿ ಬಾರಿ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಯ ಮೊದಲು ಒಂದಷ್ಟು ಶಂಕಿತ ಭಯೋತ್ಪಾದಕರ ಬಂಧನ ನಡೆಯುತ್ತಿರುವುದು ಕಳೆದ 10–15 ವರ್ಷಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಇದನ್ನು ನಾನು ಪತ್ರಕರ್ತನಾಗಿ ವರದಿ ಮಾಡಿದ್ದೇನೆ. ಆದರೆ ಬಂಧಿತರ ಸ್ಥಿತಿ ನಂತರ ಏನಾಯಿತೆಂಬ ಬಗ್ಗೆ ಪತ್ರಕರ್ತರೂ ಸೇರಿದ ಹಾಗೆ ಯಾರು ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಮುಸ್ಲಿಮ್ ಯುವಕರು ಭಯೋತ್ಪಾದಕ–ರೆಂಬ ಅಭಿಪ್ರಾಯ ಮಾತ್ರ ಇನ್ನಷ್ಟು ಜೋರಾಗಿ ಹರಡುತ್ತದೆ. ವಿಚಾರಣಾಧೀನ ಶಂಕಿತ ಭಯೋತ್ಪಾದಕರ ಸಂಖ್ಯೆ ಹೆಚ್ಚುತ್ತಲೇ ಇರುವುದು ಕಳವಳಕಾರಿಯಾದುದು.
7. ಮೊದಲು ಈ ಧರ್ಮದೊಳಗಿನ ಜಾತೀಯತೆ, ಅಸ್ಪೃಶ್ಯತೆ, ತಾರತಮ್ಯದ ನಿವಾರಣೆಯಾಗಬೇಕು. ಪೇಜಾವರ ಸ್ವಾಮಿಗಳಂಥವರು ಈ ಬಗ್ಗೆ ಯೋಚನೆ ಮಾಡಬೇಕು. ದಲಿತರ ಕೇರಿಗೆ ಹೋದರಷ್ಟೇ.

ªÀiÁzsÀåªÀÄ«ÄªÀiÁA¸À

ಸೆಕ್ಯುಲರ್‌ವಾದ ಮರೆಸಲು ಮಾಧ್ಯಮ 'ಭಯೋತ್ಪಾದನೆ'

ಕೆ.ಇ. ಸಿದ್ದಯ್ಯ

ಇಂದು ಪುಸ್ತಕಗಳಿಗೆ ಮಾಧ್ಯಮಗಳಲ್ಲಿ ಯಾವುದೇ ಸ್ಥಾನ ಇಲ್ಲ. ಅರಿವಿನ ಗೂಡಾದ ಗಂಭೀರ ಪುಸ್ತಕಗಳ ವಾಸನೆ ಸಹ ಓದುಗರಿಗೆ ದೊರೆಯದಂತೆ ಅವು ನೋಡಿಕೊಳ್ಳುತ್ತವೆ. ಪತ್ರಿಕೆಗಳು ಗಂಭೀರ ಪುಸ್ತಕ ವಿಮರ್ಶೆ ನಿಲ್ಲಿಸಿ ಬಹಳ ಕಾಲವಾಗಿದೆ. ಪುಸ್ತಕ ವಿಮರ್ಶೆಗಳಿಗೆ ಪ್ರಸಿದ್ಧವಾಗಿದ್ದ ಪ್ರಜಾವಾಣಿ, ದಿ ಹಿಂದೂ ಪತ್ರಿಕೆಗಳ ವಿಮರ್ಶಾ ಕಾಲಂಗಳು ತೆಳುವಾಗುತ್ತಾ ನಡೆದಿವೆ. ಟಿವಿ ವಾಹಿನಿಗಳಲ್ಲಂತೂ ಪುಸ್ತಕಗಳಿಗೆ ಯಾವತ್ತೂ ಸ್ಥಾನ ಇರಲಿಲ್ಲ. ಇನ್ನು ಪುಸ್ತಕಗಳ ಬಗ್ಗೆ ಸಂವಾದಕ್ಕೆ ಎಲ್ಲಿನ ಸ್ಥಾನ? ಆದರೆ ಕಳೆದ ವಾರ ಏಕಾಏಕಿ ಕೆಲವು ಪತ್ರಿಕೆಗಳಿಗೆ ಮತ್ತು ಹೆಚ್ಚು ಕಡಿಮೆ ಎಲ್ಲಾ ಟಿವಿ ಚಾನೆಲುಗಳಿಗೆ ಪುಸ್ತಕಗಳ ಬಗ್ಗೆ ವಿಪರೀತ ಪ್ರೀತಿ ಹುಟ್ಟಿತು. 'ಪುಸ್ತಕಪ್ರೀತಿ'ಯ 'ತಿಂಗಳ ಮಾತುಕತೆ' ಕಾರ್ಯಕ್ರಮದ ಅಂಗವಾಗಿ 'ಸೆಕ್ಯುಲರ್‌ವಾದ: ಸವಾಲುಗಳು' ಎಂಬ ವಿಷಯದ ಬಗ್ಗೆ ನಡೆಸಿದ ಸಂವಾದದಲ್ಲಿ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್‌ಮಟ್ಟು ಆಶಯ ಭಾಷಣ ಮಾಡಿದರು. ಸಂವಾದದಲ್ಲಿ ಒಂದು ಪತ್ರಿಕೆಯ ವರದಿಗಾರ ಬಿಟ್ಟರೆ ಇತರ ಟಿವಿ ಅಥವಾ ಪತ್ರಿಕೆಯ ವರದಿಗಾರರು ಬಂದಿರಲಿಲ್ಲ. ಮರುದಿನ ವಾರ್ತಾಭಾರತಿ ಮತ್ತು ಉದಯವಾಣಿಗಳಲ್ಲಿ ಸಂವಾದದ ಬಗ್ಗೆ ವರದಿಯಾಯಿತು.

ಸುರೇಶ್ ಕುಮಾರ್ ದಾಳಿ

ಎರಡು ವರದಿಗಳೂ ಪ್ರಧಾನವಾಗಿ ತೆಗೆದು–ಕೊಂಡದ್ದು ದಿನೇಶ ಅಮಿನ್ ಮಟ್ಟು ಅವರು ಆಶಯ ಭಾಷಣದಲ್ಲಿ ಆಡಿದ ಒಂದು ಮಾತನ್ನು. ಸೆಕ್ಯುಲರ್ ವಾದಕ್ಕೆ ಬಹುಸಂಖ್ಯಾತ ಮತ್ತು ಅಲ್ಪಸಂಖಾತ ಕೋಮುವಾದಗಳಿಂದ ಬಂದಿರುವ ಗಂಭೀರ ಸವಾಲುಗಳ ಸಂದರ್ಭದಲ್ಲಿ, ಅದರ ಹುಟ್ಟು ಪರಿಣಾಮಗಳ ಬಗ್ಗೆ ಚರ್ಚಿಸುತ್ತಾ ನಡೆಸಿದ ಮಾಡಿದ ಕಮೆಂಟು ಅದು. 'ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಮುನ್ನಾ ಒಂದೆರಡು ದಿನಗಳಲ್ಲಿ ಅಲ್ಪಸಂಖ್ಯಾತ ಮುಸ್ಲಿಮ್ ಯುವಕರನ್ನು ಬಂಧಿಸುವ ಮೂಲಕ ಹಿಂದೂ ಸಮುದಾಯದಲ್ಲಿ ಮುಸ್ಲಿಮರು ಭಯೋತ್ಪಾದಕರು ಎಂಬ ತಪ್ಪು ಮಾಹಿತಿ ರವಾನಿಸಲಾಗುತ್ತಿದೆ' ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರೆಂದು ಉದಯವಾಣಿ ಪ್ರಕಟಿಸಿತು. ಕೂಡಲೇ ದಿನೇಶ್ ಅವರ ಈ ರೀತಿಯ ಹೇಳಿಕೆಗೆ ಬಿಜೆಪಿಯ ಮಾಜಿ ಸಚಿವ ಎಸ್.ಸುರೇಶ್‌ಕುಮಾರ್ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್‌ಮಟ್ಟು ತಮ್ಮ ಹುದ್ದೆಗೆ ರಾಜಿನಾಮೆ ನೀಡಬೇಕೆಂದು ಆಗ್ರಹಿಸಿದರು. ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಶಿ ಸೇರಿದಂತೆ ಕೆಲವು ಮುಖಂಡರು ಕೂಡ ಇದಕ್ಕೆ ಬೆಂಬಲ ನೀಡಿದರು. ಅವರ ಮೇಲೆ ಮೊಕದ್ದಮೆ ಹೂಡಿ ಎಂದೂ ಆಗ್ರಹಿಸಿದರು. ದಿನೇಶ್ ಅವರ ಹೇಳಿಕೆ ಭಯೋತ್ಪಾದನೆಯ ವಿರುದ್ಧ ಕೇಂದ್ರ/ರಾಜ್ಯ ಸರಕಾರಗಳ ಕಾರ್ಯಾಚರಣೆಯನ್ನು ವಿರೋಧಿಸಿದಂತೆ. ಅದು ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ದುರ್ಬಲಗೊಳಿಸುತ್ತದೆ ಎಂಬುದು ಅವರ ವಾದವಾಗಿತ್ತು. ಬಿಜೆಪಿಯ ಈ ಪ್ರತಿಕ್ರಿಯೆಗೆ ವ್ಯಾಪಕ ಪ್ರಚಾರ ದೊರೆಯಿತು – ಪತ್ರಿಕೆಗಳಲ್ಲೂ, ಟಿವಿ ಚಾನೆಲುಗಳಲ್ಲೂ. ಈ ವಿವಾದದ ನಂತರವೂ ಮೂಲ ಸಂವಾದದಲ್ಲಿ ಏನು ಚರ್ಚೆಯಾಯಿತು, ಯಾವ ಸಂದರ್ಭದಲ್ಲಿ ಈ ಹೇಳಿಕೆ ಬಂದಿದ್ದು ಎಂಬುದು ಯಾವ ಪತ್ರಿಕೆ/ಟಿವಿ ಚಾನೆಲುಗಳಿಗೆ ಮುಖ್ಯ ಅನಿಸಲಿಲ್ಲ (ಈ ಸಂವಾದದ ವರದಿ ಪುಟ 15ರಲ್ಲಿ ಇದೆ)

"ನೀವು ಬಿಜೆಪಿ ಬಿಟ್ಟರೆ ನಾನೂ ರಾಜಿನಾಮೆ ಕೊಡುತ್ತೇನೆ"

ದಿನೇಶ್ ಅಮೀನ್‌ಮಟ್ಟು ಈ ಬಗ್ಗೆ ಸ್ಪಷ್ಟನೆ ನೀಡುತ್ತಾ ತಾವು ಭಯೋತ್ಪಾದನೆಯ ವಿರುದ್ಧ ಕೇಂದ್ರ/ರಾಜ್ಯ ಸರಕಾರಗಳ ಕಾರ್ಯಾಚರಣೆಯನ್ನು ವಿರೋಧಿಸಿಲ್ಲ, ಪ್ರಶ್ನಿಸಿಲ್ಲ. ಬದಲಾಗಿ ಈ ಬಂಧನಗಳ 1–2 ವರ್ಷಗಳ ನಂತರ ಏನಾಗುತ್ತೆ ಎಂಬುದರ ಬಗ್ಗೆ ನಾನು ಹೇಳಿದ್ದು ಎಂದರು. "ಧಾರ್ಮಿಕ ಕೋಮುವಾದದ ಮೇಲರಿಮೆ ಮತ್ತು ಕೀಳರಿಮೆಗಳ ಕುರಿತು ಸ್ಪಷ್ಟ ಅರಿವು ಇದ್ದಲ್ಲಿ ಮಾತ್ರ ಹಿಂದೂ ಹಾಗೂ ಮುಸ್ಲಿಂ ಎರಡು ಕೋಮುವಾದ ಕೊನೆಗಾಣಿಸಲು ಸರಿಯಾದ ಕಾರ್ಯತಂತ್ರ ರೂಪಿಸಲು ಸಾಧ್ಯ" ಎಂದು ಹೇಳಿದ್ದಾಗಿ ಎಲ್ಲಾ ಪತ್ರಿಕೆಗಳಿಗೆ ಸ್ಪಷ್ಟೀಕರಣ ನೀಡಿದರು. ಆದರೆ ಕೆಲವು ಪ್ರಕಟಿಸಿ ಪತ್ರಿಕಾಧರ್ಮ ಪಾಲಿಸಿದವು. ಇನ್ನು ಕೆಲವು ಪ್ರಕಟಿಸದೆ ಸತ್ಯವನ್ನು ಮರೆಮಾಚಿಸಿದವು. (ಉದಯವಾಣಿಯಲ್ಲಿ ಪ್ರಕಟವಾದ ದಿನೇಶ್ ಪತ್ರ ಈ ಲೇಖನದ ಜತೆ ಇದೆ)

ಅಷ್ಟೇ ಅಲ್ಲ, ದಿನೇಶ್ ಅಮೀನ್‌ಮಟ್ಟು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬಿಜೆಪಿ ಶಾಸಕ ಸುರೇಶ್ ಕುಮಾರ್ ಮತ್ತಿತರರ ಟೀಕೆಗಳಿಗೆ ಉತ್ತರಿಸಿ ಒಂದು ಬಹಿರಂಗ ಪತ್ರ ಬರೆದರು. "ನಾನು ಹಿಂದೂ ಮತ್ತು ಮುಸ್ಲಿಂ ಭಯೋತ್ಪಾದನೆ ಮತ್ತು ಕೋಮುವಾದವನ್ನು ವಿರೋಧಿಸಿಕೊಂಡು ಬಂದವನು. ಆದರೆ ನೀವು(ಸುರೇಶ್‌ಕುಮಾರ್) ಮುಸ್ಲಿಂ ಭಯೋತ್ಪಾದನೆಯನ್ನು ಮಾತ್ರ ವಿರೋಧಿಸುತ್ತಿದ್ದೀರಿ. ನೀವು ಹೇಳಿದ ದೇವರಲ್ಲಿಗೆ ಬಂದು ಪ್ರಮಾಣ ಮಾಡು ಎಂದರೆ ಹಾಗೆಯೇ ಮಾಡುತ್ತೇನೆ. ನನ್ನ ನಂಬಿಕೆಗಿಂತ ನಿಮ್ಮ ನಂಬಿಕೆಯೇ ಮುಖ್ಯ. ನಾನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಹುದ್ದೆಗೆ ರಾಜಿನಾಮೆ ನೀಡುತ್ತೇನೆ. ಮುಂದೆ ಯಾವ ಪಕ್ಷವನ್ನೂ ಸೇರುವುದಿಲ್ಲ. ನೀವು ಕೂಡ ಬಿಜೆಪಿ ಪಕ್ಷಕ್ಕೆ ರಾಜಿನಾಮೆ ಕೊಡಿ. ಇಬ್ಬರೂ ಸೇರಿ ಹಿಂದೂ ಕೋಮುವಾದ ಮತ್ತು ಮುಸ್ಲಿಂ ಭಯೋತ್ಪಾದನೆ ವಿರುದ್ಧ ಹೋರಾಟ ಮಾಡೋಣ...." ಎಂದು ಸವಾಲು ಹಾಕಿದರು.

"ಭಯೋತ್ಪಾದನೆ' ಒನ್–ಪಾಯಿಂಟ್ ಅಜೆಂಡಾ

ಆದರೆ, ದಿನೇಶ್ ಅಮೀನ್ ಮಟ್ಟು ನೀಡಿದ ಹೇಳಿಕೆಯಲ್ಲಿ ದೊಡ್ಡ ಪ್ರಮಾದವೇನೋ ನಡೆದುಹೋಗಿದೆ ಎಂಬಂತೆ ಭಾವಿಸಿದ ಕೆಲವು ದೃಶ್ಯ ಮಾಧ್ಯಮಗಳು ವಾಸ್ತವದಿಂದ ದೂರ ಸರಿದು ಅಮೀನ್ ಮಟ್ಟು ಅವರ ಮೇಲೆ ಮುಗಿಬಿದ್ದವು. ಎಲ್ಲಾ ಚಾನೆಲುಗಳಲ್ಲಿ ಇಡೀ ದಿನ ಅದೇ ಚರ್ಚೆ ನಡೆಯಿತು. ಕೆಲವು ಆರ್‌ಎಸ್‌ಎಸ್ ಮತ್ತು ಬಿಜೆಪಿ ಬೆಂಬಲಿತ ಮುಖಂಡರನ್ನು ಕರೆತಂದು ಸ್ಟುಡಿಯೋದಲ್ಲಿ ಕೂರಿಸಿ ಅಮೀನ್ ಮಟ್ಟು ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡಿದವು. ಅಷ್ಟೇ ಅಲ್ಲ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರ ನೈತಿಕ ಸ್ಥೈರ್ಯವನ್ನೂ ಕುಗ್ಗಿಸಲು ಹರಸಾಹಸ ಮಾಡಿದವು. ಟಿವಿ ಚರ್ಚೆಯಲ್ಲಿ "ಭಯೋತ್ಪಾದನೆ' ಒನ್–ಪಾಯಿಂಟ್ ಅಜೆಂಡಾ ಆಯಿತು. ಚರ್ಚೆಯ ಮೂಲ ವಿಷಯವಾಗಿದ್ದ ಸೆಕ್ಯುಲರ್‌ವಾದವಾಗಲಿ, ಅದರ ಮುಂದಿರುವ ಸವಾಲುಗಳಾಗಲಿ, ಭಯೋತ್ಪಾದನೆಯ ಮೂಲಕಾರಣಗಳಾಗಲಿ, ಕೋಮುವಾದ ಮೂಲಭೂತವಾದ ಭಯೋತ್ಪಾದನೆಗಳ ಸಂಕೀರ್ಣ ಸಂಬಂಧಗಳಾಗಲಿ ಚರ್ಚೆಯಲ್ಲಿ ಬರಲಿಲ್ಲ. ದಿನೇಶ್ ಸೇರಿದಂತೆ ಒಬ್ಬಿಬ್ಬರು ಅದರ ಬಗ್ಗೆ ಚರ್ಚಿಸಲು ಹೊರಟರೆ ಹೆಚ್ಚಾಗಿ ಆಂಕರ್ ಸಹ ಸೇರಿದಂತೆ ಉಳಿದವರು 'ನೀವು ಭಯೋತ್ಪಾದನೆಯ ಪರವಾ ವಿರುದ್ಧವಾ ಅದು ಮಾತ್ರ ಪ್ರಶ್ನೆ' ಎಂದು ಅದ–ಕ್ಕೆ ತಡೆ ಹಾಕುತ್ತಿದ್ದರು. ಭಯೋತ್ಪಾದನೆಯ ಬಗೆಗೇ ಗಂಭೀರ ಚರ್ಚೆಗೆ ತಯಾರಿರಲಿಲ್ಲ. ಭಯೋತ್ಪಾದನೆಯ ವಿರುದ್ಧ ಕಾರ್ಯಾಚರಣೆ ನಡೆಯುತ್ತಿರುವಾಗ, ಅದೂ ಗಣರಾಜ್ಯೋತ್ಸವದ ಮುನ್ನಾದಿನಗಳಲ್ಲಿ, ಹಿಂದಿನ ಬಂಧಿತ ಶಂಕಿತ ಪ್ರಕರಣಗಳು ಏನಾದವು, ಭಯೋತ್ಪಾದನೆಯ ಹುಟ್ಟು–ವಿಕಾಸದ ಮೂಲಕಾರಣಗಳ ಚರ್ಚೆ ನಡೆಸುವುದು ಸಹ 'ದೇಶ–ವಿರೋಧಿ' ಎಂಬ ಭಾವನೆಯನ್ನು ಟಿವಿ ಚಾನೆಲುಗಳು ವ್ಯಾಪಕವಾಗಿ ಬಿತ್ತಿದವು. ಸೆಕ್ಯುಲರ್‌ವಾದ ಮತ್ತು ಕೋಮುವಾದದ ಅಪಾಯಗಳನ್ನು ಮರೆಸಲು ಆಳುವವರಿಗೆ 'ಭಯೋತ್ಪಾದನೆ' ಅತ್ಯಂತ ಪ್ರಿಯ ವಿಷಯ. ಎಲ್ಲಾ ಟಿವಿ ಚಾನೆಲುಗಳು ದಿನೇಶ್ ಮತ್ತು ಸೆಕ್ಯುಲರ್‌ವಾದದ ವಿರುದ್ಧ 'ಭಯೋತ್ಪಾದನೆ'ಯ ಕಾರ್ಯಾಚರಣೆಯನ್ನು ಸಂಘಟಿತವಾಗಿ ಕೈಗೊಂಡಂತೆ ಇತ್ತು.

ಈ ಹಿಂದೆಯೂ ರಾಮನ ಬಗ್ಗೆ ಭಗವಾನ್ ಹೇಳಿಕೆಯನ್ನು ಇಟ್ಟುಕೊಂಡು ಟಿವಿ ಚಾನೆಲುಗಳು ವಿವಾದದ ರಾಡಿ ಎಬ್ಬಿಸಿದವು. ಡಾ. ಕಲಬುರ್ಗಿ ಅವರ ಮೂಢನಂಬಿಕೆಯ ಬಗೆಗಿನ ಹೇಳಿಕೆಯನ್ನೂ ಸಂದರ್ಭದಿಂದ ಹೊರ ತೆಗೆದು ತಿರುಚಿ ವಿವಾದದ ರಾಡಿ ಎಬ್ಬಿಸಿದ್ದವು ಇದೇ ಮಾಧ್ಯಮಗಳು. ಈ 'ಮಾಧ್ಯಮ ಭಯೋತ್ಪಾದನೆ' ಟಿವಿ ಚರ್ಚೆಯ ಸ್ಟಾಂಡರ್ಡ್ ವಿಧಾನ–ಶೈಲಿಯೋ ಎಂಬಂತೆ ಆಗಿದೆ. ■

ಇನ್‌ವೆಸ್ಟ್ ಕರ್ನಾಟಕ ಪುಟ 9 ರಿಂದ


ಭೂಸ್ವಾಧೀನಪಡಿಸಿಕೊಂಡಿದ್ದು ಬಿಟ್ಟರೆ ಗಮನಾರ್ಹ ಕೈಗಾರಿಕೀಕರಣ ಸಾಧಿಸಿದ್ದು ಕಾಣಿಸುವುದಿಲ್ಲ.

ವಿದೇಶಿ ನೇರ ಬಂಡವಾಳ ಎಂಬ ಭ್ರಮೆ:


ವಿದೇಶಿ ನೇರ ಬಂಡವಾಳ ಹರಿವನ್ನು ರಾಜ್ಯದೊಳಗೆ ಹರಿಯಬಿಟ್ಟರೆ ದೊಡ್ಡ ಕೈಗಾರಿಕೆಗಳು ಸ್ಥಾಪನೆಗೊಂಡು ಉದ್ಯೋಗವಕಾಶಗಳು ಹೆಚ್ಚಾಗುತ್ತವೆಂಬ ಭ್ರಮೆ ಕೂಡ ಇದೆ. ಜಾಗತಿಕ ಹೂಡಿಕೆದಾರರ ಸಮಾವೇಶ(ಜಿಮ್) ಎನ್ನುವಾಗ ಇಲ್ಲಿ ಬರುತ್ತಿರುವುದು ವಿದೇಶಿ ನೇರ ಬಂಡವಾಳ ಎಂಬ ಭಾವನೆ ಹುಟ್ಟಿಸುತ್ತದೆ. ಆದರೆ 2010 ರಲ್ಲಿ ನಡೆದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಅನುಮೋದನೆಗೊಂಡ 9 ವಿದೇಶಿ ಕಂಪನಿಗಳ ಯೋಜನೆಗಳಿಂದ ಕೇವಲ ರೂ. 1764 ಕೋಟಿ ಬಂಡವಾಳ ಹೂಡಿಕೆಯಾಗಿದೆ. ಇದೇ ರೀತಿ 2012 ರಲ್ಲಿ ನಡೆದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಅನುಮೋದನೆಗೊಂಡ 15 ವಿದೇಶಿ ಕಂಪನಿಗಳ ಯೋಜನೆಗಳಿಂದ ಕೇವಲ ರೂ. 4650 ಕೋಟಿ ಬಂಡವಾಳ ಹೂಡಿಕೆಯಾಗಿರುತ್ತದೆ. ಇದು ಆಯಾ ವರ್ಷದಲ್ಲಿ ಹೂಡಿಕೆಯಾದ ಒಟ್ಟು ಬಂಡವಾಳದ ಕೇವಲ ಶೇ. 5 (2010ರಲ್ಲಿ) ಮತ್ತು ಶೇ. 17 (2010ರಲ್ಲಿ).

ಈವರೆಗಿನ ಸಮಾವೇಶಗಳ ವೈಫಲ್ಯದ ಕಾರಣ ವಿಶ್ಲೇಷಿಸದೆ ಮತ್ತು ಅರ್ಥ ಮಾಡಿಕೊಳ್ಳದೆ ಇನ್ನೊಂದು ಸಮಾವೇಶ ಮಾಡುವುದು ಅರ್ಥಹೀನ. ಮಾತ್ರವಲ್ಲ, ಇಲ್ಲಿ ಹೂಡಿಕೆಯಾಗಿರುವ ಬಂಡವಾಳದಲ್ಲಿ ನಿಜವಾದ ಖಾಸಗಿ ಬಂಡವಾಳ ಇನ್ನಷ್ಟು ಕಡಿಮೆ ಇರುತ್ತದೆ. ಹೆಚ್ಚಿನ ಬಂಡವಾಳ (ವಿದೇಶಿಯಾಗಲಿ ಸ್ವದೇಶಿಯಾಗಲಿ) ತೊಡಗಿಸುವುದು ಅಂತಿಮವಾಗಿ ಬ್ಯಾಂಕುಗಳೇ. ಇಲ್ಲಿರುವ ಬಂಡವಾಳ ಜನತೆಯ ಉಳಿತಾಯದ ಅಥವಾ ತೆತ್ತ ಬಡ್ಡಿಯ ಹಣವೇ. ಕೈಗಾರಿಕಾ ಅಭಿವೃದ್ಧಿ ಕೆಲವು ದಿನಗಳ ಸಮಾವೇಶದಲ್ಲಿ ದಿಢೀರನೆ ಆಗುವಂತಹದಲ್ಲ. ಅದೊಂದು ದೀರ್ಘ ಸಂಕೀರ್ಣ ಪ್ರಕ್ರಿಯೆ. ಅದನ್ನು ವಿಶ್ಲೇಷಿಸಲು ಪ್ರತ್ಯೇಕ ಲೇಖನದ ಅಗತ್ಯ ಇದೆ.

ಈ ಹಿನ್ನೆಲೆಯಲ್ಲಿ, ರಾಜ್ಯದ ಭೂಮಿ, ನೀರು, ಖನಿಜ ಸಂಪತ್ತು, ಮತ್ತು ತೆರಿಗೆ ವಿನಾಯಿತಿಗಳನ್ನು ಒದಗಿಸುವಾಗ ಕೈಗಾರಿಕೆಗಳು ನಿಜಕ್ಕೂ ಸೃಷ್ಟಿಸಬಲ್ಲ ಉದ್ಯೋಗ ಮತ್ತು ಸ್ಥಳೀಯವಾಗಿ ಆಗಬಲ್ಲ ಅಭಿವೃದ್ಧಿಯನ್ನು ತುಲನೆ ಮಾಡದೇ ಹೋದರೆ, ಜನತೆಗೆ ಹಿಡಿ ಮಣ್ಣು ಕೂಡ ಸಿಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೂಡ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಮುಂದೆ ಅಂಗಲಾಚುತ್ತಾ ವಿವೇಚನಾರಹಿತ ಕೈಗಾರಿಕಾಭಿವೃದ್ಧಿಯ ದಿಕ್ಕಿನಲ್ಲಿಯೇ ಹೆಜ್ಜೆ ಹಾಕುತ್ತಿದೆ. ■



ಕ್ಯಾಸ್ಟ್ರೋ ಕಥೆ-2




ಬಾಲ್ಯದ ಪ್ರಭಾವಗಳು

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ.ಪ್ರಕಾಶ್

"ನಾನೊಬ್ಬ ಜಮೀನ್ದಾರನ ಮಗ, ಆದರೆ ಮೊಮ್ಮಗನಲ್ಲ...ಮೊಮ್ಮಗನಾಗಿ ಹುಟ್ಟಿದ್ದರೆ ಹುಟ್ಟುತ್ತಲೇ ಕುಲೀನ ಸ್ವಭಾದವನಾಗಿರುತ್ತಿದ್ದೆ ಮತ್ತು ನನ್ನ ಎಲ್ಲ ಸ್ನೇಹಿತರು ಮತ್ತು ಎಲ್ಲ ಸಂಸ್ಕೃತಿ ಇತರ ಜನರಿಗಿಂತ ಮೇಲರಿಮೆಯಿಂದ ಕೂಡಿರುತ್ತಿತ್ತು. ಆದರೆ ನಾನು ಹುಟ್ಟಿದ ಸ್ಥಳದಲ್ಲಿ ಪ್ರತಿಯೊಬ್ಬರೂ ಬಡವರಾಗಿದ್ದರು"

ಫಿಡೆಲ್‌ನ ತಾಯಿಯ ಹೆಸರು ಲಿನಾ. ಆಕೆ ಪಶ್ಚಿಮ ಕ್ಯೂಬಾದ ಪಿನಾರ್-ಡೆಲ್-ರಿಯೋ ಪ್ರಾಂತ್ಯಕ್ಕೆ ಸೇರಿದ ಕ್ಯೂಬನ್ನಳು. ಆಕೆಯ ಕುಟುಂಬ ಮೂಲತಃ ಕೆನರಿ ದ್ವೀಪಗಳಿಂದ ಬಂದಿತ್ತು. ಆಕೆಯ ಕುಟುಂಬವೂ ಕಂಪೆಸಿನೋ ಮೂಲದ್ದು ಮತ್ತು ಅತ್ಯಂತ ಬಡತನದ್ದು. ಆಕೆಯ ತಂದೆ ಎತ್ತಿನ ಗಾಡಿಯಲ್ಲಿ ಕಬ್ಬನ್ನು ಸಾಗಿಸುವವನಾಗಿದ್ದ. ಬಡತನದ ಬೇಗೆಯಿಂದ ಹೊರಬರಲು ಉತ್ತಮ ಬದುಕನ್ನು ಹರಸುತ್ತಾ ಎತ್ತಿನ ಗಾಡಿಯಲ್ಲೇ ನಡೆಸಿದವರ ಪಯಣ ಅಂತಿಮವಾಗಿ ಪೂರ್ವದಿಕ್ಕಿನ ಬೈರನ್‌ನಲ್ಲಿ ನೆಲೆಸುವುದರಲ್ಲಿ ಮುಗಿದಿತ್ತು. ಆಗ ಇವರ ತಾಯಿಗೆ ಹದಿಮೂರು ಅಥವಾ ಹದಿನಾಲ್ಕು ವರ್ಷ ವಯಸ್ಸಾಗಿತ್ತು. ಫಿಡೆಲ್‌ರ ತಂದೆಯಂತೆಯೇ ತಾಯಿಯೂ ಸಹ ಅನಕ್ಷರಸ್ತಳಾಗಿದ್ದಳು. ಆದರೆ ತನ್ನ ಸ್ವಯಂ ಪ್ರಯತ್ನದಿಂದಲೇ ಬರೆಯಲು ಓದಲು ಕಲಿತಳು. ಆಕೆ ಅತ್ಯಂತ ಕಷ್ಟಜೀವಿಯಾಗಿದ್ದಳು. ಆಕೆಯ ಜೀವನದ ಬದ್ಧತೆ ಹೇಗಿತ್ತೆಂದರೆ, ಆಕೆಯ ಗಮನವನ್ನು ತಪ್ಪಿಸಿಕೊಂಡ ಯಾವುದೂ ಇರಲಿಲ್ಲ. ಎಲ್ಲರನ್ನೂ ಪೋಷಣೆ ಮಾಡುವ ಮತ್ತು ಮಕ್ಕಳು ಬಯಸಿದ ಪ್ರತಿಯೊಂದನ್ನೂ ಒದಗಿಸುವ ತಾಯಿ, ಸೂಲಗಿತ್ತಿ, ವೈದ್ಯೆ, ಮನೆಯ ಒಳಗೆ ಮತ್ತು ಹೊರಗೆ ಪ್ರತಿಯೊಂದನ್ನೂ ನಿರ್ವಹಿಸುವ ಕುಟುಂಬ ಅರ್ಥಶಾಸ್ತ್ರಜ್ಞೆ, ಹೀಗೆ,... ಎಲ್ಲವೂ ಆಗಿದ್ದಳು. ಒಂದೇ ಒಂದು ಕ್ಷಣವನ್ನೂ ಹಾಳು ಮಾಡದೆ, ವಿಶ್ರಾಂತಿ ಪಡೆಯದೆ ದುಡಿಯುತ್ತಿದ್ದ ಆಕೆಗೆ ಶಕ್ತಿ ಎಲ್ಲಿಂದ ಬರುತ್ತಿತ್ತೋ ಎಂಬ ಬಗ್ಗೆ ಫಿಡೆಲ್ ಅಚ್ಚರಿ ವ್ಯಕ್ತಪಡಿಸುತ್ತಾರೆ.


ಫಿಡೆಲ್‌ನ ತಾಯಿ ಲಿನಾ

ಏಳು ಮಕ್ಕಳಿಗೆ ಜನ್ಮವಿತ್ತ ಆಕೆ ಪ್ರತಿಯೊಬ್ಬರನ್ನೂ ವಿದ್ಯಾವಂತರನ್ನಾಗಿಸಬೇಕೆಂಬ ಮಹತ್ವಾಕಾಂಕ್ಷಿಯಾಗಿದ್ದಳು. ಜೀವನದ ಏರಿಳಿತಗಳನ್ನು ಅತ್ಯಂತ ದೃಢತೆ ಮತ್ತು ಧೈರ್ಯದಿಂದ ಎದುರಿಸಿದ ಆಕೆ ತ್ಯಾಗಮಯಿಯಾಗಿದ್ದಳು. ಆಕೆ ಸಾಕಷ್ಟು ಪ್ರೀತಿಸುತ್ತಿದ್ದ ಭೂಮಿಯನ್ನು ಕ್ರಾಂತಿಯ ನಂತರದಲ್ಲಿ ಜನರಿಗೆ ಹಂಚಿಕೆ ಮಾಡಿದಾಗ ಆಕೆ ಬೇಸರಪಡಲಿಲ್ಲ. ಅತೀವವಾದ ಧಾರ್ಮಿಕ ನಂಬಿಕೆಯನ್ನು ಹೊಂದಿದ್ದಳು. ಆಕೆಗೆ ಮಾನವನ ಚರಿತ್ರೆ, ಕ್ಯೂಬಾದ ಸಮಕಾಲೀನ ಬೆಳವಣಿಗೆಗಳಿಗೆ ಕಾರಣಗಳು ಇತ್ಯಾದಿಗಳ ಅರಿವಿಲ್ಲದಿದ್ದರೂ, ಕ್ರಾಂತಿಯ ತಾಯಿಯ ಪಾತ್ರವನ್ನು ನಿರ್ವಹಿಸಿದಳು. ಕ್ರಾಂತಿ ಸಂಭವಿಸಿ ಮೂರೂವರೆ ವರ್ಷಗಳ ನಂತರ ಆಕೆ 1963 ಆಗಸ್ಟ್ 6ರಂದು ನಿಧನಳಾದಳು. ಇದಕ್ಕೂ ಮುಂಚಿತವಾಗಿ ಅಂದರೆ ಮೆಕ್ಸಿಕೋದಿಂದ ಗ್ರಾನ್ಮಾ ದಂಡೆಯಾತ್ರೆ ಹೊರಡುವ ಎರಡು ತಿಂಗಳ ಮುಂಚೆ 1956ರ ಅಕ್ಟೋಬರ್ 21ರಂದು ಫಿಡೆಲ್‌ರ ತಂದೆ ತೀರಿಕೊಂಡಿದ್ದರು.

ಸ್ಪೈನ್ ಆಂತರಿಕ ಯುದ್ಧ

ಕ್ಯಾಸ್ಟ್ರೋ ಸುಮಾರು ಹತ್ತು ವರ್ಷದವರಿದ್ದಾಗ ಸ್ಪೈನ್‌ನಲ್ಲಿ 1936 ಜುಲೈ 18 ರಂದು ಆಂತರಿಕ ಯುದ್ಧ ಪ್ರಾರಂಭವಾಯಿತು. ಸ್ಪೈನ್ ಗಣರಾಜ್ಯದ ಪರ ಮತ್ತು ವಿರುದ್ಧ ಎರಡು ಗುಂಪುಗಳ ನಡುವಿನ ಯುದ್ಧವದು. ಗಣರಾಜ್ಯದ ವಿರುದ್ಧ ಯುದ್ಧ ಸಾರಿದವರನ್ನು ದಂಗೆಕೋರರು ಎನ್ನಲಾಗುತ್ತಿತ್ತು. ಕ್ಯಾಸ್ಟ್ರೋ ಇದ್ದ ಬೈರನ್ ಪ್ರದೇಶದಲ್ಲಿ ಎರಡೂ ಗುಂಪುಗಳಿಗೆ ಸೇರಿದ 12-14 ಜನ ಸ್ಪೈನ್ ದೇಶದವರಿದ್ದರು. ಇವರೆಲ್ಲರೂ ಕ್ಯಾಸ್ಟ್ರೋ ತಂದೆಯ ಜೊತೆ ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ ಶ್ರಮಿಕರಾಗಿದ್ದರು. ಬುಕ್‌ಕೀಪರ್ ಆಗಿದ್ದ ಅಸ್ತೂರಿಯನ್ ಏಳು ಭಾಷೆಗಳನ್ನು ಬಲ್ಲವನಾಗಿದ್ದ. ರೇಡಿಯೋದಲ್ಲಿ ಬರುತ್ತಿದ್ದ ಜರ್ಮನ್ ಅಥವಾ ಇಂಗ್ಲಿಷನ್ನು ಭಾಷಾಂತರ ಮಾಡಿ ಹೇಳುತ್ತಿದ್ದ. ಗ್ರೀಸ್‌ನ ಡೆಮೊಸ್ತನೀಸ್ ಬಗ್ಗೆ ಫಿಡೆಲ್‌ಗೆ ಹೇಳಿದ್ದು ಇವನೇ. ಇಂತಹ ಹಲವರು ಆಂತರಿಕ ಯುದ್ಧ ಆರಂಭವಾದಾಗ ದಂಗೆಕೋರರ ಪರವಾದ ನಿಲುವನ್ನು ಹೊಂದಿದ್ದರು. ರಿಪಬ್ಲಿಕನ್ನರ ಪರವಾಗಿದ್ದ ಮತ್ತೊಂದು ಗುಂಪಿನಲ್ಲಿದ್ದವರು ತೇಊಟ ಕಾರ್ಮಿಕರಾಗಿದ್ದರು. ಇವರಲ್ಲಿ ಬಹುತೇಕರು ಅನಕ್ಷರಸ್ತರಾಗಿದ್ದರು. ಟೆಲಿಗ್ರಾಫ್ ಮತ್ತು ಅಂಚೆ ಕಛೇರಿ ಉಸ್ತುವಾರಿ ಹೊತ್ತಿದ್ದ ವಲೆರೋ, ಅಡುಗೆ ಕೆಲಸ ಮಾಡುತ್ತಿದ್ದ ಗಾರ್ಷಿಯಾ ಇಂತಹವರ ಒಡನಾಟದಿಂದ ಅನಕ್ಷರಸ್ತರು ಅನುಭವಿಸುವ ಸಮಸ್ಯೆಗಳನ್ನು ಅರಿಯಲು ಫಿಡೆಲ್‌ಗೆ ಸಹಾಯವಾಗಿತ್ತು.

1936ರಲ್ಲಿ ಬಾಲಕ ಕ್ಯಾಸ್ಟ್ರೋ ಸ್ಯಾಂಟಿಯಾಗೋದಿಂದ ಶಾಲಾ ರಜೆಗೆಂದು ಮನೆಗೆ ಬಂದ ಸಂದರ್ಭ. ಮ್ಯಾನ್ಯುಲ್ ಗಾರ್ಷಿಯಾ ಸ್ಪೈನ್ ಯುದ್ಧದ ದಿನನಿತ್ಯದ ವಿವರಗಳನ್ನು ತಿಳಿಯಲು ಕ್ಯಾಸ್ಟ್ರೋನನ್ನು ಪೀಡಿಸುತ್ತಿದ್ದ. ಅದಕ್ಕಾಗಿ ಕ್ಯಾಸ್ಟ್ರೋ ಆಗ ಬೈರನ್‌ಗೆ ಬರುತ್ತಿದ್ದ 'ಇನ್‌ಫರ್ಮೇಷನ್' (Informacion), 'ಎಲ್‌ಮುಂಡೊ' (Elmundo), 'ಎಲ್ ಡೈರಿಯೋ ಡಿ ಕ್ಯೂಬಾ' (El Diaro de Cuba) ಮತ್ತು ಮುಖ್ಯವಾಗಿ 'ಡೈರಿಯೋ ಡಿ ಲಾ ಮರಿನಾ' (Diario de la Marina) ಮುಂತಾದ ಪತ್ರಿಕೆಗಳ ಪ್ರತಿ ಪುಟವನ್ನೂ ಓದಿ ಹೇಳಬೇಕಾಗುತ್ತಿತ್ತು. ಈ ರೀತಿಯಾಗಿ ಕ್ಯಾಸ್ಟ್ರೋ ಸ್ಪೈನ್ ಯುದ್ಧದ ವಿವರಗಳನ್ನು ತಾನೂ ಕೂಡಾ ವಿವರವಾಗಿ ತಿಳಿಯುವಂತಾಗಿತ್ತು.

ಸ್ಪ್ಯಾನಿಷ್ ಗಣರಾಜ್ಯ ಕುಸಿದದ್ದೇಕೆ?

ಬೈರನ್‌ನಲ್ಲಿ ಎರಡು ಗುಂಪುಗಳಾಗಿದ್ದ ಸ್ಪ್ಯಾನಿಷ್ ಜನರು ಪರಸ್ಪರ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದರು ಎನ್ನುವ ಪರಿಸ್ಥಿತಿಯಲ್ಲೂ ಆಗಾಗ ಇವರು ಕೂಡಿಕೊಂಡು ಡೊಮಿನೋಸ್ ಆಡುತ್ತಿದ್ದರು. ಇದು ಒಂದು ಸೈದ್ಧಾಂತಿಕ ಗುಂಪು ಮತ್ತೊಂದರ ವಿರುದ್ಧ ನಡೆಸುತ್ತಿದ್ದ ತೀವ್ರ ಸೆಣಸಾಟದ ರೀತಿ ಇರುತ್ತಿತ್ತು. ಈ ಸೈದ್ಧಾಂತಿಕ-ರಾಜಕೀಯ ಸಂಘರ್ಷವನ್ನು, ಗಿಯೋವಾನ್ನಿ ಗ್ವಾರೆಷ್ಚಿ (ಇಟಲಿಯ ಹೆಸರಾಂತ ಹಾಸ್ಯ ಕಾದಂಬರಿಕಾರ) ಯ ಹೆಸರಾಂತ 'ಡಾನ್ ಕ್ಯಾಮಿಲೋ' ಕಾದಂಬರಿ (ಕಾದಂಬರಿಯ ನಾಯಕ ಕ್ಯಾಮಿಲೋ. ಗ್ರಾಮದ ಪಾದ್ರಿ ಮತ್ತು ಕಮ್ಯುನಿಸ್ಟ್ ಮೇಯರ್ ಪೆಪ್ಪೋನ್ ನಡುವೆ ನಡೆಯುತ್ತಿದ್ದ ಅತ್ಯಂತ ತೀವ್ರವಾದ, ಆದರೆ ಅಷ್ಟೇ ಸೌಹಾರ್ದಯುತವಾದ ಸಂಘರ್ಷಗಳ ಹಾಸ್ಯಮಯ ಕಥಾವಸ್ತು) ರೀತಿಯಲ್ಲಿ ಇರುತ್ತಿತ್ತು ಎಂದು ಕ್ಯಾಸ್ಟ್ರೋ ಹೋಲಿಸುತ್ತಾರೆ.

ಮ್ಯಾನ್ಯುಲ್ ಗಾರ್ಷಿಯಾ ಜೊತೆಗಿನ ಒಡನಾಟದಿಂದ ಸ್ಪೈನ್ ಆಂತರಿಕ ಯುದ್ಧವನ್ನು ತೀವ್ರವಾದ ಆಸಕ್ತಿಯಿಂದ ಕ್ಯಾಸ್ಟ್ರೋ ಗಮನಿಸತೊಡಗಿದರು. ಎರಡನೇ ಪ್ರಪಂಚ ಯುದ್ಧಕ್ಕೆ ಮುನ್ನುಡಿಯಂತಿದ್ದ ಈ ಯುದ್ಧದಲ್ಲಿ ರಿಪಬ್ಲಿಕನ್ ಚಿಂತನೆಗಳು ಮತ್ತು ನಾಜಿ ಜರ್ಮನಿಯ ನರಹಂತಕ ಸಾಮ್ರಾಜ್ಯಶಾಹಿ ಚಿಂತನೆಗಳನ್ನು ಎದುರಿಸಿದ 'ಪ್ರಜಾಪ್ರಭುತ್ವ' ಚಿಂತನೆಗಳು ಫಿಡೆಲ್‌ರ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ಸ್ಪೈನ್‌ನಲ್ಲಿ ನಡೆದದ್ದೇನು? ಅಲ್ಲಿನ ಗಣರಾಜ್ಯ ಕುಸಿದದ್ದೇಕೆ? ಹಿಟ್ಲರ್ ಮತ್ತು ಮುಸ್ಸೊಲಿನಿ ಮಧ್ಯಪ್ರವೇಶ ಮಾಡುತ್ತಿದ್ದಾಗ ಪಾಶ್ಚಾತ್ಯ ಪ್ರಜಾಪ್ರಭುತ್ವಗಳು ಸುಮ್ಮನಿದ್ದದ್ದು ಏಕೆ? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಲೇ, ಇವೇ ಮುಂದೆ ಎರಡನೇ ಜಾಗತಿಕ ಯುದ್ಧಕ್ಕೆ ಸಹಾಯ ಮಾಡಿದ ಬಗ್ಗೆ ಫಿಡೆಲ್ ಗುರುತಿಸುತ್ತಾರೆ. ಆಂತರಿಕ ಯುದ್ಧ ಮುಗಿದ ನಂತರದ ಸಂದರ್ಭದಲ್ಲಿ, ಹವಾನಾದಲ್ಲಿ ಜೆಸೂಯಿತ್ ಪಾದ್ರಿಗಳು ನಡೆಸುತ್ತಿದ್ದ ಕಾಲೇಜಿಯೋ ಡಿ ಬೆಲನ್‌ನಲ್ಲಿ ಓದುತ್ತಿರುವಾಗ ಫಿಡೆಲ್‌ನ ಒಬ್ಬ ಶಿಕ್ಷಕರು ದೀರ್ಘ ಯುದ್ಧ ವಿವರಣೆಗಳನ್ನು ನೀಡುತ್ತಿದ್ದರು. ಯುದ್ಧ ಸಂದರ್ಭದಲ್ಲಿ ಫೈರಿಂಗ್ ಸ್ಕ್ವಾಡ್‌ಗಳಿಂದ ಕೊಲ್ಲಲ್ಪಡುತ್ತಿದ್ದವರನ್ನು, ಸತ್ತಿರುವರೋ ಅಥವಾ ಬದುಕಿರುವರೋ ಎಂದು ಗುರುತಿಸುವ ವೈದ್ಯರಾಗಿ ಈ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಇವರು ಅಲ್ಲಿನ ಸಂಗತಿಗಳನ್ನೆಲ್ಲಾ ವಿವರವಾಗಿ ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದ ರೀತಿ ಫಿಡೆಲ್‌ರ ಮೇಲೆ ಅಪಾರ ಪರಿಣಾಮ ಬೀರಿತು. ಸ್ಪೈನ್ ಯುದ್ಧದಲ್ಲಿ ಇವರಿಗೆ ಉಂಟಾದ ಆಸಕ್ತಿಯು ಮುಂದೆ ಇವರ ಬೆಳವಣಿಗೆ ಮೇಲೆ ಪರಿಣಾಮ ಬೀರಿತು ಎಂಬುದನ್ನು ಸ್ವತಃ ಫಿಡೆಲ್ ಒಪ್ಪಿಕೊಳ್ಳುತ್ತಾರೆ.

ಎರಡನೇ ಮಹಾಯುದ್ಧ

1939 ಸೆಪ್ಟೆಂಬರ್ 1 ರಂದು ಮಹಾಯುದ್ಧ ಪ್ರಾರಂಭವಾದಾಗ ಫಿಡೆಲ್ ಅದರ ಸುತ್ತ ಮುತ್ತಲಿನ ಘಟನೆಗಳನ್ನೆಲ್ಲಾ ಕುತೂಹಲದಿಂದ ಓದತೊಡಗಿದರು. ರೂಹ್‌ರ್‌ನ ವಶಪಡಿಸಿಕೊಳ್ಳುವಿಕೆ, ಆಸ್ಟ್ರಿಯಾದ ವಶಪಡಿಸಿಕೊಳ್ಳುವಿಕೆ, ಸುದೇಟನ್‌ಲ್ಯಾಂಡ್‌ನ ಆಕ್ರಮಣ, ಮೊಲೊಟೊವ್-ರಿಬ್ಬನ್‌ಟ್ರಾಪ್ ಒಪ್ಪಂದ, ಪೋಲೆಂಡ್‌ನ ಆಕ್ರಮಣ, ಮುಂತಾದ ಘಟನೆಗಳ ಮಹತ್ವದ ಅರಿವಿಲ್ಲದಿದ್ದರೂ ಗಮನಿಸತೊಡಗಿದರು. ಹೀಗಾಗಿ ಫಿಡೆಲ್ ನಂತರದಲ್ಲಿ ಮಹಾ ಯುದ್ಧದ ಇಡೀ ಅವಧಿಯ ಸಣ್ಣದರಿಂದ ಹಿಡಿದು ದೊಡ್ಡದರವರೆಗಿನ ಎಲ್ಲ ಯುದ್ಧಗಳ ಬಗ್ಗೆ ವಿವರವಾಗಿ ಮಾತನಾಡಬಲ್ಲ ಸಾಮರ್ಥ್ಯ ಬೆಳೆಸಿಕೊಂಡರು. ಇದಕ್ಕೂ ಮುಂಚಿತವಾಗಿ ನಡೆದ ಇಥಿಯೋಪಿಯಾ-ಅಬಿಸ್ಸೀನಿಯಾ ಯುದ್ಧವನ್ನು ನೆನಪಿಸಿಕೊಳ್ಳುತ್ತಾ ಫಿಡೆಲ್ ಬಂಡವಾಳದಾರರ ಲೂಟಿಯ ಬಗ್ಗೆ ವಿವರಿಸುತ್ತಾರೆ.

ಅಬಿಸ್ಸೀನಿಯಾ ಯುದ್ಧ ಸಂದರ್ಭ - ಮಕ್ಕಳು ಬಿಸ್ಕಟ್‌ಗಳನ್ನು ಕೊಂಡರೆ ಅದರ ಜೊತೆಯಲ್ಲಿ ವ್ಯಾಪಾರೀ ಕಾರ್ಡ್‌ಗಳ ಸರಣಿ ಬರುತ್ತಿತ್ತು. ಪೂರ್ತಿ ಸರಣಿ ಕಾರ್ಡ್‌ಗಳನ್ನು ಹೊಂದಿದ್ದವರಿಗೆ ರಿಯಾಯಿತಿಗಳು ಸಿಕ್ಕುತ್ತವೆಂದು ಹೇಳಲಾಗುತ್ತಿತ್ತು. ಆದರೆ ಯಾರಿಗೂ ಕಾರ್ಡುಗಳ ಸರಣಿಯನ್ನು ಪೂರ್ಣಗೊಳಿಸಲು ಆಗುತ್ತಲೇ ಇರಲಿಲ್ಲ. ಕೆಲವು ಕಾರ್ಡ್‌ಗಳನ್ನು ಮುದ್ರಣ ಕೂಡಾ ಮಾಡುತ್ತಿರಲಿಲ್ಲ. ಹೀಗಾಗಿ ಮಕ್ಕಳು ಬಿಸ್ಕಟ್ ಕೇಳುವ ಭರದಲ್ಲಿ ತಮ್ಮ ಪೋಷಕರನ್ನು ದಿವಾಳಿಯೆಬ್ಬಿಸುತ್ತಿದ್ದರು. ಬಂಡವಾಳಶಾಹಿ ವ್ಯವಸ್ಥೆಯ ಸ್ವರೂಪವಿದು.

ಸಾಹಸಪ್ರಿಯ

ಎಲ್ಲ ಮಕ್ಕಳಿಗೂ ಸಹಜವಾಗಿ ಇರುವಂತೆ ಫಿಡೆಲ್‌ಗೂ ಕೂಡಾ ಸೇನಾನಿಗಳು, ಪರಾಕ್ರಮಿಗಳು, ಸಾಹಸಿಗಳನ್ನು ಕಂಡರೆ ಇಷ್ಟವಾಗುತ್ತಿತ್ತು. ನೆಪೋಲಿಯನ್ ಬೊನಾಪಾರ್ಟೆಯ ಸಾಹಸಗಾಥೆಯನ್ನು ವಿವರಿಸಿದ್ದ ಚಿತ್ರಗಳ ಆಲ್ಬಂನ್ನು ಇವರು ಹೊಂದಿದ್ದರು. ಆರ್ಕೋಲ್ ಯುದ್ಧದ ಒಂದು ನಿರ್ಣಾಯಕ ಘಟ್ಟದಲ್ಲಿ ನೆಪೋಲಿಯನ್ ಬಾವುಟವನ್ನು ಎತ್ತಿಹಿಡಿದು ಸೇತುವೆಯನ್ನು ದಾಟಿ 'ನಿಮ್ಮ ದಂಡನಾಯಕನನ್ನು ಹಿಂಬಾಲಿಸಿ'! ಎಂದು ಕೂಗಿದಾಗ ಎಂತಹ ಬಾಲಕನನ್ನೂ ಅದು ಹುರಿದುಂಬಿಸುತ್ತದೆ ಎನ್ನುತ್ತಾರೆ ಫಿಡೆಲ್. ಪ್ರಾಥಮಿಕ ಶಾಲೆಗಳ ಇತಿಹಾಸ ಪಠ್ಯಗಳಲ್ಲಿ ಹ್ಯಾನಿಬಾಲ್, ಅಲೆಕ್ಸಾಂಡರ್, ಸ್ಪಾರ್ಟನ್ಸ್ ರಂತಹ ಎಂದಿಗೂ ಮುಗಿಯದ ವೀರರ ಸಾಹಸಗಾಥೆಗಳು ಹುಚ್ಚೆಬ್ಬಿಸುತ್ತಿದ್ದವು.

ಫಿಡೆಲ್ ಹೇಳುವುದು, ಎಲ್ಲಾ ಬಾಲಕರೂ ಪವಿತ್ರವಾದ ಇತಿಹಾಸವನ್ನು ಓದುತ್ತಲೇ ಪ್ರಾರಂಭಿಸುತ್ತಾರೆ. ಹಳೆ ಒಡಂಬಡಿಕೆಯು ಪೂರ್ತಿಯಾಗಿ ಯುದ್ಧಗಳನ್ನು ಮತ್ತು ಇತರ ರೋಮಾಂಚನಕಾರಿ ಪ್ರಕರಣಗಳನ್ನು ಹೊಂದಿದೆ. ನೋಹ್‌ನ ಆರ್ಕ್, ಪ್ರವಾಹ, ನಲವತ್ತು ದಿನಗಳ ಮಳೆ, ಪ್ರವಾಹದ ನಂತರ ನೋಹ್ ದ್ರಾಕ್ಷಿತೋಟವನ್ನು ಬೆಳೆಸುತ್ತಾನೆ, ದ್ರಾಕ್ಷಿಯಿಂದ ವೈನ್ ಮಾಡುತ್ತಾನೆ, ಅವನು ಅಗತ್ಯಕ್ಕಿಂತ ಸ್ವಲ್ಪ ಹೆಚ್ಚಿಗೆ ಕುಡಿಯುತ್ತಾನೆ ಮತ್ತು ಇವನ ಮಗನ ಮಗ ಇದನ್ನು ಆಡಿಕೊಂಡು ಹಾಸ್ಯ ಮಾಡುತ್ತಾನೆ ಆಗ ನೋಹ್ ಅವನಿಗೆ ಶಾಪ ಕೊಡುತ್ತಾನೆ: ಅವನು ಗುಲಾಮನಾಗುವಂತೆ ಮತ್ತು ಕರಿಯನಾಗುವಂತೆ ಶಪಿಸುತ್ತಾನೆ!

ಬೈಬಲ್‌ನಲ್ಲಿರುವ ಇಂತಹ ಸಂಗತಿಗಳನ್ನು ಪ್ರಸ್ತಾಪಿಸುತ್ತಾ ಫಿಡೆಲ್‌ರವರು ಮುಂದೊಂದು ದಿನ ಚರ್ಚ್ ಇದನ್ನು ಸರಿಪಡಿಸುವ ಅಗತ್ಯವಿದೆಯೆಂದು ಹೇಳುತ್ತಾರೆ. ಏಕೆಂದರೆ ಕಪ್ಪಾಗಿ ಹುಟ್ಟುವುದು ದೇವರ ಶಾಪ ಎಂಬ ರೀತಿಯಲ್ಲಿ ಇದು ಧ್ವನಿಸುತ್ತದೆ ಎನ್ನುತ್ತಾರೆ. ಅದೇ ರೀತಿ ಹೆಣ್ಣಾಗಿರುವುದು ಒಂದು ಶಾಪ, ಅಪರಾಧ ಎಂಬಂತೆ, ಆದ್ದರಿಂದಲೇ ಮೊದಲ ಪಾಪಕ್ಕೆ ಕಾರಣವೆಂದೂ ಹೇಳಲಾಗಿದೆ. ಇಂತಹ ತಿಳುವಳಿಕೆಯನ್ನು ಸರಿಪಡಿಸುವ ಮಹಿಳಾ ಸಮಾನತೆಯನ್ನು ಪ್ರತಿಷ್ಠಾಪಿಸುವ ಅಗತ್ಯದ ಬಗ್ಗೆ ಫಿಡೆಲ್ ಮಾತನಾಡುತ್ತಾರೆ.

ಸವಲತ್ತು ಮತ್ತು ಅದೃಷ್ಟ

ಫಿಡೆಲ್ ಏಳೆಂಟು ವರ್ಷದವನಿದ್ದಾಗ ಬಾರ್ಬೆರನ್ ಮತ್ತು ಕಾಲರ್ ಎಂಬಿಬ್ಬರು ಸ್ಪ್ಯಾನಿಷ್ ಪೈಲಟ್‌ಗಳ ಬಗ್ಗೆ ಜನ ಮಾತನಾಡಿಕೊಳ್ಳುತ್ತಿದ್ದರು. ಈ ಇಬ್ಬರು ಸಾಹಸಿ ಪೈಲಟ್‌ಗಳು ಸ್ಪೈನ್‌ನಿಂದ ಮೆಕ್ಸಿಕೋಗೆ ಅಟ್ಲಾಂಟಿಕ್ ಸಮುದ್ರ ದಾಟಿ ಪ್ರಯಾಣಿಸುವಾಗ ಸತ್ತರು ಎಂಬ ವಿಷಯವದು. 1933 ಜೂನ್‌ನಲ್ಲಿ ಅದುವರೆಗೂ ಯಾರೂ ಮಾಡದಿದ್ದ ಸಾಹಸಕ್ಕೆ ಈ ಇಬ್ಬರು ಯುವಕರು ಕೈಹಾಕಿದ್ದರು. 4000 ಮೈಲಿಗಳನ್ನು ದಾಟಲು ಅಟ್ಲಾಂಟಿಕ್ ನೀರಿನ ಮೇಲೆ ಇವರು ಸುಮಾರು 40 ಗಂಟೆಗಳ ಹಾರಾಟ ಮಾಡಿದ್ದರು. ಸ್ಪೈನ್‌ನಿಂದ ಬೈಪ್ಲೇನ್‌ನಲ್ಲಿ ಹೊರಟು ಹವಾನಾ ತಲುಪಿ ನಂತರ ಮೆಕ್ಸಿಕೋ ದಿಕ್ಕಿಗೆ ಹೊರಟಾಗ ಗುರಿ ತಲುಪದೆ ನಿಧನರಾಗಿದ್ದರು. ಇಂತಹ ಘಟನೆಗಳ ಜೊತೆಗೆ ಭೀಕರ ಬಿರುಗಾಳಿ, ಚಂಡಮಾರುತಗಳನ್ನು ಸಾಕಷ್ಟು ಬಾರಿ ನೋಡಿದ್ದರು. ಇಂತೆಲ್ಲಾ ನೈಸರ್ಗಿಕ ಘಟನೆಗಳು ಇವರ ಪ್ರಜ್ಞೆಯನ್ನು ಹಾಸುಹೊಕ್ಕಾಗಿಸಿವೆ.

ಫಿಡೆಲ್‌ರ ವ್ಯಕ್ತಿತ್ವ ರೂಪುಗೊಳ್ಳುವುದರಲ್ಲಿ ಬೇರೆ ಅಂಶಗಳನ್ನು ಗುರುತಿಸುವಾಗ ಒಂದು ಪ್ರಮಾಣದ ಸವಲತ್ತು ಮತ್ತು ಅದೃಷ್ಟವೂ ಸೇರಿಕೊಂಡಿದೆ ಎಂಬುದನ್ನು ಫಿಡೆಲ್ ಈ ರೀತಿ ಗುರುತಿಸುತ್ತಾರೆ : "ನಾನೊಬ್ಬ ಜಮೀನ್ದಾರನ ಮಗ ಆದರೆ ಮೊಮ್ಮಗನಲ್ಲ...ಮೊಮ್ಮಗನಾಗಿ ಹುಟ್ಟಿದ್ದರೆ ಹುಟ್ಟುತ್ತಲೇ ಕುಲೀನ ಸ್ವಭಾದವನಾಗಿರುತ್ತಿದ್ದೆ ಮತ್ತು ನನ್ನ ಎಲ್ಲ ಸ್ನೇಹಿತರು ಮತ್ತು ಎಲ್ಲ ಸಂಸ್ಕೃತಿ ಇತರ ಜನರಿಗಿಂತ ಮೇಲರಿಮೆಯಿಂದ ಕೂಡಿರುತ್ತಿತ್ತು. ಆದರೆ ನಾನು ಹುಟ್ಟಿದ ಸ್ಥಳದಲ್ಲಿ ಪ್ರತಿಯೊಬ್ಬರೂ ಬಡವರಾಗಿದ್ದರು - ನನ್ನ ಸ್ನೇಹಿತರೆಲ್ಲಾ ತೋಟ ಕಾರ್ಮಿಕರ ಮಕ್ಕಳಾಗಿದ್ದರು ಮತ್ತು ತೀವ್ರವಾದ ಬಡತನದಿಂದ ಬಂದವರಾಗಿದ್ದರು. ನನ್ನ ಸ್ವಂತ ಕುಟುಂಬ, ನನ್ನ ತಾಯಿಯ ಕಡೆ ಬಡವರಾಗಿದ್ದರು. ಗೆಲೀಷಿಯಾದಿಂದ ಬಂದಿದ್ದ ನನ್ನ ತಂದೆಯ ಕೆಲವು ಸೋದರ ಸಂಬಂಧಿಗಳು ತೀರಾ ಬಡವರಾಗಿದ್ದರು ಮತ್ತು ನನ್ನ ತಂದೆಯ ಕುಟುಂಬವೂ ಬಡತನದ್ದಾಗಿತ್ತು".

ಈಗ ಸ್ಟಾರ್ಟ್-ಅಪ್ ಮಂತ್ರದ ಮರೆಯಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆಗೂ ಉತ್ತೇಜನೆ!


ಸ್ಟಾರ್ಟ್–ಅಪ್ ಎಂಬುದು ಈಗ 'ಒಳ್ಳೆಯ ದಿನ'ಗಳ ಹೊಸ ಮಂತ್ರ. ಇವೆಂಟ್ ಮ್ಯಾನೇಜರರ ಹೊಸದೊಂದು ಇವೆಂಟ್‌ನೊಂದಿಗೆ ಆರಂಭವಾಗಿದೆ. ಐದು ವರ್ಷಗಳಿಂದೀಚೆಗೆ ನೊಂದಾಯಿಸಿರುವ, 25 ಕೋಟಿ ರೂ.ಮೀರದ ಟರ್ನ್–ಓವರ್ ಇರುವ ಸ್ಟಾರ್ಟ್–ಅಪ್ ಕಂಪನಿಗಳಿಗೆ ಕೈಗಾರಿಕಾ ವಿವಾದಗಳ ಕಾಯ್ದೆ, 1947, ಟ್ರೇಡ್‌ಯೂನಿಯನ್ಸ್ ಕಾಯ್ದೆ, 1926, ಕಾಂಟ್ರಾಕ್ಟ್ ಶ್ರಮ ಕಾಯ್ದೆ, 1970, ನೌಕರರ ಭವಿಷ್ಯ ನಿಧಿ ಕಾಯ್ದೆ, 1952, ಇಎಸ್‌ಐ ಕಾಯ್ದೆ, 1948 ಮುಂತಾದ ಒಂಭತ್ತು ಮೂಲ ಕಾರ್ಮಿಕ ಕಾನೂನುಗಳಿಂದ ವಿನಾಯ್ತಿ ಕೊಡಲು ಭಾರತ ಸರಕಾರ ನಿರ್ಧರಿಸಿದೆಯಂತೆ.

ಜನವರಿ 12ರಂದು ಭಾರತ ಸರಕಾರದ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳು ಪಿಎಫ್, ಇಎಸ್‌ಐ ಮತ್ತಿತರ ಸಂಘಟನೆಗಳಿಗೆ ಸುತ್ತೋಲೆ ಕಳಿಸಿ ತಂತಮ್ಮ ಕ್ಷೇತ್ರಗಳಲ್ಲಿ ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುವುದಾಗಿ ತಿಳಿದು ಬಂದಿದೆ. ಇದನ್ನು ಭಾರತದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಪ್ರಬಲವಾಗಿ ವಿರೋಧಿಸಿದೆ.

ಈಗಾಗಲೇ ದೊಡ್ಡ ದೇಶಿ–ವಿದೇಶಿ ಕಾರ್ಪೊರೇಟ್ ಗುಂಪುಗಳು ತಮ್ಮ ವ್ಯವಹಾರಗಳನ್ನು ಈ 'ಸ್ಟಾರ್ಟ್–ಅಪ್' ಎಂಬವುಗಳ ಮೂಲಕ ನಡೆಸಿ 'ಮೂರು ವರ್ಷಗಳ ತೆರಿಗೆ ರಜಾ' ಸೌಲಭ್ಯವನ್ನು ಗಿಟ್ಟಿಸಿಕೊಳ್ಳುವ ಬಗ್ಗೆ ಯೋಚಿಸುತ್ತಿದ್ದವು. ಈಗ ಕಾರ್ಮಿಕ ಕಾನೂನುಗಳಿಂದಲೂ ವಿನಾಯ್ತಿ ಸಿಗುತ್ತದೆ ಎಂಬುದು ಅವರಿಗೆ ಮಹದಾನಂದ ತಂದಿದೆ. ನಿಜವಾಗಿಯೂ ಇತ್ತೀಚೆಗೆ ಹೆಚ್ಚೆಚ್ಚು ಗೋಣಗುತ್ತಿದ್ದ ಇವರಿಗೆ 'ಒಳ್ಳೆಯ ದಿನ'ಗಳೇ.

ಹೂಡಿಕೆಗೆ ಉತ್ತೇಜನೆ ನೀಡುವುದು ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುವುದರಿಂದ ಮಾತ್ರವೇ ಸಾಧ್ಯ ಎಂದು ಈ 'ಒಳ್ಳೆಯ ದಿನ'ಗಳ ಸರಕಾರ ಭಾವಿಸಿದಂತಿದೆ. ಕಾರ್ಮಿಕರನ್ನು ಯಾವುದೇ ಹಕ್ಕುಗಳು, ಸೌಲಭ್ಯಗಳಿಲ್ಲದ ಜೀತದಾಳುಗಳಾಗಿ ಮಾಡುವ ಕ್ರಮವನ್ನು ಸ್ಟಾರ್ಟ್–ಅಪ್‌ಗಳ ಹೆಸರಲ್ಲಿ ಕಾರ್ಮಿಕ–ವಿರೋಧಿ ಕ್ರಮಗಳನ್ನು ಮೋಸದಿಂದ ಜಾರಿಗೆ ತರುವ ಸರಕಾರದ ಹುನ್ನಾರವನ್ನು ಬಲವಾಗಿ ಖಂಡಿಸಬೇಕು ಎಂದು ಸಿಐಟಿಯು ಕಾರ್ಮಿಕ ಆಂದೋಲನಕ್ಕೆ ಕರೆ ನೀಡಿದೆ.

ಮಾರ್ಚ್‌ತಿಂಗಳಲ್ಲಿ ಸರಕಾರದ ಈ ಮೋಸದ ವಿರುದ್ಧ ಮತ್ತು ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದಲ್ಲಿ ಮುಂದಿಟ್ಟ ಬೇಡಿಕೆಗಳ ಮೇಲೆ ಮತ್ತೊಂದು ಜಂಟಿ ಕಾರ್ಯಾಚರಣೆ ನಡೆಸುವ ಬಗ್ಗೆ ಕೇಂದ್ರೀಯ ಕಾರ್ಮಿಕ ಸಂಘಗಳು ಯೋಚಿಸುತ್ತಿವೆ ಎಂದು ವರದಿಯಾಗಿದೆ.



ಹಿರಿಯ ಪತ್ರಕರ್ತ ಸಿದ್ಧಾರ್ಥ ವರದರಾಜನ್‌ಗೆ ಅಲಹಾಬಾದ್ ವಿವಿಯಲ್ಲಿ ಎಬಿವಿಪಿ ಘೇರಾವ್

ಹೈದರಾಬಾದ್‌ನಲ್ಲಿ ದಲಿತ ಸಂಶೋಧನಾ ವಿದ್ಯಾರ್ಥಿಗಳ ವಿಷಯದಲ್ಲಿ ಅಸಹಿಷ್ಣುತೆ ಪ್ರದರ್ಶಿಸಿ 'ಒಳ್ಳೆಯ ದಿನ'ಗಳ ಮುಖಂಡರಿಗೆ 'ನೋವುಂಟು' ಮಾಡಿರುವ ಎಬಿವಿಪಿಯ ಅಲಹಾಬಾದ್ ವಿವಿ ಘಟಕವೂ ಬೇರೊಂದು ರೀತಿಯಲ್ಲಿ ಅ ಕೆಲಸವನ್ನು ಮುಂದುವರೆಸಿದೆ.

ಹಿರಿಯ ಪತ್ರಕರ್ತ, ಈ ಹಿಂದೆ 'ದಿ ಹಿಂದು' ಪತ್ರಿಕೆಯ ಮುಖ್ಯ ಸಂಪಾದಕರಾಗಿದ್ದ ಸಿದ್ಧಾರ್ಥ ವರದರಾಜನ್ ಅವರಿಗೆ 'ಪ್ರಜಾಪ್ರಭುತ್ವ, ಮಾಧ್ಯಮಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತ ವಿಚಾರ ಸಂಕಿರಣದಲ್ಲಿ ಉಪನ್ಯಾಸ ಕೊಡಲು ಅಲಹಾಬಾದ್ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘ(ಎಯುಎಸ್‌ಯು)ದ ಅಧ್ಯಕ್ಷರ ಆಹ್ವಾನದ ಮೇರೆಗೆ ಅಲಹಾಬಾದ್‌ಗೆ ಹೋದ ಅವರ ಉಪನ್ಯಾಸ ನಡೆಯದಂತೆ ಮಾಡಲು ಎಬಿವಿಪಿ ಶತಪ್ರಯತ್ನ ನಡೆಸಿತು.

ಮೊದಲಿಗೆ ವಿ.ವಿ.ಯ ಸೆನೆಟ್ ಹಾಲ್‌ನಲ್ಲಿ ಇದನ್ನು ನಡೆಸಲು ವಿ.ವಿ. ಅನುಮತಿ ನೀಡಿತ್ತು. ಆದರೆ ಇವರು 'ವಿವಾದಾಸ್ಪದ ವ್ಯಕ್ತಿ', 'ಕೋಮುಮನೋಭಾವದವರು'(!) ಎಂದು ಹೇಳಿದ ಎಬಿವಿಪಿಯವರ ಒತ್ತಡದಿಂದಾಗಿ ಅನುಮತಿಯನ್ನು ರದ್ದು ಮಾಡಲಾಯಿತು. ನಂತರ ವಿದ್ಯಾರ್ಥಿ ಸಂಘದ ಕಟ್ಟಡದಲ್ಲಿ ನಡೆಸಲು ನಿರ್ಧರಿಸಲಾಯಿತು. ಅದಕ್ಕೂ ಮೊದಲಲೇ ಬೀಗ ಜಡೆದರು. ಆದರೂ ವಿ.ವಿ. ಆವರಣದ ಬಳಿ ಒಂದು ಸ್ಥಳದಲ್ಲಿ ಉಪನ್ಯಾಸ ಕಾರ್ಯಕ್ರಮದ ನಂತರ ವರದರಾಜನ್ ಮತ್ತು ವಿದ್ಯಾರ್ಥಿಗಳು ಉಪಕುಲಪತಿಗಳ ಕಚೇರಿಗೆ ಹೋಗಿ ಅವರನ್ನು ಭೇಟಿ ಮಾಡುತ್ತಿದ್ದಾಗ ಎಬಿವಿಪಿ ಮಂದಿ ಕಚೇರಿಯನ್ನು ಘೇರಾಯಿಸಿದರು. ವಿ.ವಿ. ಅಧಿಕಾರಿಗಳು ಪೋಲೀಸ್ ಕರೆಸಬೇಕಾಯಿತು. ಅದಕ್ಕೆ ಮೊದಲೇ ಅಲ್ಲಿಯ ಒಬ್ಬ ಭದ್ರತಾ ಸಿಬ್ಬಂದಿ 'ನೀವು ಒಬ್ಬರೇ ಹೊರಹೋಗಬೇಡಿ, ಅವರು ಏನು ಬೇಕಾದರೂ ಮಾಡುವ ಮಂದಿ' ಎಂದು ವರದರಾಜನ್ ರವರಿಗೆ ಹೇಳಿದ್ದನಂತೆ.

"ನಾವು ವರದರಾಜನ್ ಮತ್ತು ಈ ವಿಚಾರ ಸಂಕಿರಣ ಏರ್ಪಡಿಸಿದವರ ಮುಖಕ್ಕೆ ಮಸಿ ಬಳಿಯಬೇಕೆಂದಿದ್ದೆವು, ಚಪ್ಪಲಿ, ಮೊಟ್ಟೆ ಎಸೆಯಬೇಕೆಂದಿದ್ದೆವುಆದರೆ ಅದರಿಂದ ಅವರಿಗೇ ಪ್ರಚಾರ ಸಿಗುತ್ತದೆಂದು ವಿಸಿ ಕಚೇರಿಯನ್ನು ಘೇರಾಯಿಸಿದೆವು" ಎಂದು ಎಬಿವಿಪಿ ಉಪಾಧ್ಯಕ್ಷ ವೀರೇಂದ್ರ ಸಿಂಗ್ ಯಾವುದೇ ಮುಲಾಜಿಲ್ಲದೆ ಇಂಡಿಯನ್ ಎಕ್ಸ್‌ಪ್ರೆಸ್ ವರದಿಗಾರನಿಗೆ ಹೇಳಿರುವುದಾಗಿ ಆ ಪತ್ರಿಕೆಯಲ್ಲಿ ವರದಿಯಾಗಿದೆ. ಇದೀಗ 'ಒಳ್ಳೆಯ ದಿನ'ಗಳು ಸೃಷ್ಟಿಸಿರುವ ವಾತಾವರಣ!

ಹೊಸದೇನನ್ನೂ ಬಯಲಿಗೆ ತರದ ನೇತಾಜಿ ಫೈಲುಗಳು

ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರನ್ನು ಕುರಿತಂತೆ ಸರಕಾರದ ಬಳಿಯಿರುವ ಗುಪ್ತ ಕಡತಗಳನ್ನು ಈಗ ಸಾರ್ವಜನಿಕಗೊಳಿಸಲಾಗಿದೆ. ಇದುವರೆಗೆ ಇದು ಹಿಂದುತ್ವ ಪಡೆಗಳ ದೇಶಭಕ್ತಿಯ ಪ್ರದರ್ಶನದ ಪ್ರಚಾರದ ಒಂದು ಅಂಶವಾಗಿತ್ತು. ಜವಹರಲಾಲ ನೆಹರೂ ಮತ್ತು ಇತರರು ನೇತಾಜಿಯವರ ಬಗ್ಗೆ ದೇಶದಿಂದ ಯಾವುದೋ ಮಹತ್ವದ ವಿಷಯವನ್ನು ಮುಚ್ಚಿಟ್ಟಿದ್ದರು ಎಂದು ಪ್ರಚಾರ ಮಾಡಿದ್ದರು. ಆದರೆ ಹೊಸ ಸಂಗತಿಗಳೇನೂ ಈಗ ಬಯಲು ಮಾಡಿರುವ ಕಡತಗಳಿಂದ ಹೊರಬಂದಿಲ್ಲ


ನೇತಾಜಿಯವರ ಕುಟುಂಬದವರ ಮೇಲೆ, ಅವರ ಫಾರ್ವರ್ಡ್ ಬ್ಲಾಕ್ ಪಕ್ಷದ ಮೇಲೆ ಪತ್ತೇದಾರಿಕೆ ಮಾಡುತ್ತಿದ್ದರು, ಅವರ ಆಝಾದ್ ಹಿಂದ್ ಸೇನೆಯ ಸೈನಿಕರನ್ನು ಭಾರತೀಯ ಸೇನಾಪಡೆಗಳಲ್ಲಿ ಸೇರಿಸಿಕೊಳ್ಳಲಿಲ್ಲ ಎಂಬುದು ಸಾಮಾನ್ಯವಾಗಿ ಕೇಳಬರುವ ಮಾತುಗಳು.

ಭಾರತದ ಹೊಸ ಪ್ರಭುತ್ವ ಬಂಡವಾಳಶಾಹಿ–ಭೂಮಾಲಕರದ್ದೇ ಆಗಿರುವಾಗ ಪ್ರತಿಪಕ್ಷಗಳ ಮೇಲೆ ಕಣ್ಣಿಟ್ಟಿದುದರಲ್ಲಿ ಆಶ್ಚರ್ಯವೇನಿಲ್ಲ. ಅದು ಕಮ್ಯುನಿಸ್ಟ್ ಪಕ್ಷದ ಮೇಲೂ ಇತ್ತು, ಆಗಿನ ಜನಸಂಘದ ಮೇಲೂ ಇತ್ತು. ನೇತಾಜಿಯವರ ಫಾರ್ವರ್ಡ್ ಬ್ಲಾಕ್ ಮೇಲೂ ಇತ್ತು. ಇನ್ನು ಅವರ ಸಂಬಂಧಿಕರ ಮೇಲೆ ಕಣ್ಣಿಟ್ಟದ್ದು ಅವರ ಚಟುವಟಿಕೆಗಳನ್ನು ನಿರ್ಬಂಧಿಸಲು ಎನ್ನುವುದಕ್ಕೆ ಈ ಕಡತಗಳಲ್ಲಿ ಹೊಸದೇನೂ ಸಂಗತಿ ಸಿಕ್ಕಿಲ್ಲ.

ನಿಜ, ಆಝಾದ್ ಹಿಂದ್ ಸೇನೆಯನ್ನು ಬರ್ಖಾಸ್ತು ಮಾಡಲಾಯಿತು, ಅವರನ್ನು ಭಾರತೀಯ ಸೇನಾಪಡೆಗಳಲ್ಲಿ ಸೇರಿಸಕೊಳ್ಳಲಿಲ್ಲ ಎಂಬುದೂ ಹೊಸ ಪ್ರಭುತ್ವದ ವರ್ಗ ಸ್ವರೂಪದ ಬಗ್ಗೆ ತಿಳಿದವರಿಗೆ ಆಶ್ಚರ್ಯ ತರಬೇಕಿಲ್ಲ.

ಅಷ್ಟಕ್ಕೂ ಸ್ವಾತಂತ್ರ್ಯ ಹೋರಾಟದಲ್ಲಿ ಏನೇನೂ ಪಾತ್ರ 'ವಹಿಸದ ಹಿಂದುತ್ವ ಮಂದಿ ಎರಡನೇ ಮಹಾಯುದ್ಧ ಮುಗಿದ ನಂತರ ದೇಶದಲ್ಲಿ ಭುಗಿಲೆದ್ದ ಕ್ರಾಂತಿಕಾರೀ ಚಟುವಟಿಕೆಗಳ ಭಾಗವಾಗಿದ್ದ ರಿನ್ ಬಂಡಾಯ ಮತ್ತು ಆಝಾದ್ ಹಿಂದ್ ಸೇನೆಯ ಸೈನಿಕರ ಪರವಾದ ಚಳುವಳಿಗಳಲ್ಲಿ ಕೂಡ ಎಲ್ಲೂ ಭಾಗವಹಿಸಿದ ಕುರುಹುಗಳೂ ಇಲ್ಲ. ಈ ಚಳುವಳಿಗಳಲ್ಲಿ ಕಾಣಿಸುತ್ತಿದ್ದುದ್ದು ಕಾಂಗ್ರೆಸಿನ ಎಡಪಂಥೀಯರೂ ಸೇರಿದಂತೆ ಎಡಪಂಥೀಯರ ಬಾವುಟಗಳೇ. ಮುಂಬೈಯಲ್ಲಿ ನಡೆದ ರಿನ್‌ಬಂಡಾಯದ ಪರವಾದ ನಾಗರಿಕ ಚಳುವಳಿಗಳಲ್ಲಂತೂ ಕಮ್ಯುನಿಸ್ಟರ ಕೆಂಬಾವುಟಗಳು ಮತ್ತು ಕಾಂಗ್ರೆಸಿನ ತ್ರಿವರ್ಣ ಬಾವುಟದೊಂದಿಗೆ ಮುಸ್ಲಿಂ ಲೀಗ್‌ನ ಹಸಿರು ಬಾವುಟವೂ ಇತ್ತು, ಆದರೆ ಎಲ್ಲೂ ಪ್ರತ್ಯೇಕವಾಗಿಯಾದರೂ ಕೇಸರಿ ಬಾವುಟಗಳು ಇರಲಿಲ್ಲ. ಏಕೆಂದರೆ ಆಗ ಅವು ಬ್ರಿಟಿಶರ ಪರವಾಗಿದ್ದವು ಎಂದು ಇತಿಹಾಸ ಹೇಳುತ್ತದೆ.

ಅಂತೂ ತಮ್ಮವರು ಎನ್ನಬಹುದಾದ ಸ್ವಾತಂತ್ರ್ಯ ಹೋರಾಟಗಾರರ ದೊಡ್ಡ ಹೆಸರುಗಳಿಗಾಗಿ ತಡಕಾಡುವ ಹಿಂದುತ್ವ ಮಂದಿಗೆ ಭಗತ್ ಸಿಂಗ್, ಸರ್ದಾರ್ ಪಟೇಲ್, ಅಂಬೇಡ್ಕರ್ ನಂತರ ನೇತಾಜಿ ಹೆಸರನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನಕ್ಕೂ, ಪಶ್ಚಿಮ ಬಂಗಾಲ ಚುನಾವಣೆಯಲ್ಲಿ ಅದರ ಪ್ರಯೋಜನ ಪಡೆಯುವ ಪ್ರಯತ್ನಕ್ಕೂ ಯಶಸ್ಸು ಸಿಗುವಂತೆ ಕಾಣುತ್ತಿಲ್ಲ.



ವ್ಯಂಗ್ಯ ಚಿತ್ರ ಕೃಪೆ: ಸತೀಶ್ ಆಚಾರ್ಯ

"...ನನ್ನ ಪ್ರಶ್ನೆಗೆ ಉತ್ತರದ ಬದಲು ಆತನ ಜಾತಿಯ ಪ್ರಶ್ನೆ ಏಕೆ ಎತ್ತಲಾಗುತ್ತಿದೆ? ಪುಟ ೮ ರಿಂದ

ರಾಧಿಕರವರಿಗೆ ಮೂರು ಮಕ್ಕಳಾದ ಮೇಲೆ, ಐದನೇ ವರ್ಷದಲ್ಲಿ ಆತನಿಗೆ ರಾಧಿಕರವರ ನೈಜ ಜಾತಿ ತಿಳಿಯಿತು. ಮೊದಲೇ ಕ್ರೂರವಾಗಿ ವರ್ತಿಸುತ್ತಿದ್ದ ಮಣಿಕುಮಾರ ಆಗಿನಿಂದ' ಇನ್ನೂ ಕ್ರೂರಿಯಾದ. ನಾನು ಅಸ್ಪೃಶ್ಯಳನ್ನು ಮದುವೆಯಾದೆ, ನನಗೆ ಮೋಸ ಮಾಡಿದಿರಿ ಎಂದು ನಿಂದಿಸುತ್ತಿದ್ದ. ಅಂಜನಿ 1990 ರಲ್ಲಿ ರಾಧಿಕ ಹಾಗೂ ಮೂರು ಅವರ ಮಕ್ಕಳನ್ನು ತಮ್ಮಲ್ಲಿಗೆ ಕರೆಸಿಕೊಂಡರು.

ಆದರೆ ವಾಸ್ತವವಾಗಿ ರಾಧಿಕ ಹಾಗೂ ಅವರ ಮೂರು ಮಕ್ಕಳು ಅಂಜನಿಯವರ ಮನೆಯಲ್ಲಿ ಮನೆ ಆಳುಗಳಂತೆ ಇದ್ದವರು. ರಾಧಿಕಗೆ ಮದುವೆಯಾದಾಗ ಅವರಿಗೆ 14 ವರ್ಷ ವಯಸ್ಸಾಗಿತ್ತು. ಆಕೆಗೆ ನಿಜವಾದ ಇತಿಹಾಸ ಗೊತ್ತಾಗಿದ್ದು 12 ಅಥವಾ 13 ವರ್ಷವಾಗಿದ್ದಾಗ.

ರೋಹಿತನಿಗೆ ಮನೆಗೆ ಹೋಗಲು ಇಷ್ಟವಿರುತ್ತಿರಲಿಲ್ಲ ಎಂದು ಆತನ ಹುಟ್ಟೂರಿನ ಗೆಳೆಯ ರಿಯಾಜ್ ಹಿಂದುಸ್ತಾನ್ ಟೈಮ್ಸ್ ಪತ್ರಕರ್ತರಿಗೆ ತಿಳಿಸಿದ್ದಾನೆ. ಏಕೆಂದರೆ ಯಾವಾಗಲೂ ತನ್ನ ತಾಯಿ ಆಳಿನಂತೆ ಅಲ್ಲಿ ದುಡಿಯುತ್ತಿದ್ದರು. ಅವರಿಲ್ಲದಿದ್ದರೆ ಅವರ ಮಕ್ಕಳು ದುಡಿಯುತ್ತಿದ್ದರು. ರಾಧಿಕ ಮತ್ತು ಮಕ್ಕಳು ಬೇರೆ ಮನೆ ಮಾಡಿಕೊಂಡು ಹೋದ ಮೇಲೂ ಇದು ಮುಂದುವರೆಯಿತು. .....

ಅಂಜನಿಯ ಸ್ವಂತ ಮಕ್ಕಳು ನಾಲ್ಕು. ಎಲ್ಲರೂ ಡಬ್ಬಲ್ ಗ್ರಾಜುವೇಟ್‌ಗಳೇ. ಸ್ವತಃ ಅಂಜನಿ ದೇವಿಯವರೇ ಎಂ.ಎ, ಎಂ.ಇಡಿ ಮಾಡಿದ್ದರು ಹಾಗೂ ಮುನಿಸಿಪಲ್ ಕಾರ್ಪೊರೇಶನ್ ಹೈಸ್ಕೂಲ್, ಗುಂಟೂರಿನ ಹೆಚ್‌ಎಂ ಆಗಿದ್ದವರು. ಅವರ ಗಂಡ ಸರ್ಕಾರಿ ಮುಖ್ಯ ಇಂಜಿನಿಯರ್ ಆಗಿದ್ದರು. ಆದರೂ ಆಕೆ ತನ್ನ ಸ್ವಂತ ಮಗಳೆಂದು, ಹೇಳಿಕೊಳ್ಳುವ ರಾಧಿಕರವರಿಗೆ ಶಿಕ್ಷಣ ಕೊಡಿಸಲಿಲ್ಲ ಎಂಬುದನ್ನು ಗಮನಿಸಬೇಕು. ರಾಧಿಕಾರ ಮಕ್ಕಳ ಶಿಕ್ಷಣಕ್ಕೂ ಸಹಾಯ ಮಾಡಲಿಲ್ಲ.

"ನನಗೆ ಐದು ವರ್ಷವಾಗಿದ್ದಾಗಿನಿಂದ ನಾನು ವಡ್ಡೇರ ಕುಟುಂಬದಲ್ಲಿ ಬೆಳೆದೆ. 1985ರಲ್ಲಿ ಒಬ್ಬ ವಡ್ಡೇರನಿಗೆ ಮದುವೆ ಮಾಡಿದರು. ಮೂರು ಮಕ್ಕಳಾದ ನಂತರ ನಮ್ಮ ವಿಚ್ಛೇದನವಾಯಿತು. ನಂತರ ನಾನೇ ಏಕಾಂಗಿಯಾಗಿ ಮಕ್ಕಳನ್ನು ಬೆಳೆಸಿದೆ, ನನ್ನ ಮಾಲ ಜಾತಿಯ ಪದ್ಧತಿಯಂತೆ ಬೆಳೆಸಿದೆ, ನಾನೆಷ್ಟು ದಲಿತಳೋ., ನನ್ನ ಮಕ್ಕಳೂ ಅಷ್ಟೇ ದಲಿತರು. ಆದರೆ ನನ್ನ ಪ್ರಶ್ನೆ– ರೋಹಿತ್‌ನನ್ನು ಸಸ್ಪೆಂಡ್ ಮಾಡಿದ್ದೇಕೆ, ಆತ ಏಕೆ ಸಾಯಬೇಕಾಯಿತು ಎಂಬ ನನ್ನ ಪ್ರಶ್ನೆಗೆ ಉತ್ತರ ಕೊಡುವ ಬದಲು ಇದನ್ನು ದಿಕ್ಕು ತಪ್ಪಿಸುತ್ತಿರುವುದೇಕೆ?"

ಮಗನನ್ನು ಕಳೆದುಕೊಂಡ ಒಬ್ಬ ತಾಯಿಯ ನೋವಿನ ಅರಿವು ನನಗಿದೆ ಎನ್ನುವ ಪ್ರಧಾನಿಗಳಿಗೆ ತಾಯಿಯೇ ಮಕ್ಕಳನ್ನು ಸಾಕಿ ಸಲಹಿದ್ದರೆ, ತಂದೆಯ ಸ್ಥಾನಮಾನದ ಪ್ರಯೋಜನ ಮಕ್ಕಳಿಗೆ ದೊರೆತಿರದಿದ್ದರೆ, ತಾಯಿಗೆ ಆಕೆಯ ಜಾತಿಯಿಂದ ದೊರೆಯುವ ಮೀಸಲಾತಿ ಮುಂತಾದವುಗಳಿಗೆ ಆಕೆಯ ಮಕ್ಕಳೂ ಅರ್ಹರಾಗುತ್ತಾರೆ ಎಂಬ ಸುಪ್ರಿಂ ಕೋರ್ಟಿನ ತೀರ್ಪಿನ ಅರಿವೂ ಇರಬಹುದು. ಆದ್ದರಿಂದ ಈ ತಾಯಿಯ ಈ ಪ್ರಶ್ನೆಗೆ ಉತ್ತರಿಸ ಬಲ್ಲರೇ? ರೋಹಿತನ ಜಾತಿಯ ಬಗ್ಗೆ ಜಿಜ್ಞಾಸೆಯನ್ನು ನಿಲ್ಲಿಸಿ ಎಂದು ಅವರು ತಮ್ಮ ಪರಿವಾರದವರಿಗೆ ಹೇಳಬಲ್ಲರೇ?

ಕೆಲವು ವೀಕ್ಷಕರು ಈ ಜಾತಿ–ಜಿಜ್ಞಾಸೆಗೂ ಮಹಮ್ಮದ್ ಅಖ್ಲಾಕ್ ಮನೆಯಲ್ಲಿದ್ದುದು ಗೋಮಾಂಸವೋ, ಕುರಿಮಾಂಸವೋ ಎಂಬ ಜಿಜ್ಞಾಸೆಗೂ ಹೋಲಿಕೆಯಿದೆ ಎನ್ನುತ್ತಾರೆ. ಅಲ್ಲಿ ಯಾವ ಮಾಂಸ ಎಂಬುದೇ ಕೇಂದ್ರ ಮಂತ್ರಿಗಳಿಗೆ, ಸರಕಾರೀ ಯಂತ್ರಕ್ಕೆ ಮುಖ್ಯವಾಗಿತ್ತೇ ಹೊರತು, ಒಬ್ಬ ವ್ಯಕ್ತಿಯನ್ನು ಆತನ ಮನೆಯ ಭದ್ರತೆಯಿಂದ ಹೊರಗೆಳೆದು ಚಚ್ಚಿ ಹಾಕಲಾಯಿತೆಂಬುದು ಮುಖ್ಯವಾಗಲೇ ಇಲ್ಲ. ಹಾಗೆ, ಇಲ್ಲಿಯೂ ಒಬ್ಬ ಪ್ರತಿಭಾವಂತ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಏಕೆ ಬಂತು ಎಂಬುದು ಅವರಿಗೆ ಮುಖ್ಯವಾಗಿಲ್ಲ.

ಒಂದು ಕೃತ್ಯದ ಅಗಾಧತೆಯನ್ನು ಮಸುಕು ಮಾಡಿ, ಅದರ ಬಗ್ಗೆ ಜನಗಳ ಮನಸ್ಸನ್ನು ತಟ್ಟದಂತೆ ಮಾಡುವುದು, ಆಮೂಲಕ ಕೋಮು/ ಜಾತಿ ಹಿಂಸಾಚಾರದ ವಿರುದ್ಧ ಜನಗಳನ್ನು ಅಣಿನೆರೆಸಲಾಗದಂತೆ ಮಾಡುವುದು– ಇದೇ ಈ'ಒಳ್ಳೆಯ ದಿನ'ಗಳ ಕಾರ್ಯತಂತ್ರ ಎಂಬುದಕ್ಕೆ ಹೆಚ್ಚೆಚ್ಚು ಉದಾಹರಣೆಗಳು ಸಿಗುತ್ತಿವೆ.

ರಾಜಕೀಯ ತರಬೇಡಿ



ವ್ಯಂಗ್ಯ ಚಿತ್ರ ಕೃಪೆ: ಗೋಕುಲ್, ಡಿ.ಎನ್.ಎ.



ಬಂಡವಾಳಕ್ಕೆ ರಿಯಾಯ್ತಿಗಳ ಮೂಲಕ ಅಭಿವೃದ್ಧಿಯೋ? ಮರುಹಂಚಿಕೆಯ ಮೂಲಕ ಅಭಿವೃದ್ಧಿಯೋ?

ನವ ಉದಾರವಾದವು ತನಗೆ ಪರ್ಯಾಯವೇ ಇಲ್ಲ ಎಂಬಂತೆ ಬೊಬ್ಬೆ ಹೊಡೆಯುತ್ತಿದೆ. ಅದಕ್ಕೆ ಸೆಡ್ಡು ಹೊಡೆದಂತೆ, ಮರು ಹಂಚಿಕೆಯ ಶ್ರೇಷ್ಠತೆಯನ್ನು ಎಡ ಪಕ್ಷಗಳು ಪ್ರಚುರಪಡಿಸಬೇಕಿದೆ.

ಕೆ.ಎಂ.ನಾಗರಾಜ್

ಆರ್ಥಿಕ ಅಭಿವೃದ್ಧಿ ಸಾಧಿಸಲು ಅನೇಕ ಮಾರ್ಗಗಳಿವೆ. ಬಂಡವಾಳಶಾಹಿ ಮಾರ್ಗ, ಸಮಾಜವಾದಿ ಮಾರ್ಗ ಮತ್ತು ಇವೆರಡರ ಮಿಶ್ರಣ ಪದ್ಧತಿ, ಹೀಗೆ ಅನೇಕ ಆಯ್ಕೆಗಳಿವೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳಿಗನುಗುಣವಾಗಿ, ಪ್ರತಿಯೊಂದು ದೇಶವೂ ತನಗೆ ಬೇಕಾದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಕೇವಲ 62 ಮಂದಿಯ ಬಳಿ ಇರುವ ಸಂಪತ್ತು ವಿಶ್ವದ ಅರ್ಧದಷ್ಟು ಜನಸಂಖ್ಯೆಯ (350ಕೋಟಿ ಮಂದಿ) ಸಂಪತ್ತಿಗೆ ಸಮನಾಗಿದೆ. ಸಂಪತ್ತಿನ ಈ ಅಸಮಾನತೆಗಳ ಬಗ್ಗೆ ಐಎಂಎಫ್, ಅಂತಾರಾಷ್ಟ್ರೀಯ ಖ್ಯಾತಿಯ ಅನೇಕ ಅರ್ಥಶಾಸ್ತ್ರಜ್ಞರು ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಹಿಡಿದು ಕ್ರೈಸ್ತ ಧರ್ಮಗುರು ಪೋಪ್‌ರವರೆಗೆ, ಎಲ್ಲರೂ ವಿಶ್ವದ ಎಲ್ಲೆಡೆ ತಾಂಡವವಾಡುತ್ತಿರುವ ಆತಂಕ ವ್ಯಕ್ತಪಡಿಸಿದ್ದಾರೆ.

2008ರ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಐಎಂಎಫ್ ನೇಮಕ ಮಾಡಿದ್ದ ಟಾಸ್ಕ್ ಫೋರ್ಸ್‌ನ ಸದಸ್ಯರಾಗಿದ್ದ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್, ಭಾರತವೂ ಸೇರಿದಂತೆ ವಿಶ್ವದೆಲ್ಲೆಡೆ ವ್ಯಾಪಿಸಿರುವ ಆರ್ಥಿಕ ಬಿಕ್ಕಟ್ಟಿನ ಪರಿಹಾರದ ಬಗ್ಗೆ ಮಂಡಿಸಿರುವ ಕೆಲವು ಅಭಿಪ್ರಾಯಗಳು ಹೀಗಿವೆ:

"ನಮ್ಮ ದೇಶದ ಇಂದಿನ ಸಂದರ್ಭದಲ್ಲಿ, ಅಭಿವೃದ್ಧಿಗೆ ಸಂಬಂಧಿಸಿದಂತೆ, ಪರಸ್ಪರ ವಿರೋಧವಾಗಿರುವ ಎರಡು ಪ್ರತಿಪಾದನೆಗಳಿವೆ. ಅವುಗಳಲ್ಲಿ ಒಂದು ನವ-ಉದಾರಿ ಪದ್ಧತಿ. ಅಭಿವೃದ್ಧಿ ಹೊಂದಲು ಜಿಡಿಪಿ ಬಹಳ ವೇಗವಾಗಿ ಬೆಳೆಯಬೇಕು. ಅದಕ್ಕಾಗಿ, ಭಾರಿ ಪ್ರಮಾಣದಲ್ಲಿ ಬಂಡವಾಳದ ಹೂಡಿಕೆಯಾಗಬೇಕು. ಪರಿಣಾಮವಾಗಿ, ಸರ್ಕಾರದ ವರಮಾನ ಹೆಚ್ಚುತ್ತದೆ. ಆಗ, ಅದನ್ನು ಜನಹಿತಕ್ಕೆ ಬಳಸಬಹುದು ಎಂಬುದು ಈ ಪ್ರತಿಪಾದನೆಯ ತಿರುಳು.

ಆದ್ದರಿಂದ, ಪ್ರಭುತ್ವವು ಹೂಡಿಕೆ ಮಾಡುವ ಸಾಮರ್ಥ್ಯವಿರುವ ದೇಶದ ಕಾರ್ಪೊರೇಟ್‌ಗಳಿಗೆ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬಂಡವಾಳ ಹೂಡಲು "ಉತ್ತೇಜನ" ಕೊಡುವಂತಹ ನೀತಿಗಳನ್ನು ಅನುಸರಿಸಲೇಬೇಕು ಎಂಬುದು ನವ-ಉದಾರಿ ಪದ್ಧತಿಯ ಪ್ರತಿಪಾದಕರ ಒತ್ತಾಯ. ಹಾಗಾಗಿ, ಹೂಡಿಕೆದಾರರನ್ನು ಒಲಿಸಿಕೊಳ್ಳಲು ಅವರಿಗೆ ಬೇಕಾಗುವುದಕ್ಕಿಂತಲೂ ಹೆಚ್ಚಿನ ಪ್ರಮಾಣದ ಭೂಮಿಯನ್ನು ರೈತರಿಂದ ಬಲವಂತವಾಗಿ ವಶಪಡಿಸಿಕೊಳ್ಳ ಲು ಕಾನೂನು ತಿದ್ದುಪಡಿ, ಮನಸೋ ಇಚ್ಛೆ ಕಾರ್ಮಿಕನ್ನು ವಜಾಮಾಡಲು ಅನುಕೂಲವಾಗುವಂತೆ ಕಾರ್ಮಿಕ ಕಾನೂನು ತಿದ್ದುಪಡಿ ಮತ್ತು ತೆರಿಗೆ ಕೊಡುವಲ್ಲಿ ರಿಯಾಯ್ತಿ ತೋರಿಸಬೇಕೆಂಬುದನ್ನು ನವ-ಉದಾರಿ ಪದ್ಧತಿ ಬಯಸುತ್ತದೆ.

ಎರಡನೆಯದು, ಸಾರಭೂತವಾಗಿ, ಎಡ ಪಕ್ಷಗಳ ಪ್ರತಿಪಾದನೆ. ಇದು, ಮೊದಲನೆಯ ಪ್ರತಿಪಾದನೆಗೆ ಎದುರಾಗಿದೆ ಮತ್ತು ಆ ವಾದವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಏಕೆಂದರೆ, ಕಾರ್ಪೊರೇಟ್‌ಗಳ ಶರತ್ತುಗಳನ್ನೆಲ್ಲಾ ಪಾಲಿಸಿ, ಉನ್ನತ ಮಟ್ಟದ ಬೆಳವಣಿಗೆ ಸಾಧಿಸಿ, ಸರ್ಕಾರದ ಆದಾಯ ಹೆಚ್ಚಿದ ಮೇಲೂ, ನವ-ಉದಾರಿ ಪ್ರವರ್ತಕರು ಭಾವಿಸಿದ್ದಂತೆ, ಅವರುಹೇಳುವ 'ಕೆಳಗೆ-ಜಿನುಗುವ'("trickle-down") ಸಿದ್ಧಾಂತವು ಸಮಾಜದ ತಳಮಟ್ಟದಲ್ಲಿರುವವರಿಗೆ ಅನುಕೂಲಗಳನ್ನು ಒದಗಿಸುವ ಬದಲು ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾಗುವಂತೆ ಮಾಡಿದೆ.

ಆದ್ದರಿಂದ, ಈ ವೈಖರಿಯ ಆರ್ಥಿಕ ಬೆಳವಣಿಗೆಯು ಬಡ ಜನರ ಸ್ಥಿತಿ-ಗತಿಗಳನ್ನು ಉತ್ತಮಪಡಿಸುವುದರ ಬದಲು ದೇಶದ ಕಾರ್ಪೊರೇಟ್ ಕುಳಗಳನ್ನು ಮತ್ತು ಬಹುರಾಷ್ಟ್ರೀಯ ಕಂಪೆನಿಗಳನ್ನು ಬಲಾಢ್ಯರನ್ನಾಗಿ ಮಾಡಿದೆ. ಅಷ್ಟೇ ಅಲ್ಲ. ಅವರಿಗೆ ಕೊಟ್ಟಿರುವ ರಿಯಾಯ್ತಿಗಳು ದೇಶದ ಆರ್ಥಿಕ ಸಂಪನ್ಮೂಲಗಳನ್ನು ಕಬಳಿಸಿವೆ. ಅದರಿಂದಾಗಿ, ರೈತರು ಭೂಮಿ ಕಳೆದುಕೊಂಡರು. ಕಾರ್ಮಿಕರ ಕೂಲಿ ಕಡಿಮೆಯಾಗಿದೆ. ಅವರ ಹಕ್ಕುಗಳಿಗೆ ಚ್ಯುತಿಯಾಗಿದೆ. ಬಡವರ ಬಾಳು ಬರಡಾಗಿದೆ. ಹಾಗಾಗಿ, ಈ ಮಾದರಿಯ ಅಭಿವೃದ್ಧಿ ಬಡತನವನ್ನು ಕಡಿಮೆ ಮಾಡುವ ಬದಲು ಅದನ್ನು ಹೆಚ್ಚಿಸಿದೆ. ಈಗ, ಬೆಳವಣಿಗೆಯೂ ಕುಂಠಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಬೆಳವಣಿಗೆ ಚೇತರಿಸಿಕೊಳ್ಳುವಂತೆ ಮಾಡುವ ಸಲುವಾಗಿ, ಅವರಿಗೆ ಮತ್ತಷ್ಟು ರಿಯಾಯ್ತಿ ಕೊಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಅದೊಂದು ವ್ಯರ್ಥ ಸಾಹಸವಾಗುತ್ತದೆ. ಆದ್ದರಿಂದ, ಬಡವರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಸಲುವಾಗಿ ಪ್ರಭುತ್ವ ತುರ್ತಾಗಿ ಮಧ್ಯಪ್ರವೇಶ ಮಾಡುವುದನ್ನು ಎರಡನೆಯ ಪ್ರತಿಪಾದನೆ ಬಯಸುತ್ತದೆ.

ಬಡವರ ಏಳಿಗೆಗಾಗಿ ಪ್ರಭುತ್ವದ ಮಧ್ಯಪ್ರವೇಶ ಅಗತ್ಯ

ಸರ್ಕಾರವು ದೇಶದ ಆರ್ಥಿಕ ವ್ಯವಹಾರಗಳಲ್ಲಿ ತಲೆಹಾಕಿ ಸಆರ್ವಜನಿಕ ಹೂಡಿಕೆ ಮಾಡಿದರೆ ಅದರ ಮೂಲಕ ದುಡಿಯುವ ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಸರಕು ಸಾಮಗ್ರಿಗಳಿಗೆ ಬೇಡಿಕೆ ಉಂಟಾಗುತ್ತದೆ. ಆಗ, ದೇಶದ ಆಂತರಿಕ ಮಾರುಕಟ್ಟೆ ಬೆಳೆಯುತ್ತದೆ. ಪರಿಣಾಮವಾಗಿ, ಸಣ್ಣ ಪುಟ್ಟ ತಯಾರಿಕಾ ಸಾಮಗ್ರಿಗಳ ಜೊತೆಗೆ ಕಾರ್ಪೊರೇಟ್-ಎಂಎನ್‌ಸಿಗಳ ಉತ್ಪನ್ನಗಳಿಗೂ ಬೇಡಿಕೆ ಉಂಟಾಗುತ್ತದೆ. ಆಂತರಿಕ ಮಾರುಕಟ್ಟೆಯ ಗಾತ್ರ ದೊಡ್ಡದಾದಂತೆ ಉದ್ಯೋಗವಕಾಶಗಳೂ ಹೆಚ್ಚುತ್ತವೆ ಮತ್ತು ಅದರೊಂದಿಗೆ ಬಡತನವೂ ಕಡಿಮೆಯಾಗುತ್ತದೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಎರಡನೆಯ ಪ್ರತಿಪಾದನೆಯು, ಸಂಪತ್ತು/ವರಮಾನಗಳ ಮರುಹಂಚಿಕೆಯ ಮೂಲಕವಾಗಿ ಬೆಳವಣಿಗೆಯನ್ನು ಎತ್ತಿ ಹಿಡಿಯುತ್ತದೆ. ಇದು, ದುಡಿಯುವ ಜನರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ನೇರವಾಗಿ ಪರಿಣಾಮ ಬೀರುತ್ತದೆ. ಬೆಳವಣಿಗೆ ಸಧೃಢವಾಗಿ ಉಳಿಯುವಂತೆ ಮಾಡುತ್ತದೆ. ಜೊತೆಗೆ ನಮ್ಮ ವಸಾಹತು ವಿರೋಧಿ ಹೋರಾಟದ ಸಮಯದಲ್ಲಿ ಚಿಗುರೊಡೆದ ಸ್ವತಂತ್ರ ಭಾರತದ ಸಮ ಬಾಳಿನ ಆಶಯವನ್ನು ಈಡೇರಿಸುತ್ತದೆ.

ಮೊಸರಿನಲ್ಲಿ ಕಲ್ಲು ಹುಡುಕುವ ನವ ಉದಾರಿ ವಕ್ತಾರರು ಎರಡನೆಯ ಪ್ರತಿಪಾದನೆಯನ್ನು ತಪ್ಪಾಗಿ ನಿರೂಪಿಸುವುದು ಆಶ್ಚರ್ಯವೇನಲ್ಲ. ವರಮಾನ/ಆಸ್ತಿಗಳ ಮರುಹಂಚಿಕೆ ಮತ್ತು ಬೆಳವಣಿಗೆ, ಇವೆರಡೂ ಒಂದಕ್ಕೊಂದು ವಿರೋಧವಾಗಿವೆ. ಸಮಾಜದಲ್ಲಿ ಲಭ್ಯವಿರುವ ಸಣ್ಣ ಪ್ರಮಾಣದ ಸಂಪತ್ತಿನ ಮರುಹಂಚಿಕೆ ಮಾಡುವುದರಿಂದ ಬಡವರ ಸಂಖ್ಯೆ ಹೆಚ್ಚುತ್ತದೆ. ಬಡತನ ನಿರ್ಮೂಲವಾಗುವುದಿಲ್ಲ. ವರಮಾನಗಳಲ್ಲಿರುವ ತಾರತಮ್ಯ ನೀತಿಯನ್ನು ಸರಿಪಡಿಸುವ ಎಡ ಪಕ್ಷಗಳ ಕಾರ್ಯಯೋಜನೆ ಬೆಳವಣಿಗೆಯ ಕುತ್ತಿಗೆ ಹಿಚುಕುತ್ತದೆ. ಅದರಿಂದಾಗಿ, ಎಲ್ಲರಿಗೂ ಹಂಚಬಹುದಾದ ರಾಷ್ಟ್ರೀಯ ಕೇಕ್ ಗಾತ್ರ ಯಾವ ಕಾಲಕ್ಕೂ ಸಣ್ಣದಾಗಿಯೇ ಉಳಿಯುತ್ತದೆ ಮತ್ತು ತಮ್ಮ ಅಭಿವೃದ್ಧಿ ಕಾರ್ಯಯೋಜನೆಯಲ್ಲಿ ಕೇಕ್ ದೊಡ್ಡದಾಗುತ್ತಾ ಹೋಗುತ್ತದೆ. ಅದನ್ನು ನಾಳೆ ಎಲ್ಲರಿಗೂ ಒದಗಿಸಬಹುದು ಎಂಬ ಕತೆ ಕಟ್ಟುತ್ತಾರೆ. ಇದು, ಎಡ ಪಕ್ಷಗಳ ಪರಿಕಲ್ಪನೆಯನ್ನು ಕುರೂಪಗೊಳಿಸುವ ಪ್ರಚಾರ. ಮರುಹಂಚಿಕೆ ಮತ್ತು ಬೆಳವಣಿಗೆ ಇವೆರಡನ್ನು ಬೇರ್ಪಡಿಸುವುದನ್ನಾಗಲಿ ಅಥವಾ ಅವು ಒಂದಕ್ಕೊಂದು ವಿರೋಧವಾಗಿವೆ ಎಂಬುದನ್ನಾಗಲಿ ಎಡ ಪಕ್ಷಗಳು ಒಪ್ಪುವುದಿಲ್ಲ. ಮರುಹಂಚಿಕೆಯ ಕ್ರಮಗಳ ಮೂಲಕ ಶೀಘ್ರ ಬೆಳವಣಿಗೆಯಾಗುತ್ತದೆ ಎಂಬುದನ್ನು ಎಡ ಪಕ್ಷಗಳು ಒತ್ತಿ ಹೇಳುತ್ತವೆ.

ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಆಧಿಪತ್ಯಕ್ಕೆ ತಲೆಬಾಗಿ ಅದರೊಂದಿಗೆ ಕೈಜೋಡಿಸಿರುವ ನಮ್ಮ ದೇಶದ ಕಾರ್ಪೊರೇಟ್ ಕುಳಗಳು, ಎಡ ಪಕ್ಷಗಳ ಪರಿಕಲ್ಪನೆಯನ್ನು ರಾಷ್ಟ್ರ ಮಟ್ಟದಲ್ಲಿ ಆಚರಣೆಗೆ ತರಲು ಬಿಟ್ಟಿಲ್ಲ. ಆದಾಗ್ಯೂ, ಪ್ರಯೋಗಶಾಲೆಯಲ್ಲಿ ಪರೀಕ್ಷೆಗೆ ಒಳಪಟ್ಟ ರೀತಿಯಲ್ಲಿ, ನವ ಉದಾರಿ ಮಾದರಿಯ ಬೆಳವಣಿಗೆಯ ಪ್ರತೀಕವಾಗಿ ಗುಜರಾತ್ ಮತ್ತು ಎಡ ಪಕ್ಷಗಳ ಪರಿಕಲ್ಪನೆಯ ಮಾದರಿ ಬೆಳವಣಿಗೆಯ ಪ್ರತೀಕವಾಗಿ ಕೇರಳ ರಾಜ್ಯಗಳು ನಮ್ಮ ಮುಂದಿವೆ. ಇಲ್ಲಿ, ಒಂದು ಬಹಳ ಮುಖ್ಯವಾದ ಅಂಶವನ್ನು ಗಮನಿಸಬೇಕಾಗಿದೆ. ಗುಜರಾತ್ ಮಾದರಿಯನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ, ರಾಷ್ಟ್ರ ಮಟ್ಟದಲ್ಲಿ ಅನುಸರಿಸುತ್ತಿದೆ ಮತ್ತು ಬೇರೆ ರಾಜ್ಯಗಳಿಗೆ ಶಿಫಾರಸು ಮಾಡುತ್ತದೆ. ಕೇರಳ ಮಾದರಿಯು ಕೇಂದ್ರದ ತಾತ್ಸಾರಕ್ಕೆ, ಎಲ್ಲ ರೀತಿಯ ಕಿರುಕುಳಕ್ಕೆ ಒಳಗಾಗಿದೆ ಮತ್ತು ಮುಖ್ಯವಾಗಿ, ಕೇಂದ್ರದ ಆರ್ಥಿಕ ನೆರವು ಪಡೆಯುವಲ್ಲಿ ಅನೇಕ ರೀತಿಯ ಅಡಚಣೆಗಳಾಗಿವೆ. ಹಾಗಾಗಿ, ಅದರ ಪ್ರಯೋಜನಗಳು ಪೂರ್ಣ ಪ್ರಮಾಣದಲ್ಲಿ ವ್ಯಕ್ತಗೊಳ್ಳಲು ಸಾಧ್ಯವಾಗಲಿಲ್ಲ. ಆದರೂ, ಗುಜರಾತ್ ಮತ್ತು ಕೇರಳ ನಡುವಿನ ಹೋಲಿಕೆಯು ತಿಳುವಳಿಕೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ.

ತಿಳುವಳಿಕೆ ಮೂಡಿಸುವ ಹೋಲಿಕೆ

ಇಂಡಿಯಾದ ಅರ್ಥವ್ಯವಸ್ಥೆಯ ಉತ್ತುಂಗ ಕಾಲದಲ್ಲಿ (2004-05 ರಿಂದ 2011-12ರವರೆಗೆ), ಕಾರ್ಪೊರೇಟ್ ಕುಳಗಳಿಗೆ/ಎಂಎನ್‌ಸಿಗಳಿಗೆ ರತ್ನಗಂಬಳಿ ಹಾಸಿ ಸ್ವಾಗತ ಮಾಡದ ಕೇರಳ ರಾಜ್ಯದ ತಲಾ ಜಿಡಿಪಿಯ 7.91% ಬೆಳವಣಿಗೆಯ ದರ, ಹಾಡಿ ಹೊಗಳುವ ಗುಜರಾತಿನ 8.19% ಬೆಳವಣಿಗೆಯ ಹತ್ತಿರದಲ್ಲಿತ್ತು. ಆದರೆ ತಲಾ ವರಮಾನವನ್ನೂ ಒಳಗೊಂಡಿರುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ, ಗುಜರಾತ್ ತೀರ ಕೆಳಗಿತ್ತು.

ನವ ಉದಾರವಾದವು ತನಗೆ ಪರ್ಯಾಯವೇ ಇಲ್ಲ ಎಂಬಂತೆ ಬೊಬ್ಬೆ ಹೊಡೆಯುತ್ತಿದೆ. ಅದಕ್ಕೆ ಸೆಡ್ಡು ಹೊಡೆದಂತೆ, ಮರು ಹಂಚಿಕೆಯ ಶ್ರೇಷ್ಠತೆಯನ್ನು ಎಡ ಪಕ್ಷಗಳು ಪ್ರಚುರಪಡಿಸಬೇಕಿದೆ. ಮತ್ತು ಮರು ಹಂಚಿಕೆಯ ಕಾರ್ಯಯೋಜನೆಯಡಿಯಲ್ಲಿ, ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪಾಲು ಬಯಸುವ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಹೂಡಿಕೆ ಮಾಡಲು ಯಾವುದೇ ಅಡ್ಡಿ ಇಲ್ಲ ಮತ್ತು ಆತಂಕಪಡಬೇಕಿಲ್ಲ ಎಂಬುದನ್ನು ಪ್ರಚುರಪಡಿಸಬೇಕಿದೆ.

trickle-down ಸಿದ್ಧಾಂತ


ಶ್ರೀಮಂತರಿಗೆ ಹೆಚ್ಚಿನ ಮಟ್ಟದ ತೆರಿಗೆ ರಿಯಾಯ್ತಿ ಕೊಡುವುದರಿಂದ, ಅವರು ತಮ್ಮ ಉಳಿತಾಯವನ್ನು ಸರಕುಗಳು ಕಡಿಮೆ ಬೆಲೆಯಲ್ಲಿ ಸಿಗುವ ಉದ್ಯಮಗಳಲ್ಲಿ ಹೂಡಿಕೆ ಮಾಡುವುದರಿಂದ ಉದ್ಯೋಗಗಳು ಹೆಚ್ಚುತ್ತವೆ ಎಂಬುದೇ ಈ ಸಿದ್ಧಾಂತ. ಕುದುರೆಗೆ ಜಾಸ್ತಿ ಹುರುಳಿ ತಿನಿಸಿದರೆ ಅದರ ಲದ್ದಿಯಲ್ಲಿರುವ ಕಾಳುಗಳು ಗುಬ್ಬಿಗೆ ಆಹಾರವಾಗುತ್ತದೆ ಎಂಬ ಉದಾಹರಣೆ ಬಹಳ ಹಿಂದೆಯೇ ಪ್ರಚಲಿತವಾಗಿತ್ತು.

ಇದೊಂದು ತೀರಾ ಹುಸಿ ಸಿದ್ಧಾಂತ ಎಂಬುದನ್ನು 2015 ರ ಮಾನವ ಅಭಿವೃದ್ಧಿ ವರದಿ ನೇರವಾಗಿಯೇ ಒಪ್ಪಿಕೊಂಡಿದೆ.

"ಆರ್ಥಿಕ ಬೆಳವಣಿಗೆಯಾದರೆ ಉದ್ಯೋಗಾವಕಾಶಗಳ ಬೆಳವಣಿಗೆಯೂ ಆಗುತ್ತದೆ ಎಂಬ ನಂಬಿಕೆಯ ಪ್ರಕಾರ ಉದ್ಯೋಗಗಳು , ಸಂಖ್ಯೆಯಲ್ಲಾಗಲೀ, ಗುಣಮಟ್ಟದಲ್ಲಾಗಲೀ ನಿರ್ಮಾಣಗೊಂಡಿಲ್ಲ. ಆದ್ದರಿಂದ 'ಉದ್ಯೋಗರಹಿತ ಬೆಳವಣಿಗೆ' ಎಂಬ ವಿದ್ಯಮಾನ ನಮ್ಮ ಮುಂದಿದೆ. ದೇಶಗಳು ಈಗ ಉದ್ಯೋಗಾವಕಾಶಗಳಿಂದ ಬೆಳವಣಿಗೆಯನ್ನು ತುರ್ತಾಗಿ ಪರಿಶೀಲಿಸಬೇಕಾಗಿದೆ. ಇಂತಹ ಕಾರ್ಯತಂತ್ರ ಕಡುಬಡವರಿಗೆ ಉದ್ಯೋಗಗಳನ್ನು ನಿರ್ಮಿಸಬಲ್ಲುದು, ಅದರಿಂದ ಬೇಡಿಕೆಗೆ ಮತ್ತು ಬಳಕೆಗೆ ಉತ್ತೇಜನೆ ದೊರೆತು ಆರ್ಥಿಕ ಬೆಳವಣಿಗೆಗೆ ದಾರಿಯಾಗಬಲ್ಲದು" ಎಂದಿದೆ.

'ಮಾನವ ಅಭಿವೃದ್ಧಿಗೆ ದುಡಿಮೆ' ಎಂಬುದು ಈ ಬಾರಿಯ ವರದಿಯ ಶಿರೋನಾಮೆ ಎಂಬುದನ್ನು ಗಮನಿಸಬೇಕು.

25 ವರ್ಷಗಳ ನವ-ಉದಾರವಾದಿ ಬೆಳವಣಿಗೆಯ ನಂತರವೂ ಭಾರತ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 188 ದೇಶಗಳ ನಡುವೆ ಈಗಲೂ 130ನೇ ಸ್ತಾನದಲ್ಲಿದೆ ಎಂಬುದೂ ಗಮನಾರ್ಹ.



ರಾಜ್ಯಗಳ ಸುತ್ತ

ವಿಶ್ವಾಸ್

ತಮಿಳುನಾಡಿನಲ್ಲಿ ಖಾಸಗಿ ಶಿಕ್ಷಣ ಮಾಫಿಯಾಗೆ ೩ ವೈದ್ಯ ವಿದ್ಯಾರ್ಥಿಗಳ ಬಲಿ

ತಮಿಳುನಾಡಿನ ವಿಲ್ಲುಪುರಂ ಜಿಲ್ಲೆಯ ಕಲ್ಲಕುರಿಚ್ಚಿ ತಾಲೂಕಿನ ಬಂಗಾರಂ ಗ್ರಾಮದಲ್ಲಿನ ಎಸ್.ವಿ.ಎಸ್. ಹೋಮಿಯೋಪತಿ ಮೆಡಿಕಲ್ ಕಾಲೇಜಿನ ಮೂವರು ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದು ಇಡೀ ರಾಜ್ಯವೇ ತಲ್ಲಣಿಸುವಂತೆ ಮಾಡಿದೆ. ಜನವರಿ 23ರಂದು ಶರಣ್ಯ, ಮೋನಿಷಾ ಮತ್ತು ಪ್ರಿಯಾಂಕಾ ಅವರ ದೇಹಗಳು ಕಾಲೇಜ್ ಸಮೀಪದ ಬವಿಯಲ್ಲಿ ಪತ್ತೆಯಾ ಗಿದ್ದು ಸಾವಿನ ಬಗ್ಗೆ ಅನುಮಾನ ವ್ಯಕ್ತವಾಗಿದೆ.

ಸರಕಾರದಿಂದ ಮಾನ್ಯತೆ ಪಡೆದಿರುವ ಈ ಕಾಲೇಜ್ 'ಇಲ್ಲಗಳ' ಸಂತೆಯಾಗಿದೆ. ತರಗತಿ ಕೊಠಡಿಗಳಿಲ್ಲ, ಪ್ರಯೋಗಾಲಯಗಳಿಲ್ಲ. ಟಾಯ್ಲೆಟ್‌ಗಳಿಲ್ಲ. ಭದ್ರತಾ ವ್ಯವಸ್ಥೆಯಂತು ದೂರವೇ ಉಳಿಯಿತು. ಆದರೆ ಶುಲ್ಕ ಮಾತ್ರ ಸರಕಾರ ನಿಗದಿಪಡಿಸಿದ್ದಕ್ಕಿಂತ ಎಷ್ಟೋ ಪಟ್ಟು ಹೆಚ್ಚು. ಉತ್ತಮ ಶಿಕ್ಷಣ ಪಡೆಯುವ ಉದ್ದೇಶದಿಂದ ಕಾಲೇಜ್ ಸೇರಿದ ಅದೆಷ್ಟೋ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಕಾಲೇಜ್‌ನ ಅವ್ಯವಸ್ಥೆಯಿಂದ ರೋಸಿಹೋಗಿ ಪ್ರವೇಶ ಪಡೆದ ಕೆಲವೇ ದಿನಗಳಲ್ಲಿ ಕಾಲೇಜ್ ಬಿಡುವ ಪ್ರಯತ್ನವನ್ನು ಮಾಡಿದರು. ಆದರೆ ಕಾಲೇಜ್ ಆಡಳಿತ ಮಂಡಳಿ ಗೂಂಡಾಗಳನ್ನು ಛೂಬಿಟ್ಟು ಪ್ರತಿಭನೆ ನಿರತ ವಿದ್ಯಾರ್ಥಿ ಹಾಗೂ ಪೋಷಕರನ್ನು ಬೆದರಿಸಲು ಪ್ರಯತ್ನಿಸಿತು. ಇದನ್ನು ಗಮನಿಸಿದ ಅನೇಕ ರಾಜಕೀಯ ಪಕ್ಷಗಳು, ಸಾರ್ವಜನಿಕ ಸಂಘಟನೆಗಳು ಮತ್ತು ವಿದ್ಯಾರ್ಥಿಗಳು ಕಾಲೇಜ್‌ನ ಅವ್ಯವಸ್ಥೆಗಳ ಬಗ್ಗೆ ಜಿಲ್ಲಾಧಿಕಾರಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಸಚಿವರು ಮತ್ತು ಸ್ವತಃ ಮುಖ್ಯಮಂತ್ರಿಯವರಿಗೆ ಮನವಿ ಪತ್ರಗಳನ್ನು ಸಲ್ಲಿಸಿ ಸಮಸ್ಯೆಗಳನ್ನು ಬಗೆಹರಿಸಿ ಅಧ್ಯಯನಕ್ಕೆ ಉತ್ತಮ ವಾತಾವರಣವನ್ನು ಕಲ್ಪಿಸುವಂತೆ ಮನವಿ ಮಾಡಿದ್ದರು. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ವಿದ್ಯಾರ್ಥಿಗಳು ನಡೆಸಿದ ಭಾರಿ ಪ್ರತಿಭಟನೆಯ ಹಿನ್ನೆಲೆಯಲ್ಲಿ ಕಾಲೇಜ್ ಕುರಿತು ತನಿಖೆ ನಡೆಸಲು ಆದೇಶಿಸಲಾಗಿತ್ತು. ಆದರೆ ಅಧಿಕಾರಿಗಳು ಸಲ್ಲಿಸಿದ ತನಿಖಾ ವರದಿಗೆ ಸಂಬಂಧಿಸಿ ಯಾವುದೇ ಕ್ರಮ ಕೈಗೊಳ್ಳದ ಆಡಳಿತವರ್ಗ ವಿದ್ಯಾರ್ಥಿಗಳನ್ನೇ ಬೆದರಿಸಿತು.

ಈ ಹಿನ್ನೆಲೆಯಲ್ಲಿ ಮೂವರು ವಿದ್ಯಾರ್ಥಿನಿಯರ 'ಆತ್ಮಹತ್ಯೆ' ಎಂಬ ಸಾವನ್ನು ಗಮನಿಸಬೇಕಾಗಿದೆ. ಮೂವರೂ ವಿದ್ಯಾರ್ಥಿನಿಯರ ಕೈಗಳನ್ನು ಹಿಂದ–ಕ್ಕೆ ಕಟ್ಟಲಾಗಿತ್ತು ಹಾಗೂ ತಲೆ, ಮೈಗಳ ಮೇಲೆ ಗಾಯದ ಗುರುತುಗಳಿದ್ದವು. ಇದು ಸಾವಿನ ಬಗ್ಗೆ ಶಂಕೆ ಮೂಡಲು ಕಾರಣವಾಗಿದೆ.

ತಮಿಳುನಾಡು ಸರಕಾರದ ಉನ್ನತ ಶಿಕ್ಷಣವೂ ಸೇರಿದಂತೆ ಒಟ್ಟಾರೆಯಾಗಿ ಶಿಕ್ಷಣ ಕ್ಷೇತ್ರವನ್ನು ಖಾಸಗೀಕರಿಸುವ ನೀತಿಯೇ ಇಂಥದ್ದೊಂದು ಅನಾಹುತಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಸಿಪಿಐ (ಎಂ) ತಮಿಳುನಾಡು ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ. ಲಂಗುಲಗಾಮಿಲ್ಲದೆ ಶುಲ್ಕ ವಸೂಲಿ ಮಾಡಲು ಹಾಗೂ ಯಾವುದೇ ಮೂಲ ಸೌಕರ್ಯ ಕಲ್ಪಿಸದೆ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಸುಲಿಗೆ ಮಾಡಲು ಹಾಗೂ ಖಾಸಗಿಯವರು ಲಾಭ ಮಾಡಿಕೊಳ್ಳಲು ಸರಕಾರ ಅವರೊಂದಿಗೆ ಕೈಜೋಡಿಸಿದ್ದು ವಿದ್ಯಾರ್ಥಿನಿಯರ ಸಾವಿಗೆ ಹೊಣೆಯಾಗಿದೆ.

ಹೋರಾಟದ ಮುಂಚೂಣಿಯಲ್ಲಿದ್ದ ಈ ಮೂವರು ವಿದ್ಯಾರ್ಥಿನಿಯರ ಸಾವಿನ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು, ವಿದ್ಯಾರ್ಥಿಗಳಿಂದ ವಸೂಲಿ ಮಾಡಿರುವ ಹೆಚ್ಚುವರಿ ಶುಲ್ಕವನ್ನು ವಾಪಸ್ ನೀಡಬೇಕು, ಒಂದು ಕಟ್ಟಡ ಹೊರತುಪಡಿಸಿ ಬೇರಾವುದೇ ಸೌಲಭ್ಯಗಳಿಲ್ಲದ ಕಾಲೇಜ್ ನಡೆಸಲು ಅನುಮತಿಕೊಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಕಾಲೇಜ್ ವಿರುದ್ಧ ಕ್ರಮ ಕೈಗೊಳ್ಳದ ಆರೋಗ್ಯ ಸಚಿವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಸಿಪಿಐ (ಎಂ) ಒತ್ತಾಯಿಸಿದೆ. ●

ಶಾರದಾ ಚಿಟ್‌ಫಂಡ್ ಹಗರಣ: ಸಿಬಿಐಗೇ ಜನರ ನೋಟಿಸ್

ಇಡೀ ದೇಶದ ಗಮನವನ್ನು ಸೆಳೆದಿರುವ, ಸಾವಿರಾರು ಕೋಟಿ ರೂಪಾಯಿಗಳ ಶಾರದಾ ಚಿಟ್‌ಫಂಡ್ ಹಗರಣಕ್ಕೆ ಸಂಬಂಧಿಸಿ ಮೋಸಕ್ಕೊಳಗಾದ ಸಾವಿರಾರು ಜನರು ಈಗ ಹಗರಣದ ತನಿಖೆ ನಡೆಸುತ್ತಿರುವ ಸಿಬಿಐ ಬಗ್ಗೆಯೇ ಸಂಶಯದ ದೃಷ್ಟಿಯಿಂದ ನೋಡುವಂತೆ ಆಗಿದೆ. ತನಿಖೆ ನಿಧಾನಗತಿಯಲ್ಲಿ ಸಾಗಿರುವುದೇ ಇದ–ಕ್ಕೆ ಕಾರಣ. ಕೋಲ್ಕತಾದ ಸಾಲ್ಟ್‌ಲೇಕ್‌ನಲ್ಲಿರುವ ಸಿಬಿಐ ಪೂರ್ವ ವಲಯ ಕಚೇರಿ ಮುಂದೆ ಜನವರಿ 12ರಂದು ಸಾವಿರಾರು ಜನರು ಧರಣಿ ನಡೆಸಿ ಕಚೇರಿಗೆ ಮುತ್ತಿಗೆ ಹಾಕಿದರು. ಹಗರಣದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ವಿಚಾರಣೆ ನಡೆಸಬೇಕು ಎಂಬುದು ಪ್ರತಿಭಟನೆಕಾರರ ಒಕ್ಕೊರಳ ಬೇಡಿಕೆಯಾಗಿತ್ತು. ಎಡರಂಗದ ಕರೆಯ ಮೇರೆಗೆ ಈ ಪ್ರತಿಭಟನೆ ನಡೆಯಿತು.


ಆಳುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಬಿಜೆಪಿ ನಡುವೆ ಒಳ ಒಪ್ಪಂದ ಏರ್ಪಟ್ಟಿರುವುದರಿಂದ ಶಾರದಾ ಚಿಟ್‌ಫಂಟ್ ಹಗರಣದ ತನಿಖೆ ವಿಳಂಬವಾಗುತ್ತಿದೆ ಹಾಗೂ ದುರ್ಬಲವಾಗುತ್ತಿದೆ ಎಂಬ ಅನುಮಾನ ಜನತೆಯಲ್ಲಿ ಉಂಟಾಗಿದೆ.

ಪ್ರತಿಭಟನೆಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ (ಎಂ) ಪಶ್ಚಿ ಬಂಗಾಳ ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ ಮಿಶ್ರಾ, ನಾವೇನೂ ಇಲ್ಲಿ ಸಿಬಿಐಗೆ ಮನವಿ ಕೊಡಲು ಬಂದಿಲ್ಲ ಎಂದರು. ಬದಲಿಗೆ ತನಿಖೆಯ ವಿಳಂಬದ ವಿರುದ್ಧ ಮತ್ತು ಹಗರಣಗಳನ್ನು ಪೋಷಿಸುವ ಸರಕಾರವನ್ನು ಕಿತ್ತೊಗೆಯಲು ನಾವಿಲ್ಲಿ ಸೇರಿದ್ದೇವೆ ಎಂದವರು ಘೋಷಿಸಿದರು.

2011ರ ಚುನಾವಣೆಗಳ ಮುನ್ನವೇ ಈ ಹಗರಣ ಬಗ್ಗೆ ಎಡರಂಗವು ಮೊದಲ ಬಾರಿಗೆ ಗಮನಸೆಳೆದಿದ್ದನ್ನನ್ನು ಅವರು ನೆನಪಿಸಿದರು. ಟಿಎಂಸಿ ಸರಕಾರ ಅಧಿಕಾರಕ್ಕೆ ಬಂದ ನಂತರ ಅಸೆಂಬ್ಲಿಯಲ್ಲೂ ಈ ವಿಷಯವನ್ನು ಪ್ರಸ್ತಾವಿಸಿದಾಗ ಆಡಳಿತ ಪಕ್ಷದ ಸದಸ್ಯರು ಸಿಪಿಐ (ಎಂ) ಶಾಸಕರ ಮೇಲೆ ದಾಳಿ ಮಾಡಿದರು ಎಂದೂ ಅವರು ಹೇಳಿದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಿಬಿಐ ತನಿಖೆಯನ್ನು ಎದುರಿಸಲೇ ಬೇಕು. ಅಗತ್ಯ ಬಿದ್ದ–ರೆ ಅವರನ್ನು ಬಂಧಿಸಬೇಕು ಎಂದು ಮಿಶ್ರಾ ಹೇಳಿದರು. ಸಿಪಿಐ (ಎಂ) ಪಾಲಿಟ್‌ಬ್ಯೂರೊ ಸದಸ್ಯ ಮಹಮದ್ ಸಲೀಂ ಮಾತನಾಡಿ ಎಡರಂಗ ಸರಕಾರ ಅಧಿಕಾರಕ್ಕೆ ಮರಳಿದರೆ ಠೇವಣಿದಾರರ ಹಣವನ್ನು ವಾಪಸ್ ಕೊಡುವುದಾಗಿ ಹೇಳಿದರು. ಚಿಟ್‌ಫಂಡ್ ಮಾಲಿಕರು ಮತ್ತು ಟಿಎಂಸಿ ನಾಯಕರ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ಠೇವಣಿದಾರರ ಹಣವನ್ನು ಮರಳಿಸಲಾಗುವುದು ಎಂದರು. ಎಡರಂಗದ ಸಂಚಾಲಕ ಬಿಮನ್ ಬೋಸ್ ಅಧ್ಯಕ್ಷತೆ ವಹಿಸಿದ್ದರು. ■

ಸುರಕ್ಷತಾ ಸಾಧನೆ ಇಲ್ಲದೇ ಪೌರಕಾರ್ಮಿಕನ ಕೆಲಸ



ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರಸಭೆ ವ್ಯಾಪ್ತಿಯ ಶಂಕರಮಠದ ಹತ್ತಿರ ಜನವರಿ 18ರಂದು ಆರೋಗ್ಯ ಇಲಾಖೆ ಮತ್ತು ಲೋಕಪಯೋಗಿ ಇಲಾಖೆಯವರು ಸಾರ್ವಜನಿಕ ಒಳಚರಂಡಿಯೊಳಗೆ ಯಾವುದೇ ಸುರಕ್ಷತಾ ಸಲಕರಣೆಗಳು ಇಲ್ಲದೆ ಕಾನೂನು ಬಾಹಿರವಾಗಿ ಪೌರಕಾರ್ಮಿಕರನ್ನು ಒಳಚರಂಡಿ ಕೆಲಸಕ್ಕೆ ತೊಡಗಿಸಲಾಗಿದೆ. ಒಳಚರಂಡಿ(ಯುಜಿಡಿ)ಯನ್ನು ಯಂತ್ರೋಪಕರಣದ ಮೂಲಕ ಸ್ವಚ್ಛಗೊಳಿಸಬೇಕು. ಯಾವ ಕಾರಣಕ್ಕೂ ಪೌರಕಾರ್ಮಿಕರನ್ನು ಯುಜಿಡಿ ಸ್ವಚ್ಛಗೊಳಿಸುವ ಕೆಲಸಕ್ಕೆ ಇಳಿಸುವಂತಿಲ್ಲ ಎಂಬ ಕಾನೂನು ಇದ್ದರೂ ಸಹ ಪೌರಕಾರ್ಮಿಕ ಯಾಕೋಬ್ ಜಾಕೋಬ್ ದರ್ಶಿ ಅವರನ್ನು ಈ ಕೆಲಸಕ್ಕೆ ಬಳಸಲಾಗಿದೆ.

ಇದನ್ನು ಖಂಡಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಧಿನಿಯಮದ ಪ್ರಕಾರ ಪೋಲೀಸ್ ವರಿಷ್ಠರಿಗೆ ದೂರು ನೀಡಿದ್ದು, ಸೂಕ್ತ ಕ್ರಮ ಜರುಗಿಸಬೇಕೆಂದು ಯಾಕೂಬ್ ಜಾಕೋಬ್ ದರ್ಶಿ ಮತ್ತು ಮುನ್ಸಿಪಲ್ ಕಾರ್ಮಿಕರ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಡಿ.ಸ್ಯಾಮ್‌ಸನ್ ನೇತೃತ್ವದಲ್ಲಿ ಉಪ–ತಹಶೀಲ್ದಾರ್ ಆದ ಗೌಡಪ್ಪ ಬನಕದಿನ್ನಿರವರ ಮೂಲಕ ಪೊಲೀಸರಿಗೆ ದೂರು ನೀಡಲಾಗಿದೆ.

ಇತ್ತೀಚಿಗೆ ತುಮಕೂರು ಮತ್ತು ಬೆಂಗಳೂರಿನ ಅಪಾರ್ಟ್‌ಮೆಂಟ್ ಒಂದರಲ್ಲಿ ಪೌರಕಾರ್ಮಿಕರು ಯಾವುದೇ ಸುರಕ್ಷತಾ ಸಾಧನಗಳಿದ್ದೆ ಕೆಲಸ ನಿರ್ವಹಿಸಿದ್ದರಿಂದ ಸಾವು ಸಂಭವಿಸಿದೆ. ಈ ಘಟನೆಗಳು ಇನ್ನೂ ಹಸಿರಾಗಿರುವಾಗಲೇ ದಾಂಡೇಲಿಯಲ್ಲಿ ಮತ್ತೆ ಅಂತಹದೇ ಘಟನೆ ನಡೆದಿದ್ದು, ಸರ್ಕಾರಿ ಇಲಾಖೆಯು ಪೌರಕಾರ್ಮಿಕರನ್ನು ಸುರಕ್ಷತೆ ಇಲ್ಲದ ಸ್ಥಳದಲ್ಲಿ ಕೆಲಸಕ್ಕೆ ನಿಯೋಗಿಸಿದ್ದು ಖಂಡನೀಯ.

ಅಲ್ಲಿನ ಪರಿಸ್ಥಿತಿಯಲ್ಲಿ ಪರಿಶೀಲಿಸಲು ಸ್ಥಳಕ್ಕೆ ಭೇಟಿ ನೀಡಿದ, ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ ಕಾಂ॥ಯಮುನಾ ಗಾಂವ್ಕರ್ ಪೌರಕಾರ್ಮಿಕ ಯಾಕೂಬ್ ಜಾಕೋಬ್ ದರ್ಶಿರವರನ್ನು ಭೇಟಿ ಮಾಡಿದರು. ಆ ಸ್ಥಳವನ್ನು ವೀಕ್ಷಣೆ ಮಾಡಿದರು. ಮಠ ಮತ್ತು ಅಕ್ಕ–ಪಕ್ಕದ ಮನೆಗಳಿಂದ ಹೇಸಿಗೆ ಹರಿದು ಬರುತ್ತಿದ್ದು ಅದನ್ನು ಸ್ವಚ್ಛಗೊಳಿಸಲು ಯಂತ್ರವನ್ನು ಬಳಸಲೇಬೇಕಾಗಿದೆ. ಘಟನೆಗೆ ಸಂಬಂಧಿಸಿದ ಒಳಚರಂಡಿಯು ಸುರಕ್ಷತಾ ಯಂತ್ರಗಳನ್ನು ಬಳಸಿಯೇ ಸ್ವಚ್ಛಗೊಳಿಸಬೇಕು ಎಂಬುದು ಸ್ಪಷ್ಟವಾಗಿದೆ.

ಕೆಲಸಕ್ಕೆ ನಿಯೋಜಿಸಿದ ಅಧಿಕಾರಿಯು ಘಟನೆಯ ನಂತರ ಊರು ಬಿಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪೋಲಿಸರಿಗೆ ದೂರು ದಾಖಲಾಗಿದ್ದು, ಕಾನೂನಿನ ಪ್ರಕಾರ ಕಲಂಗಳನ್ನು ಹಾಕಿದ್ದಾರೆ. ಈ ನಡುವೆ ಈಗ ಸುಳ್ಳು ಪ್ರಚಾರಗಳು ನಡೆಯುತ್ತಿವೆ. ಘಟನೆ ನಡೆದೇ ಇಲ್ಲವೆಂದು, ಆ ಫೋಟೋಗಳು ಬೇಕೆಂದೇ ಸೃಷ್ಟಿ ಮಾಡಿದ್ದು ಮತ್ತು ಶಂಕರಮಠದ ಸ್ಥಳದ್ದಲ್ಲವೆಂದು, ಅಧಿಕಾರಿ ನೌಕರಿಗೆ ಸಂಚಕಾರ ತಂದಿದ್ದಾರೆಂದು ಸುಳ್ಳು ಪ್ರಚಾರಗಳು ನಡೆಯುತ್ತಿವೆ.

ದಾಂಡೇಲಿ ನಗರಸಭೆಯಲ್ಲಿ ನಡೆದ ಇಂತಹ ಘಟನೆಯನ್ನು ಸಿಐಟಿಯು ರಾಜ್ಯ ಸಮಿತಿ ಮತ್ತು ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘಟನೆಯು ಖಂಡಿಸಿದೆ. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸಯ್ಯದ್ ಮುಜೀಬ್‌ರವರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಸಫಾಯಿ ಕರ್ಮಚಾರಿಗಳ ಸಂರಕ್ಷಣಾ ಕಾಯ್ದೆಗೆ ಆಗಿರುವ ತಿದ್ದುಪಡಿಗಳನ್ನು ವ್ಯಾಪಕವಾಗಿ ಪ್ರಚಾರಪಡಿಸುವ ಮತ್ತು ಸಮಾಜದಲ್ಲಿ ಈ ಹೀನ ಪದ್ಧತಿಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳು ತುಂಬಾ ಕೆಲಸ ಮಾಡಬೇಕಾಗಿದೆ ಎಂದು ಹೇಳಿಕೆ ಅಭಿಪ್ರಾಯ ಪಟ್ಟಿದ್ದು, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಮೊಕದ್ದಮೆ ಹೂಡಿ ಅವರನ್ನು ಬಂಧಿಸುವಂತೆಯೂ ಸಹ ಆಗ್ರಹಿಸಿದೆ. ■

ಕಾಂ. ಪ್ರಸನ್ನ ಕುಮಾರ್ ನೆನಪು .... ಪುಟ 16 ರಿಂದ


ಕೂಲಿ ಸಲಹಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಯೋಗೇಶ್ವರಿ ವಿಜಯ್ ಅವರು ಮಾತನಾಡಿ ತಾವು ನೇಮಕವಾದಾಗ ಅಭಿನಂದಿಸಲು ಪ್ರಸನ್ನ ಅವರು ಬಂದಿದ್ದರು. ಅವರ ಮಾತುಗಳು ನನ್ನ ಮನಸ್ಸು ತಟ್ಟಿತು. ಅಂದಿನಿಂದ ಅವರು ನನಗೆ ಇಲ್ಲಿಯವರೆಗೆ ಹಿರಿಯ ಮಾರ್ಗದರ್ಶಕರಾಗಿದ್ದರು ಎಂದು ಬಾವುಕರಾದರು. ಐಎನ್‌ಟಿಯುಸಿ ರಾಜ್ಯ ಅಧ್ಯಕ್ಷರಾದ ಶಾಂತಕುಮಾರ್, ಬಿಎಂಎಸ್ ರಾಜ್ಯ ಉಪಾಧ್ಯಕ್ಷರಾದ ಡಿ.ವಿ. ರಾಮಮೂರ್ತಿ, ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಎಂ.ಎಸ್.ಪ್ರಕಾಶ್, ಎಚ್.ಎಂ.ಎಸ್. ಮುಂಖಂಡರಾದ ಮಂಜುನಾಥ್, ಟಿಯುಸಿಸಿ ರಾಜ್ಯ ಅಧ್ಯಕ್ಷರಾದ ಜಿ. ಆರ್. ಶಿವಶಂಕರ್, ಎಐಸಿಸಿಟಿಯು ಜಿಲ್ಲಾ ಅಧ್ಯಕ್ಷ ಅಪ್ಪಣ್ಣ, ರಾಜ್ಯ ರೈತ ಸಂಘದ ರಾಜ್ಯ ಮುಖಂಡರು ಹಾಗೂ ಪ್ರಸನ್ನರ ಒಡನಾಡಿಯೂ ಆದ ವೀರಸಂಗಯ್ಯ ಬಿಎಸ್‌ಎನ್‌ಎಲ್‌ಇಯೂ ಮುಖಂಡರಾದ ಸಿ. ಕೆ. ಗುಂಡಣ್ಣ ಮುಂತಾದವರು ಮಾತನಾಡಿದರು.


ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ವಿಜೆಕೆ ನಾಯರ್ ಅವರು ಮಾತನಾಡಿ ಪ್ರಸನ್ನ ನನಗಿಂತ ಕನಿಷ್ಟ 25 ವರ್ಷ ಚಿಕ್ಕವರು. ಪ್ರಸನ್ನ ಕನಿಷ್ಟ ಇನೂ 20–25 ವರ್ಷ ಕಾರ್ಮಿಕ ಚಳುವಳಿಗೆ ಮಾರ್ಗದರ್ಶನ ಮಾಡಬೇಕಾಗಿತ್ತು. ದುರದೃಷ್ಟವಶಾತ್ ಅವರು ನಮ್ಮನ್ನು ಅಗಲಿದ್ದಾರೆ.


ಸಿಐಟಿಯು ಎಂದರೆ ಕೇವಲ ಒಂದು ಕಾರ್ಮಿಕ ಸಂಘಟನೆ ಅಲ್ಲ. ಅದು ಭಾರತೀಯ ಟ್ರೇಡ್ ಯೂನಿಯನ್‌ಗಳ ಕೇಂದ್ರವಾಗಬೇಕು ಎಂಬುದು ಪಿ. ರಾಮಮೂರ್ತಿ–ಬಿಟಿ ರಣದಿವೆ ಮುಂತಾದ ಅದನ್ನು ಸ್ಥಾಪಿಸಿದ ಮುಖಂಡರ ಕನಸಾಗಿತ್ತು. ಕರ್ನಾಟಕದಲ್ಲಿ ಈ ದೃಷ್ಟಿ ಇಟ್ಟುಕೊಂಡು ಕಾಂ. ಪ್ರಸ್ನನ್ನ ಕೆಲಸ ಮಾಡುತ್ತಿದ್ದರು. ಸಿಐಟಿಯು ಮಾತ್ರವಲ್ಲ ಅವರು ಒಟ್ಟು ಕಾರ್ಮಿಕ ಚಳುವಳಿಯ ಒಗ್ಗಟ್ಟಿಗಾಗಿ ಕೆಲಸ ಮಾಡುತ್ತಿದ್ದರು. ಅವರಿಲ್ಲದ್ದು ಕಾರ್ಮಿಕ ಚಳುವಳಿಗೆ ದೊಡ್ಡ ನಷ್ಟ ಎಂದರು.


ಪ್ರಸನ್ನ ಅವರಿಲ್ಲದ ಸ್ಥಿತಿಯಲ್ಲಿ ಸಾಮಾಹಿಕವಾಗಿ ಸಿಐಟಿಯು ರಾಜ್ಯ ಕಾರ್ಮಿಕ ಕೇಂದ್ರವು ಜವಾಬ್ದಾರಿ ಹಂಚಿಕೊಂಡು ಕೆಲಸ ಮಾಡಲು ತೀರ್ಮಾನಿಸಿರುವ ಬಗೆಗೆ ಸಭೆಯಲ್ಲಿ ತಿಳಿಸಲಾಯಿತು. ಕೊನೆಯಲ್ಲಿ ಹಾಜರಿದ್ದ ನೂರಾರು ಸಂಗಾತಿಗಳು ಪ್ರಸನ್ನಕುಮಾರ್ 'ಅಮರ್ ರಹೇ ಹೈ' ಪ್ರಸನ್ನಕುಮಾರ್ ಅವರು ಬೆಳೆಸಿದ ಚಳುವಳಿಯನ್ನು ಮುನ್ನಡೆಸುತ್ತೇವೆ ಎಂದು ಘೋಷಣೆ ಕುಗುತ್ತಾ ಪ್ರಸನ್ನರ ಭಾವಚಿತ್ರಕ್ಕೆ ತಮ್ಮ ನಮನಗಳನ್ನು ಸಲ್ಲಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಕಾರ್ಯಕ್ರಮ ನಿರೂಪಿಸಿದರು ಮತ್ತೊರ್ವ ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್ ಕೊನೆಯಲ್ಲಿ ವಂದಿಸಿದರು. ■

ಸೆಕ್ಯುಲರ್‌ವಾದ: ಸವಾಲುಗಳ ಬಗ್ಗೆ ಸಂವಾದ









ಬೆಂಗಳೂರಿನಲ್ಲಿ ಜನವರಿ 23ರಂದು 'ಪುಸ್ತಕಪ್ರೀತಿ' ತನ್ನ 'ತಿಂಗಳ ಮಾತುಕತೆ' ಕಾರ್ಯಕ್ರಮದ ಅಂಗವಾಗಿ 'ಸೆಕ್ಯುಲರ್‌ವಾದ: ಸವಾಲುಗಳು' ಎಂಬ ವಿಷಯದ ಬಗ್ಗೆ ಸಂವಾದ ಏರ್ಪಡಿಸಿತ್ತು. ಕಾರ್ಯಕ್ರಮದಲ್ಲಿ ಆ ವಿಷಯಕ್ಕೆ ಸಂಬಂಧಿಸಿದ ನಾಲ್ಕು ಪುಸ್ತಕಗಳನ್ನಿಟ್ಟುಕೊಂಡು ಅದರ ಸುತ್ತ ಚರ್ಚೆ ಏರ್ಪಡಿಸಲಾಗಿತ್ತು. ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್‌ಮಟ್ಟು ಆಶಯ ಭಾಷಣ ಮಾಡಿದರು.

ಪ್ರೊ. ನಗರಗೆರೆ ರಮೇಶ್ ಅವರು ಪ್ರೊ. ಅಮರ್ತ್ಯ ಸೇನ್ ಅವರ 'ಸೆಕ್ಯುಲರ್‌ವಾದ ಮತ್ತು ಅದರ ಬಗೆಗಿನ ಅತೃಪ್ತಿಗಳು' (ಅನು: ಎಸ್. ಶಿವಾನಂದ ಸಾಸ್ವೆಹಳ್ಳಿ) ಮತ್ತು ಎ.ಜಿ.ನೂರಾಣಿ ಮತ್ತು ಮಾರ್ಝಿಯಾ ಕಾಸೊಲರಿ ಅವರ "ಸಂಘ ಪರಿವಾರದ ಇಟಾಲಿಯನ್ ಕನೆಕ್ಶನ್" (ಅನು: ಟಿ. ಯಶವಂತ) ಪುಸ್ತಕದ ಪರಿಚಯ ಮಾಡುತ್ತಾ ವಿಷಯದ ಬಗ್ಗೆ ಸಂವಾದದಲ್ಲಿ ಭಾಗವಹಿಸಿದರು. ಬಿ.ಶ್ರೀಪಾದ ಅವರ "ಹಿಂದುತ್ವ ರಾಜಕಾರಣ : ಅಂದು-ಇಂದು-ಮುಂದು" ಮತ್ತು "ಬಹುಸಂಖ್ಯಾತವಾದ – ಚಿಂತಕರು ಕಂಡಂತೆ" ಪುಸ್ತಕಗಳನ್ನಿಟ್ಟು ಕೊಂಡು ಡಾ. ರಂಗನಾಥ ಕಂಟನಕುಂಟೆ ವಿಷಯ ಮಂಡನೆ ಮಾಡಿದರು. ಸಂವಾದದಲ್ಲಿ ಲೇಖಕರಾದ ಬಿ.ಶ್ರೀಪಾದ ಹಾಗೂ ಅನುವಾದಕರುಗಳಾದ ಎಸ್. ಶಿವಾನಂದ ಸಾಸ್ವೆಹಳ್ಳಿ ಮತ್ತು ಟಿ.ಯಶವಂತ್ ಮತ್ತು ಸಭಿಕರು ಭಾಗವಹಿಸಿದ್ದರು.

ಭಾರತದಲ್ಲಿ ಸೆಕ್ಯುಲರ್‌ವಾದದ ಬಗೆಗೆ ಬಂದಿರುವ (ಪ್ರೊ. ಅಮರ್ತ್ಯ ಸೇನ್ ಗುರುತಿಸಿರುವ) ಆರು ಪ್ರಮುಖ ಟೀಕೆಗಳ ಬಗ್ಗೆ ಚರ್ಚೆ, ಅದಕ್ಕೆ ಉತ್ತರಗಳು; ಭಾರತದ ಇತಿಹಾಸದಲ್ಲಿ ಆಳುವ ರಾಜರ ಮತ್ತು ಜನತೆ ಬೆಳೆಸಿದ ಭಾರತಕ್ಕೆ ವಿಶಿಷ್ಟವಾದ ಸೆಕ್ಯುಲರ್ ವಾದದ ರೂಪಗಳು; ಭಾರತದ ಸೆಕ್ಯುಲರ್ ವಾದಕ್ಕೆ ಗಂಭೀರ ಸವಾಲು ಒಡ್ಡುತ್ತಿರುವ ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತ ಕೋಮುವಾದ, ಹಿಂದೂ/ ಮುಸ್ಲಿಂ ಮೂಲಭೂತವಾದ, ಹುಸಿ ರಾಷ್ಟ್ರೀಯವಾದ, ಫ್ಯಾಸಿಸಂ, ಬಹುಸಂಖ್ಯಾತವಾದ ಮುಂತಾದ 'ವಾದ'ಗಳ ಸವಾಲಿನ ನಿರ್ದಿಷ್ಟ ರೂಪಗಳು ಹಾಗೂ ಅವುಗಳ ವಿರುದ್ಧ ಹೋರಾಡುವ ಬಗೆ; ಸೆಕ್ಯುಲರ್ ವಾದ, ಸಮಾಜವಾದ ಮುಂತಾದವುಗಳನ್ನು ಪಾಶ್ಚಿಮಾತ್ಯ ಭಾರತೀಯ ನೆಲದ್ದೂ ಅಲ್ಲ ಎನ್ನುವ ಸಂಘ ಪರಿವಾರದ ಸಿದ್ಧಾಂತದ ಸ್ಥಾಪಕರ ಮೇಲೆ ಮುಸೊಲಿನಿಯ ಫ್ಯಾಸಿಸಂ ಹಾಗೂ ಹಿಟ್ಲರನ ನಾಜಿವಾದ ಬೀರಿದ ದಟ್ಟ ಪ್ರಭಾವ; 'ದೇವರು ನೀಡಿದ ತಾಯಿನಾಡಿನ ವಾಗ್ದಾನ'ದ ಹೆಸರಲ್ಲಿ ಪ್ಯಾಲೆಸ್ತೀನಿ ಮೂಲನಿವಾಸಿಗಳನ್ನು ನಾಜೀ ವಿಧಾನ ಬಳಸಿಯೇ ಹಿಂಸಿಸುತ್ತಿರುವ ಹಿಟ್ಲರನ ಬಲಿಪಶುಗಳಾಗಿದ್ದ ಯಹೂದಿಯರ ವಂಶಜರ ಜತೆ ಸಂಘ ಪರಿವಾರದ ವಿಶೇಷ ಘನಿಷ್ಟ ನಂಟು ಮತ್ತು ವ್ಯೂಹಾತ್ಮಕ ಸಹಕಾರ: ಹಿಂದುತ್ವ ರಾಜಕಾರಣ ಸ್ವಾತಂತ್ರ್ಯ-ಪೂರ್ವದ ಅವಧಿಯಲ್ಲಿ, ಸ್ವಾತಂತ್ರ್ಯದ ನಂತರ ತುರ್ತು ಪರಿಸ್ಥಿತಿಯ ವರೆಗೆ, 1977-1984 ಅವಧಿಯಲ್ಲಿ, 1984-1998ವರೆಗಿನ ರಾಮಜನ್ಮಭೂಮಿ ರಾಜ-ಕಾರಣದ ಅವಧಿಯಲ್ಲಿ, 1998-2004ವರೆಗೆ ಕೇಂದ್ರ ಸರಕಾರ ನಡೆಸಿದ ಅವಧಿಯಲ್ಲಿ, 2004-2014 ವರೆಗೆ, ಈಗ 2014ರಿಂದೀಚೆಗೆ – ಹೀಗೆ ವಿವಿಧ ಅವಧಿಯಲ್ಲಿ ಅದು ಹೊಸೆದ ತಂತ್ರ, ವ್ಯೂಹಗಳು; ಈ ಅವಧಿಗಳ ಉದ್ದಕ್ಕೂ ಬಳಸಿದ – ಶಿಕ್ಷಣದ ಕೇಸರೀಕರಣ, ಕೋಮುದಂಗೆಗಳು, ಬಲಪಂಥೀಯ ಆರ್ಥಿಕ ನೀತಿಗಳು – ಪ್ರಮುಖ ನೆಲೆ ಮತ್ತು ಅಸ್ತ್ರಗಳ ಬಳಕೆ; ಭಾರತ ಮತ್ತು ನೆರೆಯ ದೇಶಗಳಲ್ಲಿ ಭಾಷೆ, ಜಾತಿ, ಜನಾಂಗ, ಧರ್ಮದ ಆಧರಿಸಿ ಬೆಳೆಯುತ್ತಿರುವ ಬಹುಸಂಖ್ಯಾತವಾದ ಸ್ವರೂಪ; ಸೆಕ್ಯುಲರ್ ವಾದ-ವಿರೋಧಿ ವಿವಿಧ ವಾದಗಳ ವಿರುದ್ಧ ಹೋರಾಟದಲ್ಲಿ ಜನತೆಯ ಧಾರ್ಮಿಕ ನಂಬಿಕೆ/ಆಚರಣೆಗಳು, ಜಾತಿ ಅಸ್ಮಿತೆಯನ್ನು ನಿರ್ವಹಿಸಬೇಕಾದ ರೀತಿ; ಜನತೆಯ 'ಕಾಮನ್ಸ ಸೆನ್ಸ್' ಆಗಿರುವ ಕೋಮುವಾದ, ಹುಸಿ ಧಾರ್ಮಿಕತೆ/ ರಾಷ್ಟ್ರೀಯವಾದಗಳನ್ನು ಹೋಗಲಾಡಿಸುವ ಬಗೆ; – ಹೀಗೆ ಹತ್ತು ಹಲವು ಆಯಾಮಗಳ ಬಗ್ಗೆ ಸಂವಾದ ನಡೆಯಿತು.

ನಾಳಿನ ಕಾರ್ಯಕ್ರಮಗಳು

1. ಫೆಬ್ರವರಿ 6 ರಂದು ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿಭಟನೆ
2. ಫೆಬ್ರವರಿ 6-7ರಂದು ಸ್ಕೀಂ ಕಾರ್ಮಿಕರ 24/48 ಗಂಟೆ ಪ್ರತಿಭಟನಾ ಧರಣಿ ಸಂಸತ್ ಸದಸ್ಯರ ಕಛೇರಿ ಮುಂದೆ.
3. ಫೆಬ್ರವರಿ 05, 2016ರಂದು ವಿವೇಕಾನಂದ ಹಿಂದುತ್ವವಾದಿಯೇ ? ಒಂದು ವೈಚಾರಿಕ ಸಂವಾದ, – ಸಿಐಟಿಯು ಕಛೇರಿ, ಆರ್.ಸಿ.ರಸ್ತೆ, ಹಾಸನ.
4. ಫೆಬ್ರವರಿ 7 ಮತ್ತು 8ರಂದು ಅಂಬೇಡ್ಕರ 125ನೇ ವರ್ಷಾಚರಣೆ ಅಂಗವಾಗಿ ವಾಚನಾಭಿರುಚಿ ಶಿಬಿರ – ದಲಿತ ಆತ್ಮಕತೆಗಳು, ಸಹಯಾನ, ಕೆರೆಕೋಣ, ಉತ್ತರ ಕನ್ನಡ ಜಿಲ್ಲೆ.
5. ಫೆಬ್ರವರಿ 16, 2016ರಂದು ರಸ್ತೆ ಸಾರಿಗೆ ಕಾರ್ಮಿಕರ ರಾಜ್ಯ ಸಮಾವೇಶ, ಇ.ಎಂ.ಎಸ್.ಭವನ, ಬೆಂಗಳೂರು.
6. ಮಾರ್ಚ್ 01, ರಸ್ತೆ ಸಾರಿಗೆ ಕಾರ್ಮಿಕರ ದೆಹಲಿ ಚಲೋ



ಈಗ ಹೇಳಲಾಗುತ್ತಿರುವ 'ಜನಸಮೂಹಗಳ ಧೋರಣೆ (ಮಾಸ್ ಲೈನ್)ಇರುವ ಕ್ರಾಂತಿಕಾರಿ ಪಕ್ಷ'ಕ್ಕೂ ಹಿಂದೆ ಸಾಲ್ಕಿಯಾ ಪ್ಲೀನಂ ನಿರ್ಣಯದಲ್ಲಿ ಹೇಳಲಾದ 'ಜನಸಮೂಹಗಳ (ಮಾಸ್) ಕ್ರಾಂತಿಕಾರಿ ಪಕ್ಷ' ಕ್ಕೂ ಏನು ವ್ಯತ್ಯಾಸ ?

–ಆರ್.ಜವಾಹರ್, ಚೆನ್ನೈ

ಸಾಲ್ಕಿಯಾ ಪ್ಲೀನಂನಲ್ಲಿ 'ಜನಸಮೂಹಗಳ ಕ್ರಾಂತಿಕಾರಿ ಪಕ್ಷ' ಕಟ್ಟಲು ಕರೆ ನೀಡಲಾಯಿತು. ಸಾಲ್ಕಿಯಾ ಪ್ಲೀನಂನ ಮುಂದೆ ಇದ್ದಿದ್ದು, ಬೆಳೆಯುತ್ತಿರುವ ಜನಸಮೂಹಗಳ ಹೋರಾಟಗಳು ಹಾಗೂ ಪಕ್ಷದ ಪ್ರಭಾವಗಳಿಗಿಂತ, ಪಕ್ಷದ ಸದಸ್ಯತ್ವಕ್ಕೆ ಸೇರ್ಪಡೆ ಹಿಂದೆ ಬಿದ್ದ (ಅಥವಾ ವಿಳಂಬವಾದ) ಸಮಸ್ಯೆ. ಪಕ್ಷದ ಸದಸ್ಯತ್ವದಲ್ಲಿ ಹೆಚ್ಚಳ, ಹೆಚ್ಚಾಗಿದ್ದ ಪಕ್ಷದ ಪ್ರಭಾವವನ್ನು ಬಿಂಬಿಸುತ್ತಿರಲಿಲ್ಲ ಎಂಬುದ ಅಂದಿನ ಸಮಸ್ಯೆಯಾಗಿತ್ತು.

ಕೊಲ್ಕತ್ತಾ ಪ್ಲೀನಂ ಮುಂದೆ ಇರುವ ಸಮಸ್ಯೆ ಬೇರೆಯದೇ ಆಗಿದೆ. ಪಕ್ಷದ ಸದಸ್ಯತ್ವ ಹಲವು ವರ್ಷಗಳಿಂದ ಏರುತ್ತಿದ್ದರೂ, ಜನಸಮೂಹಗಳ ನಡುವೆ ಪಕ್ಷದ ಪ್ರಭಾವ ಹೆಚ್ಚಿರಲಿಲ್ಲ. ಪಕ್ಷದ ಸದಸ್ಯತ್ವ ವಿಸ್ತಾರ ಮಾಡುತ್ತಲೇ ಸದಸ್ಯತ್ವದ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕೆಂಬುದನ್ನು ಸಾಲ್ಕಿಯಾ ಪ್ಲೀನಂ ಒತ್ತಿ ಹೇಳಿತ್ತು. ಆದರೆ ಈಗಿರುವ ಪಕ್ಷದ ಸದಸ್ಯತ್ವದ ಗುಣಮಟ್ಟ, ಜನಸಮೂಹಗಳ ನಡುವೆ ಪಕ್ಷದ ಪ್ರಭಾವ ಹೆಚ್ಚಿಸಲು ಇರಬೇಕಾದ ಮಟ್ಟದಲ್ಲಿ ಇಲ್ಲ. ಜನಸಮೂಹಗಳ ನಡುವೆ ಪ್ರಭಾವದ ಕೊರತೆ-ಯ ಹಿನ್ನೆಲೆಯಲ್ಲಿ, ವರ್ಗ ಹೋರಾಟಗಳು ಮತ್ತು ಚಳುವಳಿಗಳ ಮೂಲಕ ಜನಸಮೂಹಗಳಲ್ಲಿ ಪಕ್ಷದ ನೆಲೆಯನ್ನು ವಿಸ್ತರಿಸುವ ಆವಶ್ಯಕತೆ ಬಗ್ಗೆ ಒತ್ತು ಕೊಟ್ಟಿದೆ. ಆದ್ದರಿಂದ ಈ ಕಾರ್ಯಭಾರವನ್ನು ನಿರ್ವಹಿಸಬಲ್ಲ ಸದಸ್ಯತ್ವದ ಗುಣಮಟ್ಟ ಮತ್ತು ಪಕ್ಷದ ಕ್ರಾಂತಿಕಾರಿ ಸ್ವರೂಪದ ಬಗ್ಗೆ ಒತ್ತು ಕೊಡಲಾಗಿದೆ.

ಜನಸಮೂಹಗಳ ಮಧ್ಯೆ ಪಕ್ಷದ ನೆಲೆಯನ್ನು ವಿಸ್ತರಿಸುವುದು ಅಂದರೆ ಪಕ್ಷದ ಸದಸ್ಯತ್ವವನ್ನು ವಿಸ್ತರಿಸುವುದು ಎಂಬುದು ಪಕ್ಷದ ಈ ಹಿಂದಿನ ಅನುಭವವಾಗಿತ್ತು. ಜನಸಮೂಹಗಳ ಮಧ್ಯೆ ಒಂದು ಕಮ್ಯುನಿಸ್ಟ್ ಪಕ್ಷದ ನೆಲೆಯ ಸ್ವರೂಪವನ್ನು ಬರಿಯ ಅದರ ಸದಸ್ಯತ್ವದ ಬಲದಿಂದಷ್ಟೇ ನಿರ್ಧರಿಸುವುದು ಸಾಧ್ಯವಿಲ್ಲ. ಕಾರ್ಮಿಕ ವರ್ಗದ ಮತ್ತು ವಿವಿಧ ದುಡಿಯುವ ಜನರ ವಿಭಾಗಗಳಲ್ಲಿ ಪಕ್ಷದ ನೆಲೆ ಮತ್ತು ಇನ್ನೂ ಮುಖ್ಯವಾಗಿ ಅದಕ್ಕಿರುವ ವ್ಯಾಪಕ ರಾಜಕೀಯ ಪ್ರಭಾವ ಮತ್ತು ತನ್ನ ಕರೆಗೆ ಜನಸಮೂಹಗಳನ್ನು ಅಣಿ ನೆರೆಸುವ ಸಾಮರ್ಥ್ಯ – ಇವೆಲ್ಲಾ ಜನಸಮೂಹಗಳ ಮಧ್ಯೆ ಒಂದು ಕಮ್ಯುನಿಸ್ಟ್ ಪಕ್ಷದ ನಿಜವಾದ ನೆಲೆಯ ಸ್ವರೂಪವನ್ನು ನಿರ್ಧರಿಸುವ ಅಂಶಗಳು.

'ಜನಸಮೂಹಗಳ ಕ್ರಾಂತಿಕಾರಿ ಪಕ್ಷ'ದ ಪರಿಕಲ್ಪನೆ ಸರಿಯಾದ್ದೇ. 'ಜನಸಮೂಹಗಳ ಕ್ರಾಂತಿಕಾರಿ ಪಕ್ಷ'ವನ್ನು ಕಟ್ಟುವ ಕಾರ್ಯಭಾರವನ್ನು ಪಕ್ಷದ ಸಮಕಾಲೀನಗೊಳಿಸಿದ ಕಾರ್ಯಕ್ರಮದಲ್ಲಿ ನಿಗದಿ ಮಾಡಲಾಗಿದೆ. ಆದರೆ ಇಂದಿನ ಪಕ್ಷದ ಸಂಘಟನಾ ಸ್ಥಿತಿಯಲ್ಲಿ, ಜನಸಮೂಹಗಳ ಮಧ್ಯೆ ಪಕ್ಷದ ನೆಲೆಯನ್ನು ವಿಸ್ತರಿಸಬಲ್ಲ ಗುಣಮಟ್ಟದ ಸದಸ್ಯತ್ವ ಇರುವ ಪಕ್ಷ ಕಟ್ಟಬೇಕಾಗಿದೆ. 'ಜನಸಮೂಹಗಳ ಧೋರಣೆ' (ಮಾಸ್ ಲೈನ್) ಜನಸಮೂಹಗಳ ಮಧ್ಯೆ ಪಕ್ಷದ ನೆಲೆಯನ್ನು ವಿಸ್ತರಿಸಲು ಸಹಾಯಕವಾಗಬೇಕು. ಅದಕ್ಕಾಗಿಯೇ 'ಜನಸಮೂಹಗಳ ಧೋರಣೆ'ಯನ್ನು ಅಂಗೀಕರಿಸುವುದನ್ನು ಪ್ಲೀನಂ ವರದಿ/ನಿರ್ಣಯಗಳು ಒತ್ತಿ ಹೇಳುತ್ತವೆ.

ಆದ್ದರಿಂದಲೇ ಸಂಘಟನಾ ನಿರ್ಣಯದಲ್ಲಿ ಈ ಘೋಷಣೆಗಳನ್ನು ಕೊಡಲಾಗಿದೆ:

ಅಖಿಲ ಭಾರತ ಜನಸಮೂಹಗಳ ನೆಲೆ ಇರುವ ಸಿಪಿಐ(ಎಂ) ಕಟ್ಟಲು ಮುನ್ನಡೆಯೋಣ!

ಜನಸಮೂಹಗಳ ಧೋರಣೆ ಇರುವ ಕ್ರಾಂತಿಕಾರಿ ಪಕ್ಷ ಕಟ್ಟುವತ್ತ ಮುನ್ನಡೆಯೋಣ!

*** ಈ ಪ್ರಶ್ನೆ 'ಪೀಪಲ್ಸ್ ಡೆಮೊಕ್ರಸಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಇದು ಎಲ್ಲರಲ್ಲೂ ಏಳುವ ಪ್ರಶ್ನೆಯಾದ್ದರಿಂದ ಅದರ ಅನುವಾದವನ್ನು ಪ್ರಕಟಿಸಲಾಗುತ್ತಿದೆ. ಈ ಉತ್ತರದಲ್ಲಿ ಇಂಗ್ಲೀಷಿನ 'ಮಾಸ್' ಎಂಬುದಕ್ಕೆ ಸಂವಾದಿಯಾಗಿ, ಸಾಮಾನ್ಯವಾಗಿ ಬಳಸುವ ಆದರೆ ನಿಖರವಲ್ಲದ (ಅದರಲ್ಲೂ ಈ ಪ್ರಶ್ನೆಯ ಸಂದರ್ಭದಲ್ಲಿ ತಪ್ಪು ಅರ್ಥ ಕೊಡಬಹುದಾದ) 'ಸಾಮೂಹಿಕ' (ನಿಜವಾಗಿಯೂ ಕಲೆಕ್ಟಿವ್ ಗೆ ಸಂವಾದಿಯಾದ) ಎಂಬ ಪದದ ಬದಲು, 'ಜನಸಮೂಹ' ಎಂಬ ಪದ ಬಳಸಲಾಗಿದೆ ಎಂದು ಗಮನಿಸಬೇಕು**

(ನಿಮ್ಮ ಪ್ರಶ್ನೆಗಳನ್ನು ಅನಿಸಿಕೆಗಳನ್ನು js_weekly@yahoo.com ಗೆ ಕಳಿಸಿ, ಪತ್ರಿಕೆಯ ಕೊನೆಯಲ್ಲಿರುವ ವಿಳಾಸಕ್ಕೆ ಪತ್ರ ಬರೆಯಿರಿ.



ಅಗ್ನಿ ವರದಿಗಾರ ರಿಯಾಜ್ ಕಚ್ ಗಲ್ ಮೇಲೆ ರಾಮಸೇನೆ ಮುಖಂಡ ಮಹೇಶ್ ಮತ್ತು ಮಧುಸೂದನ ಹಲ್ಲೆ ನಡೆಸಿದ್ದಾರೆ. ತಮ್ಮ ಬಗ್ಗೆ ವರದಿ ಮಾಡಿದ್ದಕ್ಕಾಗಿ ಈ ಹಲ್ಲೆನಡೆಸಿದ್ದಾರೆ. ತಮ್ಮ ಧೋನಂಬರ್ ದಂಧೆಯ ಬಗ್ಗೆ ವರದಿ ಮಾಡಿದ್ದಕ್ಕೆ ಈ ಹಲ್ಲೆ ನಡೆದಿದೆ. ವಾರದ ಹಿಂದೆ ಮನೆನುಗ್ಗಿ ಬೆದರಿಕೆ ಹಾಕಿದ್ದ ಇದೇ ವ್ಯಕ್ತಿಗಳ ವಿರುದ್ಧ ರಿಯಾಜ್ ಕೊಪ್ಪ ಠಾಣೆಗೆ ದೂರು ನೀಡಿದ್ದರು. ಆಗ ಪೊಲೀಸರು ಯಾವುದೇ ಕ್ರಮಕೈಗೊಂಡಿರಲಿಲ್ಲ. ಈಗ ದೈಹಿಕ ಹಲ್ಲೆ ನಡೆದಿದೆ. ಈ ಬಾರಿಯೂ ಕೊಪ್ಪ ಪೊಲೀಸರು FIR ದಾಖಲಿಸಿಲ್ಲ. ಸ್ಥಳೀಯ ಬಿಜೆಪಿ ಶಾಸಕರಾದ ಜೀವರಾಜ್ ಕುಮ್ಮಕ್ಕೇ ಇದಕ್ಕೆಲ್ಲ ಕಾರಣ ಎಂಬುದು ಬಹಿರಂಗ ಸತ್ಯ. ಜೀವರಾಜ್ ವಿರುದ್ಧ ರಿಯಾಜ್ ಅಗ್ನಿಯಲ್ಲಿ ವರದಿ ಮಾಡಿದ್ದರು.

– ಮುನೀರ್ ಕಾಟಿಪಳ್ಳ

RNI No. KARKAN /2006/17926 Posted on every Satuarday
Licensed to Post without prepayment License No. WPP-283



ಕಾಂ. ಪ್ರಸನ್ನ ಕುಮಾರ್ ನೆನಪು – ಮತ್ತು ಪ್ರೀತಿಪೂರ್ವಕ ಶ್ರದ್ಧಾಂಜಲಿ

– ಆರ್. ರಾಮಕೃಷ್ಣ

ಜನವರಿ 22, 2016. ಅದು ಒಂದು ವಿಷಾದ ಘಳಿಗೆ. ಮಧ್ಯಾಹ್ನ 3.00 ಸುಮಾರಿಗೇ ಜನ ಬೆಂಗಳೂರು ಕಬ್ಬನ್ ಪಾರ್ಕಿನ ಸಚಿವಾಲಯ ನೌಕರರ ಸಂಘದ ಸಭಾಂಗಣದಲ್ಲಿ ಸೇರುತ್ತಿದ್ದರು. ಎಲ್ಲರ ಮನಸ್ಸಲ್ಲಿ ಮಡುಗಟ್ಟಿದ ದುಃಖ ಮತ್ತು ಮೌನ. ಬೆಂಗಳೂರು ಮಾತ್ರವಲ್ಲ ಸುತ್ತಮುತ್ತಲಿನ ಜಿಲ್ಲೆಗಳ ಜನರು ಕೂಡ ಸೇರುತ್ತಲೇ ಇದ್ದರು. ಸಭಾಂಗಣ ಭರ್ತಿಯಾಗಿ ಕುರ್ಚಿಗಳು ಸಾಲದಾದವು. ಬಂದವರು ಇರುವ ಜಾಗದಲ್ಲೇ ಕಿಕ್ಕಿರಿದು ನಿಂತರು.

ಇತ್ತ ಬಿಇಎಲ್ ಕಾರ್ಖಾನೆಯಿಂದ ಅತ್ತ ಐಟಿಸಿ ಕಾರ್ಖಾನೆವರೆಗೆ, ಮತ್ತೊಂದೆಡೆ ಎಸ್ಕಾರ್ಟ್ ಕಾರ್ಖಾನೆಯಿಂದ ಹಿಡಿದು ಮೈಕೋ ಮತ್ತಿತರೆ ವಿವಿಧ ಕಾರ್ಖಾನೆಯ ಕಾರ್ಮಿಕರು ಮತ್ತು ಅಸಂಘಟಿತ ಆಟೋಚಾಲಕರು–ರಾಜ್ಯ ರಸ್ತೆ ಸಾರಿಗೆ ಕ್ಷೇತ್ರದಿಂದ ಹಿಡಿದು ಹಮಾಲಿಗಳ ವರೆಗಿನ ಅಸಂಘಟಿತ ಕಾರ್ಮಿಕರು, ಬಿಎಚ್‌ಇಎಲ್, ಎಚ್‌ಎಎಲ್ ಮತ್ತು ಬೆಲಾವಿಯ ಹಿಂದೂಸ್ಥಾನ ಲೆಟೆಕ್ಸ್ ನಂತಹ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಜೊತೆಗೆ ಬ್ಯಾಂಕ್, ವಿಮೆ, ದೂರಸಂಪರ್ಕ, ಕೇಂದ್ರ ಹಾಗೂ ರಾಜ್ಯ ಸರಕಾರಿ, ರೈಲ್ವೆ ಇವರ ಜೊತೆಗೆ ಅಂಗನವಾಡಿ, ಬಿಸಿಯೂಟ, ಕಟ್ಟಡ ಕಾರ್ಮಿಕರು, ಇವರಲ್ಲದೇ ಪ್ರಸನ್ನ ಅವರು ಅಪಾರವಾಗಿ ಪ್ರೀತಿಸಿದ ಎಡಚಳುವಳಿಯ ವಿದ್ಯಾರ್ಥಿ, ಯುವಜನ, ಮಹಿಳಾ ಚಳುವಳಿಯ ಸಂಗಾತಿಗಳು, ರೈತರು, ಕೃಷಿ ಕೂಲಿಕಾರರು, ದಲಿತ ಹಕ್ಕು ಸಮಿತಿಯ ಮುಖಂಡರು, ಕಾರ್ಯಕರ್ತರು, ಎಡಚಳುವಳಿಯ ಎಲ್ಲ ವಿಭಾಗದ ಸಂಗಾತಿಗಳು, ಎಡ ಚಳುವಳಿಯನ್ನೂ ಮೀರಿ ಕಾರ್ಮಿಕ ವರ್ಗದ ಹಿತದಲ್ಲಿ ಆಸಕ್ತಿಯುಳ್ಳ ಪ್ರಸನ್ನನನ ಆತ್ಮೀಯ ಗೆಳೆಯರ ಬಳಗ ಹೀಗೆ ಎಲ್ಲರೂ ಅಲ್ಲಿ ಸೇರಿದ್ದು ತಮ್ಮ ಬಹುಕಾಲದ ಒಡನಾಡಿ, ಹೋರಾಟದ ಗೆಳೆಯ ಪ್ರಸನ್ನಗೆ ಪ್ರೀತೀಯ ನುಡಿನಮನ ಹಾಗೂ ಭಾವಪೂರ್ಣ ನಮನ ಸಲ್ಲಿಸಲು.

'ಕಾಣದ ಕಡಲಿಗೆ ಹಂಬಲಿಸಿದೆ ಮನ' ಎಂಬ ಇಂದು ಕಾಣದಾಗಿರುವ ಪ್ರಸನ್ನ ಅವರ ನೆನಪಿಸಿ ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದ ಅವರು ಭಾವಪೂರ್ಣವಾಗಿ ಹಾಡಿದ ಹಾಡೊಂದು ನೆರೆದವರ ಮನವನ್ನು ಕಲಕಿತು.

ಸಿಐಟಿಯು ಮುಖಂಡರಾದ ಮೀನಾಕ್ಷೀ ಸುಂದರಂ ಪ್ರಸ್ತಾವಿಕವಾಗಿ ಮಾತನಾಡಿ ಕಾಂ. ಪ್ರಸನ್ನ ಕುಮಾರ್ ಅವರು ಇನ್ನಿಲ್ಲ ಎನ್ನುವ ವಾಸ್ತವವನ್ನು ಎಲ್ಲರಗೂ ಮನವರಿಕೆ ಮಾಡಿಕೊಟ್ಟು ಅವರ ಸಾವಿನ ಸಂದರ್ಭ, ಕಾಡಿದ ಸಕ್ಕರೆ ಕಾಯಿಲೆ ಮತ್ತು ಹೃದಯ ಸಂಬಂಧಿ ತೊಂದರೆಗಳ ಕುರಿತ ಅನಾರೋಗ್ಯದ ವಿವರ ನೀಡಿದರು. ಮತ್ತು ಚಳುವಳಿಗಾಗಿ ದುಡಿತ ಸಂಗಾತಿಗೆ ಚಳುವಳಿ ಮಾಡಬೇಕಾದ ಕರ್ತವ್ಯವನ್ನು ನೆನಪಿಸಿದರು. ಸಿಐಟಿಯು ರಾಜ್ಯಸಮಿತಿ ಸಂಘಟಿಸಿದ ಕಾರ್ಯಕ್ರದಲ್ಲಿ ಪ್ರಸನ್ನ ಅವರ ಪತ್ನಿ ಎಸ್.ಪಾರ್ವತಿ, ಮಕ್ಕಳಾದ ರಾಜು ಮತ್ತು ರವಿ ಮುಂತಾದ ಬಂಧುಗಳೂ ಹಾಜರಿದ್ದರು.

ನುಡಿನಮನಕ್ಕಾಗಿ ಆಗಮಿಸಿದ ಗಣ್ಯರು ಮತ್ತು ಅವರ ಕುಟುಂಬದವರು ವೇದಿಕೆ ಮೇಲಿಟ್ಟದ್ದ ಪ್ರಸನ್ನರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಸಿಐಟಿಯು ರಾಜ್ಯ ಸಮಿತಿಯಿಂದ ಪ್ರಕಟಿಸಿದ 'ಅಕಾಲದಲ್ಲಿ ಮೌನವಾದ ಕೆಂಪುಸಿರು' ಪುಸ್ತಕವನ್ನು ಬಿಡುಗಡೆ ಮಾಡಿದರು. ನಂತರ ಮೊದಲಿಗೆ ರಾಜ್ಯ ಕಾರ್ಮಿಕ ಆಯುಕ್ತರಾದ ಡಾ: ವಿಶ್ವನಾಥ್ ಮಾತನಾಡಿ ಪ್ರಸನ್ನ ಇಲಾಖೆಯ ವಿವಿಧ ಕಾರ್ಯಕ್ರಮಗಳ ಜಾರಿಗೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡುತ್ತಾ ಎಷ್ಟೋ ವಿಚಾರಗಳಲ್ಲಿ ನಮ್ಮ ಕಣ್ತೆರೆಸುತ್ತಿದ್ದರು ಅವರ ಅಕಾಲಿಕ ಸಾವು ಕಾರ್ಮಿಕ ಚಳವಳಿಗೆ ತುಂಬಾಲಾರದ ನಷ್ಟವಾಗಿದೆ ಎಂದು ವಿಷಾದಿಸಿದರು. ಬೆಂಗಳೂರು ವಿವಿಯ ಅಲಂಪಲ್ಲಿ ವೆಂಕಟರಾಂ ಕಾರ್ಮಿಕ ಅಧ್ಯಯನ ಕೇಂದ್ರದ ನಿರ್ದೇಶಕ ಡಾ: ನಾರಾಯಣ ಚೆಟ್ಟಿ ಮಾತನಾಡಿ ಟ್ರಸ್ಟ್ ಕೆಲಸಗಳಲ್ಲಿ ಮತ್ತು ಅದರ ಹಲವು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪ್ರಸನ್ನ ವಹಿಸುತ್ತಿದ್ದ ಕಾಳಜಿಯನ್ನು ಶ್ಲಾಘೀಸಿದ ಅವರು ಅತ್ಯಂತ ಸರಳವಾಗಿ ಬದುಕುವುದರ ಮೂಲಕ ಪ್ರಸನ್ನ ಎಲ್ಲರಿಗೂ ಆದರ್ಶವಾಗಿದ್ದಾರೆ ಎಂದರು.

ಸಿಐಟಿಯು ಅಖಿಲಭಾರತ ಪಧಾನ ಕಾರ್ಯದರ್ಶಿ ಹಾಗೂ ಸಂಸದರಾದ ಕಾಮ್ರೇಡ್ ತಪನ್ ಸೇನ್ ಅವರು ಮಾತನಾಡಿ ಕಾಂ. ಪ್ರಸನ್ನ ಕುಮಾರ್ ಅವರಂತಹ ಯುವ ಸಂಗಾತಿ, ದೇಶದ ಕಾರ್ಮಿಕ ಚಳುವಳಿಯ ಒಬ್ಬ ಸಮರ್ಥ ನಾಯಕ ತೀರಿಕೊಂಡಿದ್ದಾರೆ ಎಂಬ ಸುದ್ದಿ ಬಂದಾಗ ನಮಗೆಲ್ಲಾ ಅಘಾತವಾಯಿತು. ನಂಬಲು ಸಾಧ್ಯವಾಗಲಿಲ್ಲ. ಆ ಸುದ್ದಿ ಸುಳ್ಳಾಗಿರಲಿ ಎಂದು ಬಯಸಿದೆವು. ಆದರೆ ದುರದೃಷ್ಟವಶಾತ್ ಸುದ್ದಿ ನಿಜವೇ ಆಗಿತ್ತು. ಪ್ರಸನ್ನ ಅವರು ಕೇವಲ ಸಿಐಟಿಯು ಸಂಘಟನೆಯ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಮಾತ್ರವೇ ಆಗಿರಲಿಲ್ಲ. ಅಖಿಲ ಭಾರತ ಕಾರ್ಮಿಕ ಚಳುವಳಿಯಲ್ಲಿ ಕಾರ್ಮಿಕ ವರ್ಗದ ಹಿತಕ್ಕಾಗಿ ಸಮರ್ಥವಾಗಿ ಮಧ್ಯ ಪ್ರವೇಶಿಸುತ್ತಿದ್ದ ಅದಕ್ಕಾಗಿ ಹಗಲು ರಾತ್ರಿ ಎನ್ನದೇ ಸಮರ್ಪಿಸಿಕೊಂಡಿದ್ದ ಸಮರ್ಪಿತ ಕ್ರಾಂತಿಕಾರಿಯಾಗಿದ್ದರು. ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಕಾರ್ಮಿಕ ವರ್ಗವನ್ನು ಮತ್ತು ಸಿಐಟಿಯುವನ್ನು ಸಮರ್ಥವಾಗಿ ಪ್ರತಿನಿಧಿಸಿದ ಮುಖಂಡರಾಗಿದ್ದರು. ನನ್ನಂತಹ ಹಿರಿಯ ವಯಸ್ಸಿನ ವ್ಯಕ್ತಿ ಪ್ರಸನ್ನರಂತಹ ಕಿರಿಯ ವಯಸ್ಸಿನ ಮುಖಂಡರ ಸಾವನ್ನು ನೋಡುವುದು ಬಹಳ ನೋವಿನ ವಿಷಯ ಎಂದರು. ಪ್ರಸನ್ನ ಅವರು ಇಲ್ಲದಿದ್ದರೂ ಅವರ ಕೊಡುಗೆ, ಅವರು ಕೊಟ್ಟ ಸ್ಫೂರ್ತಿ, ಅವರು ಹಾಕಿಕೊಟ್ಟ ಮಾದರಿ ಇದೆ. ಆ ದಾರಿಯಲ್ಲಿ ಸಾಗಿ ಸಾಮೂಹಿಕವಾಗಿ ಆ ಸ್ಥಾನವನ್ನು ತುಂಬಬೇಕು. ಇದೇ ಪ್ರಸನ್ನ ಅವರಿಗೆ ನೀಡುವ ನಿಜವಾದ ಶ್ರದ್ಧಾಂಜಲಿ ಎಂದರು.

ಸಂಡೂರು ಕ್ಷೇತ್ರದ ಮಾಜಿ ಶಾಸಕರಾದ ಭೂಪತಿಯವರು ಮಾತನಾಡಿ ಪ್ರಸನ್ನ ಒಬ್ಬ ಧೀಮಂತ, ಸಮರ್ಥ ಕಾರ್ಮಿಕ ನಾಯಕರಾಗಿದ್ದರು. ಅವರ ಸಾವು ಸಿಐಟಿಯುವಿಗೆ ಮಾತ್ರವಲ್ಲ ಕಾರ್ಮಿಕ ಚಳುವಳಿಗೆ ನಷ್ಟ ಎಂದರು. ಎಡಪಂಥೀಯ ನಾಯಕರು, ಕಾರ್ಮಿಕ ನಾಯಕರು ಕಾರ್ಮಿಕರ ಹಿತಕ್ಕಾಗಿ ತಮ್ಮ ವೈಯುಕ್ತಿಕ ಹಿತಾಸಕ್ತಿ ಲೆಕ್ಕಿಸದೇ ನಿಸ್ವಾರ್ಥದಿಂದ ತಮ್ಮ ಆರೋಗ್ಯವನ್ನು ಸಹ ಲೆಕ್ಕಿಸದೇ ದುಡಿಯುತ್ತಾರೆ. ಬಳ್ಳಾರಿಯಲ್ಲಿ ಪ್ರಸನ್ನ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲಿಂದಲೂ ಹೀಗೆ. ಸಾಮಾಜಿಕ ಹಿತಕ್ಕಾಗಿ ಹಗಲು ಇರುಳು ದುಡಿದ ವ್ಯಕ್ತಿ ಎಂದರು.

ಸಚಿವಾಲಯ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಮಹದೇವಯ್ಯ ಮಠಪತಿಯವರು ಮಾತನಾಡಿ, ಕಾರ್ಮಿಕ ಚಳುವಳಿಗೂ ಸರಕಾರಿ ನೌಕರರ ಸಂಘ ಎತ್ತಣಿಂದ ಎತ್ತ ಸಂಬಂಧ ಎಂಬಂತೆ ಹಲವಾರು ಕಡೆ ಇರುತ್ತದೆ. ಆದರೆ ಕರ್ನಾಟಕದಲ್ಲಿ ಸರಕಾರಿ ನೌಕರರ ಒಕ್ಕೂಟವು ಪ್ರಸನ್ನ ಅವರೊಂದಿಗೆ ನಿರಂತರ ಸಂಪರ್ಕ ಇರಿಸಿಕೊಂಡು ಮಾರ್ಗದರ್ಶನ ಪಡೆದುಕೊಳ್ಳುತ್ತಿತ್ತು. ಅವರು ಸರಕಾರ ನೌಕರರಿಗೆ ಸಂಬಂಧಿದ ಸರಕಾರ ನೀತಿಗಳನ್ನು, ಕಾರ್ಮಿಕ ಕಾನೂನುಗಳನ್ನು ಆಳವಾಗಿ ಅಧ್ಯಯನ ಮಾಡುತ್ತಿದ್ದರು. ನಮ್ಮನ್ನು ಎಚ್ಚರಿಸುತ್ತಿದ್ದರು. ಕೇಂದ್ರ ಸರಕಾರದ ಪಿಂಚಣಿ ಕಾಯ್ದೆ ವಿಷಯದಲ್ಲಿ ಪ್ರಸನ್ನ ಒಂದು ಕಿರು ಪುಸ್ತಕವನ್ನೇ ಬರೆದರು. ಇಂದು ಸರಕಾರ ನೌಕರರು ಒಬ್ಬ ಉತ್ತಮ ಮಾರ್ಗದರ್ಶಕನನ್ನು ಕಳೆದುಕೊಂಡಿದೆ ಎಂದರು. ಪ್ರಸನ್ನ ಅವರು ಕಾರ್ಮಿಕ ಚಳುವಳಿಯ ಪ್ರಶ್ನೆಗಳಲ್ಲದೇ ಇತರ ಮಾನವೀಯ ಸಂಬಂಧಗಳ ಪ್ರಶ್ನೆಯಲ್ಲೂ ಉತ್ತಮ ಸಂಗಾತಿಯಾಗಿದ್ದರು ಎಂದರು.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ ಪ್ರಸನ್ನ ಅವರು ಸಿಪಿಐ(ಎಂ) ಪಕ್ಷದಲ್ಲಿ ನನ್ನ ಒಡನಾಡಿಯಾಗಿದ್ದರು. ದೇಶದಲ್ಲಿ ಇಂದು ರಾಜಕೀಯ ಸ್ಥಿತಿ ವಿಷಮಗೊಳ್ಳುತ್ತಿದೆ. ಕೋಮುವಾದಿ ಬಲಪಂಥೀಯ ಶಕ್ತಿಗಳು ಪ್ರಜಾಪ್ರಭುತ್ವಕ್ಕೆ, ಜಾತ್ಯತೀತೆ–ಗೆ ಧಕ್ಕೆ ತರುತ್ತಿದ್ದಾರೆ. ಪ್ರಸನ್ನ ಈ ಅಪಾಯವನ್ನು ಅರಿತು ಕಾರ್ಮಿಕ ವರ್ಗವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದರು. ಇಂದು ಅವರು ನಮ್ಮೊಂದಿಗಿಲ್ಲ. ಸಾಮಾಹಿಕವಾಗಿ ನಾವು ಕೆಲಸ ಮಾಡುವ ಮೂಲಕ ಗುರಿಯನ್ನೂ ಈಡೇರಿಸುವುದೇ ಪ್ರಸನ್ನ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ ಎಂದರು. ರಾಜ್ಯ ಕನಿಷ್ಠ

ಪುಟ 14 ಕ್ಕೆ

ಹೆಚ್.ಆರ್. ನವೀನ್‌ಕುಮಾರ್





ಆನೇಕಲ್ ಸಮೀಪದ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದು ಇತ್ತೀಚಿಗೆ ಅಕಾಲಿಕವಾಗಿ ನಿಧನರಾದ ಕಾಂ॥ಪ್ರಸನ್ನಕುಮಾರ್ ರವರ ಹೆಸರಿನಲ್ಲಿ ನಿರ್ಮಾಣ ಮಾಡಲಾಗುವ 'ಕಾರ್ಮಿಕ ರೈತರ ಚಳವಳಿ ಕೇಂದ್ರ'ಕ್ಕೆ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ದರ್ಶಿ ಹಾಗೂ ರಾಜ್ಯ ಸಭಾ ಸದಸ್ಯರಾದ ಕಾಂ॥ತಪನ್ ಸೇನ್ ರವರು ಶಿಲಾನ್ಯಾಸ ನೇರವೇರಿಸಿದರು. ಈ ಭವನಕ್ಕೆ ಕಮ್ಯೂನಿಸ್ಟ್ ಚಳವಳಿಯಲ್ಲಿ ತಮ್ಮ ಬದುಕು ಆರಂಭಿಸಿದ ಬಣ್ಣ ಶ್ರೀನಿವಾಸ ತಮ್ಮ ಜಾಗವನ್ನು ಕಡಿಮೆ ದರದಲ್ಲಿ ನೀಡಿದ್ದಾರೆ ಮತ್ತು ಸೆನ್‌ಸೆರಾ ಕಾರ್ಮಿಕ ಸಂಘ ಮತ್ತು ಇತರೆ ಸಂಘಗಳು ನಿವೇಶನ ಖರೀದಿಗೆ ಹಣ ನೀಡಿವೆ. 2500 ಚ.ಮೀ. ಜಾಗದಲ್ಲಿ ಒಂದು ವರ್ಷದ ಅವಧಿಯಲ್ಲಿ ಭವನ ನಿರ್ಮಿಸುವ ಪಣವನ್ನು ಇಲ್ಲಿನ ಸಂಗಾತಿಗಳು ಮಾಡಿದ್ದಾರೆ.

ಈ ಕಾರ್ಯಕ್ರಮಕ್ಕೆ ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಸಿಐಟಿಯು ಮುಖಂಡರಾದ ಕೆ.ಪ್ರಕಾಶ್, ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಎಐಟಿಯುಸಿ ಅಖಿಲ ಭಾರತ ಉಪಾಧ್ಯಕ್ಷರಾದ ಕಾಂ॥ಮಹದೇವನ್, ಸಿಐಟಿಯ ಬೆಂ. ದಕ್ಷಿಣ ಜಿಲ್ಲಾ ಮುಖಂಡರಾದ ಎನ್.ರಾಜಣ್ಣ, ಬಿ.ಎನ್.ಮಂಜುನಾಥ್, ಪ್ರಸನ್ನಕುಮಾರ್‌ರವರ ಪತ್ನಿ ಪಾರ್ವತಿ ಮತ್ತು ಮಕ್ಕಳು ಸೇರಿದಂತೆ ನೂರಾರು ಕಾರ್ಮಿಕರು ಭಾಗವಹಿಸಿದ್ದರು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**